# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಮೇ, ೨೦೧೬ ಸಂಪಾದಕ : ಡಿ.ಎಸ್.ನಾಗಭೂಷಣ ಸಂಪುಟ: ೫ ಸಂಚಿಕೆ: ೧೦

**ಬೆಲೆ:** ಬಿಡಿ ಪ್ರತಿ: ರೂ. ೨೦/– ಪುಟ: ೨೦

**ವಿಳಾಸ:** ಎಚ್.ಐ.ಜಿ–೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ–೫೭೭ ೨೦೪

**ದೂ:** ೦೮೧೮೨–೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಈ ಬಾರಿ ನಾನು ಯಾವುದೇ ಸರ್ಕಾರದ ಬಗ್ಗೆ ಬರೆಯುವುದಿಲ್ಲ. ಜನರ ಬಗ್ಗೆ, ಅಂದರೆ ನಮ್ಮ ಬಗ್ಗೆಯೇ ಬರೆಯುವೆ. ಬರೆಯಲೇಬೇಕೆನಿಸಿದೆ. ಏಕೆಂಬುದನ್ನು ನನ್ನ ಮುಂದಿನ ಮಾತುಗಳೇ ಹೇಳುತ್ತವೆ.

ಕೆಲ ದಿನಗಳ ಹಿಂದೆ ತೆಲಂಗಾಣಾದ ಒಬ್ಬ ರೈತ ತನ್ನಲ್ಲಿ ಉಳಿದಿದ್ದ ನಲವತ್ತು ರೂಪಾಯಿಗಳನ್ನು ತನ್ನ ಹೆಂಡತಿಗೆ 'ಇಷ್ಟೇ ನನ್ನಲ್ಲಿರುವುದು, ಜೋಪಾನ!' ಎಂದು ಕೊಟ್ಟು ಒಂದು ವರ್ಷದ ಮಗುವಿರುವ ಆಕೆಯನ್ನು ತೊರೆದು ಆತ್ಮಹತ್ಯೆ ಮಾಡಿಕೊಂಡ. ಈ ಸುದ್ದಿಯನ್ನು ಹಿಂದಿನ ರಾತ್ರಿ ಟಿವಿಯಲ್ಲಿ ನೋಡಿ ಸಹಜವಾಗಿಯೇ ತಲ್ಲಣಗೊಂಡಿದ್ದಂತೆ ಕಂಡ ನನ್ನ ಗೆಳೆಯನೊಬ್ಬ ಮಾರನೇ ದಿನದ ಗೆಳೆಯರ ಗೋಷ್ಠಿಯಲ್ಲಿ ಇದನ್ನು ಹೇಳುತ್ತಾ, ತಾನು ನಿಂತಲ್ಲಿಂದಲೇ ಎಗರಿ ಎಗರಿ ಕೂಗಾಡತೊಡಗಿದ್ದ. ಯಾರೋ ಒಬ್ಬ ವಿಶ್ವವಿದ್ಯಾಲಯದ ಬುದ್ಧಿಜೀವಿ ಪ್ರಾಧ್ಯಾಪಕರೊಬ್ಬರು ದಿನಪತ್ರಿಕೆಯೊಂದರಲ್ಲಿ ಬರೆದಿದ್ದ ಅಂಕಣ ಬರಹವೊಂದರ ಸ್ಫೂರ್ತಿಯಲ್ಲಿ ಈ ಗೆಳೆಯ–ಈತನೂ ಕಾಲೇಜು ಅಧ್ಯಾಪಕನೇ–ಅಮೆರಿಕಾದ ಸಾಮ್ರಾಜ್ಯಶಾಹಿ ತನ್ನ ವಿಶ್ವ ಬ್ಯಾಂಕ್ ರಾಜಕಾರಣದ ಮೂಲಕ ಜಾರಿಗೆ ತಂದ ಆರ್ಥಿಕ ಉದಾರೀಕರಣವೇ ಇಂತಹ ರೈತರ ಆತ್ಮಹತ್ಯೆಗಳಿಗೆ ಕಾರಣ ಎಂದು ಘೋಷಿಸುತ್ತಾ, ಮುಂದಿನ ಅಮೆರಿಕಾದ ಚುನಾವಣೆಗಳಲ್ಲಿ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಟ್ರಂಪ್ ಏನಾದರೂ ಗೆದ್ದುಬಿಟ್ಟರೆ ಭಾರತದ ಕಥೆ ಮುಗಿದಂತೆಯೇ ಎಂದು ಅಂದಿನ ಗೋಷ್ಠಿಗೆ ತನ್ನ ಅಂತಿಮ ಎಚ್ಚರಿಕೆಯನ್ನೂ ನೀಡಿದ. ಬಹುಶಃ ಅಂದಿನ ಬೆಳಗಿನ ದಿನಪತ್ರಿಕೆಯೊಂದನ್ನು ಓದಿ ಬಂದಿದ್ದ.

ಟಿವಿ ನೋಡಿ ಪತ್ರಿಕೆಗಳನ್ನು ಓದಿ ಜಗತ್ತಿನ ಬಗ್ಗೆ ಅಂದಿಗೆ ಚರ್ಚೆ ಮಾಡಿ ಮುಗಿಸಿ ಮುಂದಿನ ದಿನ ಮತ್ತೆ ಹಾಗೇ ಮತ್ತೊಂದು ವಿಷಯ ಚರ್ಚೆಗೆ ತೆಗೆದುಕೊಳ್ಳುವ ಈ 'ಪ್ರಗತಿಪರ' ಗೆಳೆಯರಿಗೆ ಇಂತಹ ಚರ್ಚೆಗಳೆಲ್ಲ ಕಾಲಕ್ಷೇಪದ ವಿಷಯಗಳಷ್ಟೇ ಆಗಿರುವುದನ್ನು ಗಮನಿಸಿದ್ದ ನಾನು ಆ ಗೆಳೆಯನನ್ನು ಕೇಳಿದೆ: 'ನೀನು ಪ್ರತಿ ತಿಂಗಳೂ ಝಣ ಝಣ ಎಣಿಸಿಕೊಳ್ಳುತ್ತಿರುವ ಹತ್ತಿರ ಹತ್ತಿರ ಲಕ್ಷ ರೂಪಾಯಿಗಳ ಸಂಬಳ ಕೂಡ ಹೊಸ ಆರ್ಥಿಕ ಉದಾರೀಕರಣ ನೀತಿಯ ಫಲವೇ ಅಲ್ಲವೆ? ಅದನ್ನು ಅನುಭವಿಸುತ್ತಿರುವ ನೀನೂ. ನಿನ್ನ ಕುಟುಂಬವೂ ರೈತರ ಆತ್ಮಹತ್ಯೆಗೆ ಬಾಧ್ಯಸ್ಥರಲ್ಲವೇ?'

ಒಂದು ನಿಮಿಷ ಗೆಳೆಯರ ಗುಂಪಲ್ಲಿ ಮೌನ ಆವರಿಸಿತು. ಆ ಗುಂಪಲ್ಲಿ ಇನ್ನೂ ಒಂದಿಬ್ಬರು ನಿವೃತ್ತ ಅಧ್ಯಾಪಕ ಗೆಳೆಯರಿದ್ದರು. ಅವರು ಆ ಮುನ್ನ ಯುಜಿಸಿ ಶ್ರೇಣಿ ವೇತನ ಜಾರಿ ಸಂಬಂಧ ತಮಗಿನ್ನೂ ಅದೆಷ್ಟೋ ಲಕ್ಷ ರೂಪಾಯಿಗಳ ಬಾಕಿ ಇರಿಸಿಕೊಂಡಿರುವ ಸಿದ್ದರಾಮಯ್ಯನವರ ಸರ್ಕಾರವನ್ನು ಶಪಿಸಿದ್ದರು. ಅವರಿಗೂ ಈಗ ಮುಳ್ಳು ನಾಟಿದಂತಾಗಿ 'ಸರ್ಕಾರದ ತೀರ್ಮಾನ ಇದು. ನಾವೇನು ಮಾಡುವುದು! ಮೊನ್ನೆ ಶಾಸಕರು–ಮಂತ್ರಿಗಳೆಲ್ಲ ತಮ್ಮ ಸಂಬಳ–ಸಾರಿಗೆಗಳನ್ನು ಎರಡು–ಮೂರು ಪಟ್ಟು ಹೆಚ್ಚಿಸಿಕೊಳ್ಳಲಿಲ್ಲವೆ? ಅದರ ಬಗ್ಗೆ ನಿಮ್ಮಂಥವರೇಕೆ ಮಾತಾಡುವುದಿಲ್ಲ? ಎಂದು ನನ್ನ ಮೇಲೇ ತಿರುಗಿಬಿದ್ದರು!

ನಾನು ಹೇಳಿದೆ, 'ರೈತರ ಆತ್ಮಹತ್ಯೆಗೆ ಮರುಗಿ ಮಾತು ಶುರು ಮಾಡಿದವರು ನೀವು. ಹಾಗೆ ಮರುಕಪಡುವ ನೈತಿಕ ಹಕ್ಕು ನಿಮಗಿಲ್ಲ ಎಂದಷ್ಟೇ ನಾನು ಹೇಳುತ್ತಿರುವುದು.'

ಚರ್ಚೆ ಶುರು ಮಾಡಿದ ಗೆಳೆಯನಿಗೆ ಇದರಿಂದ ರೇಗಿ ಹೋದಂತಾಗಿ, 'ಸ್ವಾಮಿ, ಕಾಲೇಜು ಮೇಷ್ಟುಗಳಿಗಷ್ಟೇ ಅಲ್ಲ, ಇವೊತ್ತು ಸರ್ಕಾರಿ ನೌಕರರ ಸಂಬಳ ಎಷ್ಟು ಆಗಿದೆ ನೋಡಿ!' ಎಂದು ಹೊಸ ವರಸೆ ಶುರು ಮಾಡಿದ. ಅದಕ್ಕೆ ಇನ್ನೊಬ್ಬ ಗೆಳೆಯ ಸೇರಿಸಿದ: 'ಈಗ ಜೂನಿಯರ್ ಕಾಲೇಜು ಮೇಷ್ಟ್ರುಗಳು ಈಗ ಕೊಡುತ್ತಿರುವುದು ಸಾಲದೆಂದು ಇನ್ನಷ್ಟು ಸಂಬಳ ಕೇಳಿ ಮುಷ್ಕರ ಮಾಡುತ್ತಿದ್ದಾರಲ್ಲ? ಅದಕ್ಕೇನು ಹೇಳುತ್ತೀರಿ?'

'ಅಂತೂ ಎಲ್ಲ ಸೇರಿ ರೈತರ ಕತೆ ಮುಗಿಸುತ್ತಿದ್ದೇವೆ!', ನಾನೆಂದೆ.

'ಅದ್ಯಾಕೆ ಹಾಗೆ ಹೇಳಿ ನಮ್ಮೆಲ್ಲರ ತಲೆ ಮೇಲೆ ಗೂಬೆ ಕೂರಿಸ್ತೀರಿ! ನಾನೂ ರೈತನೇ ಕಣ್ರೀ. ನನಗೂ ಐದೆಕರೆ ಅಡಿಕೆ ತೋಟ ಇದೆ. ನಾನೇನು ಆತ್ಮಹತ್ಯೆ ಮಾಡಿಕೊಂಡಿದ್ದೀನಾ?' ಎಂದು ಸಿಡಿಮಿಡಿಗೊಂಡ, ಅಮೆರಿಕಾವನ್ನು ದೂಷಿಸಿ ಚರ್ಚೆ ಶುರು ಮಾಡಿದ್ದ ಗೆಳೆಯ. ಆತನಿಗೆ ತಾನೇನು ಮಾತನಾಡುತ್ತಿದ್ದೇನೆಂಬ ಪರಿವೆಯೇ ಇದ್ದಂತಿರಲಿಲ್ಲ.

ಈತನಿಗೆ ನೇರವಾಗಿ ನಾನು ಹೇಳಿದೆ, 'ಆಯ್ತು ಎಲ್ಲ ರೈತರಿಗೂ ಒಂದು ಯುಜಿಸಿ ಸ್ಕೇಲ್ ಕೊಡಿಸಿಬಿಡಿ! ಯಾರೂ ಆತ್ಮಹತ್ಯೆ ಮಾಡಿಕೊಳ್ಳಲ್ಲ!'

ಈ ವ್ಯಂಗ್ಯ ಅವನನ್ನು ನಾಟಿದಂತೆ ಕಂಡಿತು. ಆತನಿಗೆ ಏನೂ ತೋಚದೆ ನಿಮಗೆ ನಮ್ಮ ಸಂಬಳಗಳ ಮೇಲೇ ಕಣ್ಣು. ಇದು ಬರೀ ಮತ್ಸರ' ಎಂದ.

'ಇದು ನಿಮ್ಮ ಸಂಬಳಗಳ ಪ್ರಶ್ನೆ ಮಾತ್ರವಲ್ಲ. ನೀವೇ ಹೇಳಿದ ಹಾಗೆ ಸರ್ಕಾರಿ ನೌಕರರ ಸಂಬಳಗಳೆಲ್ಲವೂ ಹೆಚ್ಚೂ ಕಡಿಮೆ ಹಾಗೇ ಇದೆ. ಹಾಗಿರುವಾಗ ಇವೊತ್ತು ಜನ ಯಾಕೆ ಮತ್ಸರ ಪಡಬಾರದು ಹೇಳಿ. ಒಟ್ಟಾರೆ ಯೋಚನೆ ಮಾಡಿದಾಗ ಮತ್ಸರ ಮಾತ್ರವಲ್ಲ, ಸಿಟ್ಟೇ ಬರುತ್ತದೆ. ಎಷ್ಟು ರಾಜ್ಯಗಳಲ್ಲಿ ಕಾಲೇಜು ಮೇಷ್ಟ್ರುಗಳಿಗೆ ಈ ಸಂಬಳ ಇದೆ? ಈ ಸಂಬಳ ಈ ರಾಜ್ಯದಲ್ಲಿ ಏಕೆ, ಹೇಗೆ ಜಾರಿಗೆ ಬಂತು ಎಂಬುದು ಎಲ್ಲರಿಗೂ ಗೊತ್ತಿದೆ... ಇದರಿಂದ ಇಂದು ಕಾಲೇಜು ಶಿಕ್ಷಣ ಏನಾಗಿದೆ ನೋಡಿ. ನಿಮ್ಮ ಸಂಬಳ ಹೆಚ್ಚಾದಷ್ಟೂ ಅದರ ಗುಣಮಟ್ಟ ಕಡಿಮೆಯಾಗ್ತಾ ಇದೆ. ಇಡೀ ಪದವಿ ಶಿಕ್ಷಣ ಇವೊತ್ತು ಸಂಖ್ಯೆಯಲ್ಲಿ ನಿಮಗಿಂತ ನಾಲ್ಕುಪಟ್ಟು ಜಾಸ್ತಿ ಇರುವ ಅತಿಥಿ ಉಪನ್ಯಾಸಕರ ಕೈಗೆ ಹೋಗಿದೆ. ಅವರನ್ನು ನಿಮ್ಮ ಸಂಬಳದ ಹತ್ತನೇ ಒಂದು ಭಾಗ ಕೊಟ್ಟು ದುಡಿಸಿಕೊಳ್ಳುತ್ತಿದ್ದಾರೆ. ಇಂತಹ ಗತಿ ಏಕೆ ಬಂದಿದೆ ಗೊತ್ತೆ? ನಿಮಗೆ ಸಂಬಳ ಕೊಟ್ಟು ಕಾಲೇಜು ಶಿಕ್ಷಣ ಇಲಾಖೆಗೆ ಪೂರೈಸಲಾಗುತ್ತಿಲ್ಲ. ಖಾಲಿ ಇರುವ ಕಾಲುಭಾಗ ಹುದ್ದೆಗಳನ್ನು ತುಂಬಲೂ ಅವರಲ್ಲಿ ಹಣವಿಲ್ಲದಾಗಿದೆ!'

'ಅಂತೂ ನಮ್ಮ ವಿರುದ್ಧ ದೊಡ್ಡ ಸಾಕ್ಷ್ಯವನ್ನೇ ಕಲೆ ಹಾಕಿದ್ದೀರಿ. ಸರಿ ಬಿಡಿ' ಎಂದು ಮುಂದೇನೂ ತೋಚದೆ ಮಾತು ಮುಗಿಸಿದ ಗೆಳೆಯ.

ಆದರೆ ನಾನು, ಇಷ್ಟೆಲ್ಲ ಹೇಳಿದರೂ ನನ್ನ ಮಾತುಗಳನ್ನು ಆತ ತನ್ನ ವಿರುದ್ಧದ ಮತ್ಸರ ಎಂದೇ ಭಾವಿಸಿಕೊಳ್ಳಲು ಕಾರಣವೇನು ಎಂದು ಯೋಚಿಸಿದೆ. ಇಂದು ಸರ್ಕಾರಿ ಕಛೇರಿಗಳಲ್ಲಿ ಅರ್ಧಕ್ಕರ್ಧ ಹುದ್ದೆಗಳು ಖಾಲಿ ಇವೆ. ಅವನ್ನು ತುಂಬದೆ ಹಾಗೇ ಬಿಡಲಾಗಿದೆ ಅಥವಾ ಕೆಲವನ್ನು ನೌಕರರಿಗೆ ಕೊಡುವ ಕಾಲುಭಾಗದಷ್ಟು ಸಂಬಳ ಪಡೆಯುವ 'ಕರಾರು' ಕೆಲಸಗಾರರಿಂದ ತುಂಬಲಾಗುತ್ತಿದೆ. ಆದುದರಿಂದ ಅಲ್ಲಿ ಅದಕ್ಷತೆ–ಅಶಾಂತಿ ತಾಂಡವವಾಡುತ್ತಿದೆ. ಹೀಗೆ ಇಂದು ಸಾರ್ವಜನಿಕವಾಗಿ ಒಂದೇ ಜವಾಬ್ದಾರಿ ಕೆಲಸಕ್ಕೆ ವಿಪರೀತ ವ್ಯತ್ಯಾಸಗಳಿರುವ ಪ್ರತಿಫಲ ಪಡೆಯುವ ಎರಡು–ಮೂರು ವರ್ಗಗಳು ಸೃಷ್ಟಿಯಾಗಿವೆ. ಇದು ಸರ್ಕಾರ ಮಾಡಿದ ವಿಕೃತಿಯೆಂದೂ ಇದರಲ್ಲಿ ತನ್ನದೇನೂ ಪಾಲಿಲ್ಲವೆಂದೂ

ನಮ್ಮ ಈ ನವ ಮಧ್ಯಮ ವರ್ಗದ ಗೆಳೆಯರು ಭಾವಿಸಿದ್ದಾರೆ. ಹಾಗಾಗಿಯೇ ಅವರು ಜಗತ್ತಿನ, ಸಮಾಜದ, ಸಮಕಾಲೀನ ರಾಜಕಾರಣದ ವಿಮರ್ಶೆ ತಮ್ಮ ನೈತಿಕ ಹಕ್ಕು ಎಂದು ಭಾವಿಸಿದ್ದಾರೆ. ಮಾರ್ಕ್ಸ್–ಗಾಂಧಿ–ಅಂಬೇಡ್ಕರ್–ಲೋಹಿಯಾರ ಅಣಿಮುತ್ತುಗಳು ಅವರ ಬಾಯಿಗಳಿಂದ ಅಲ್ಲಲ್ಲಿ ಆಗಾಗ್ಗೆ ಉದುರುತ್ತಲೇ ಇರುತ್ತವೆ.

ಈ ವರ್ಗ ಈ ನಮ್ಮ ಗೆಳೆಯರಿಗೇ ಸೀಮಿತವಾಗದೆ ದೇಶಾದ್ಯಂತ ಹರಡಿದೆ. ಅವರು ಅದಾನಿ–ಅಂಬಾನಿಗಳನ್ನು ಅವರ ನಿರ್ಲಜ್ಜ ಬಂಡವಾಳಶಾಹಿಗಾಗಿ, ನಾರಾಯಣಮೂರ್ತಿ–ಅಜೀಂ ಪ್ರೇಂಜೀಗಳನ್ನು ಅವರ ಲಾಭಕೋರತನಕ್ಕಾಗಿ ಶಪಿಸುತ್ತಾರೆ. ಸಂಘ ಪರಿವಾರದ ಪ್ರಭಾವ ಬೆಳೆಯುತ್ತಿರುವುದರ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾರೆ. ಮರ್ಯಾದೆಗೇಡು ಹತ್ಯೆಗಳನ್ನು ಖಂಡಿಸುತ್ತಾರೆ. ಸಿಗರನಹಳ್ಳಿಯ ಜಾತೀಯ ಪ್ರಕರಣದ ಬಗ್ಗೆ ಹೌಹಾರುತ್ತಾರೆ. ದೂರದ ಬಸ್ತರ್‌ನ ಆದಿವಾಸಿಗಳ ಹೋರಾಟಕ್ಕೆ ಇಲ್ಲಿಂದಲೇ ಸಹಾನುಭೂತಿ ವ್ಯಕ್ತಪಡಿಸುತ್ತಾರೆ ಬಿಸಿಲು ತಾಳಲಾರದೆ, ಪರಿಸರ ನಾಶವನ್ನಾಧರಿಸಿದ ಅಭಿವೃದ್ಧಿ ಮಾದರಿಯ ಬೌದ್ಧಿಕ ವಿಶ್ಲೇಷಣೆಯನ್ನೂ ಮಾಡುತ್ತಾರೆ. ರಸ್ತೆಯಲ್ಲಿ ಆಕಸ್ಮಿಕಕ್ಕೆ ಸಿಕ್ಕಿ ರಕ್ತ ಸುರಿಸುತ್ತಾ ಬಿದ್ದಿರುವ ಜನರನ್ನು ಯಾರೂ ಎತ್ತಿ ಆಸ್ಪತ್ರೆಗೆ ಸಾಗಿಸದಂತಹ ಅಮಾನವೀಯತೆ ಏಕೆ ಬೆಳೆದಿದೆ ಎಂದೂ ಕೇಳುತ್ತಾರೆ.

ಇವರು ಹೀಗೆ ಎಲ್ಲ ಸರಿಯಾಗಿಯೇ ಯೋಚಿಸುತ್ತಾರೆ, ಆದರೆ ಒಂದು ವಿಷಯ ಬಿಟ್ಟು. ಅದೆಂದರೆ, ಈ ಸಾರ್ವತ್ರಿಕ ಅವನತಿಗೆ ಕಾರಣವಾಗಿರುವ, ಸಮಾಜವನ್ನು ಮೂರು ನಾಲ್ಕು ಸಂಪೂರ್ಣ ಪ್ರತ್ಯೇಕ ವಿಭಾಗಗಳನ್ನಾಗಿ ಒಡೆದು ನಮ್ಮ ಸಂವೇದನಾಶೀಲತೆಯನ್ನೇ ನಾಶ ಮಾಡಿರುವ ಹೊಸ ಆರ್ಥಿಕ ವ್ಯವಸ್ಥೆಯ ಲಾಭ ಪಡೆದಿರುವವರಲ್ಲಿ ನಾವೂ ಸೇರಿದ್ದೇವೆ ಅಲ್ಲವೆ ಎಂಬ ಯೋಚನೆ. ಯಾವ ಅದಾನಿ–ಅಂಬಾನಿಗಳನ್ನು ಪೋಷಿಸುತ್ತಿದೆಯೆಂದು ನಾವು ಹೇಳುತ್ತಿದ್ದೇವೋ ಆ ವ್ಯವಸ್ಥೆಯ ಫಲಾನುಭವಿಗಳು ಮತ್ತು ಪಾಲುದಾರರು ನಾವೂ ಆಗಿದ್ದೇವೆ ಎಂಬ ಅರಿವೇ ನಮ್ಮ ಬಳಿ ಸುಳಿಯದಾಗಿದೆ. ಎಲ್ಲ ಹೊಸ ಸುಖಗಳ ವ್ಯವಸ್ಥೆಗೆ ಮನುಷ್ಯ ಸಹಜ ಹಕ್ಕುದಾರನೇ ಆಗಿದ್ದಾನೆ ಎಂಬ ಹಕ್ಕಿನ ಆಧುನಿಕ ಪ್ರಜ್ಞೆಯೇ ನಮ್ಮ 'ಪ್ರಗತಿಪರ' ಚಿಂತನೆಯ ಜೀವಾಳವಾಗಿಬಿಟ್ಟಿದೆ, ಹಾಗಾಗಿಯೇ ಇವರು ತಮ್ಮನ್ನು ಬಿಟ್ಟು ಇನ್ನೆಲ್ಲರ ಬಗ್ಗೆ ಮಾತಾಡುತ್ತಾರೆ. ಇಂದಿನ ಸಾಮಾಜಿಕ ಅಸ್ವಸ್ಥತೆಗೆ ಯಾವುದೋ ದೂರದ ಅಮೆರಿಕಾದ ಸಾಮ್ರಾಜ್ಯಶಾಹಿಯಲ್ಲಿ ಕಾರಣಗಳನ್ನು ಹುಡುಕಿ ಹೇಳುತ್ತಾ ತಮ್ಮ ಸುಖಗಳಿಗೆ ಕಿಂಚಿತ್ತೂ ಚ್ಯುತಿಯಾಗದಂತೆ ಎಚ್ಚರಿಕೆ ವಹಿಸಿಕೊಂಡಿದ್ದಾರೆ. ಜನ ಸುಮ್ಮನೆ ನೋಡುತ್ತಿದ್ದಾರೆ....

**–ಸಂಪಾದಕ**

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಏಪ್ರಿಲ್ ಸಂಚಿಕೆ ಕುರಿತು ಒಂದೆರಡು ಅನಿಸಿಕೆಗಳು. ನಿಮ್ಮ ಸಂಪಾದಕೀಯ ಟಿಪ್ಪಣಿಗಳು ಎಂದಿನಂತೆ ಹಲವು ಕಟು ಸತ್ಯಗಳನ್ನು ನೇರವಾಗಿ ಮತ್ತು ನಿರ್ದಾಕ್ಷಿಣ್ಯವಾಗಿ ವ್ಯಕ್ತಪಡಿಸುತ್ತವೆ. ಮಾಧ್ಯಮಗಳು, ಅದರಲ್ಲೂ ಟೆಲಿವಿಷನ್ ಮಾಧ್ಯಮ, ಹೀರೋಗಳನ್ನು ಸೃಷ್ಟಿಸುವಲ್ಲಿ ಮತ್ತು ಧ್ವಂಸ ಮಾಡುವಲ್ಲಿ ಸಮರ್ಥವಾಗಿ ಕೆಲಸ ಮಾಡುತ್ತವೆ. ಆದರೆ ಉತ್ತಮ ರಾಜಕೀಯ ಮತ್ತು ಸಾಮಾಜಿಕ ಮಾದರಿಗಳನ್ನು ನಿರೂಪಿಸುವ ತಮ್ಮ ಜವಾಬ್ದಾರಿಯನ್ನು ಅವು ಮರೆಯಬಾರದು. ಹಾಗೇ, ಇಂದಿನ ತಲೆಮಾರಿನವರಿಗೆ ಅಷ್ಟಾಗಿ ಪರಿಚಯವಿಲ್ಲದ ಅಶೋಕ ಮೆಹ್ತಾ ಅವರನ್ನು ನೆನಪಿಸುವ ಖಾದ್ರಿ ಅಚ್ಯುತನ್ ಲೇಖನ ನನಗೆ ಮೆಚ್ಚುಗೆಯಾಯಿತು. ಮೆಹ್ತಾ ಅವರು ಕಳೆದ ಶತಮಾನದ ಸಮಾಜವಾದಿ ಚಿಂತನೆಯ ಬಹು ಎತ್ತರದ ನಾಯಕರು; ಅಂತವರು ಚರಿತ್ರೆಯ ಮಂಜಿನಲ್ಲಿ ಮುಸುಕುಗೊಳ್ಳಬಾರದು.

ಇನ್ನು ಪ್ರೊ. ಎಂ.ಜಿ. ಚಂದ್ರಶೇಖರಯ್ಯ ಅವರ ಉನ್ನತ ಶಿಕ್ಷಣ ಕುರಿತ ಲೇಖನ ಪ್ರಸ್ತುತ ಸಂದರ್ಭದ ಉತ್ತಮ ವಿಶ್ಲೇಷಣೆಯಾಗಿದೆ. ಪಕ್ಷಪಾತದ ಸಂಕುಚಿತ ರಾಜಕೀಯ ಸಿದ್ಧಾಂತಗಳಿಗೆ ಹೊರತಾಗಿ ವರ್ತಮಾನದ ಅಗತ್ಯ ಮತ್ತು ದೂರದೃಷ್ಟಿಯಿಂದ ಕೂಡಿದ ಬಹುರೂಪಿ ಸಂಸ್ಕೃತಿಯ ಸ್ಪಂದನೆಯುಳ್ಳ ಹೊಸ ಶಿಕ್ಷಣ ನೀತಿ ಅವರ ಆಕರ್ಷಣೀಯ ಆದರ್ಶ. ಅಂತಹ ಒಂದು ನೀತಿ ಎಂದಾದರೂ ಜಾರಿಯಾಗಬಹುದಾದರೆ ಸಂತೋಷ. ವಿಷಯಾಧಾರಿತ ವಿಶ್ವವಿದ್ಯಾಲಯಗಳ ಸ್ಥಾಪನೆ ಅಂತರ್ಶಿಸ್ತೀಯ ಶಿಕ್ಷಣ ತತ್ವಕ್ಕೆ ಅಪಚಾರವಾಗುತ್ತದೆ; ಆ ಬಗೆಯ ವಿಶ್ವವಿದ್ಯಾಲಯಗಳ ಸ್ಥಾಪನೆಯನ್ನು ಪ್ರೋತ್ಸಾಹಿಸುವುದು ಸೂಕ್ತವಲ್ಲ. ಇನ್ನು, ಉನ್ನತ ಶಿಕ್ಷಣ ಎಲ್ಲರಿಗೂ ಬೇಕೇ? ಎಂದು ಕೇಳುವುದಕ್ಕೆ ಬದಲಾಗಿ, ಉನ್ನತ ಶಿಕ್ಷಣ ಯಾರಿಗೆ ಬೇಕು? ಎಂದು ಕೇಳುವುದು ಹೆಚ್ಚು ಸೂಕ್ತವೂ ಕಡಿಮೆ ವಿವಾದಾಸ್ಪದವೂ ಆದೀತು. .

**–ಡಾ. ಎಚ್.ಎಸ್. ಈಶ್ವರ,** ಬೆಂಗಳೂರು

ಏಪ್ರಿಲ್ ಸಂಚಿಕೆಯಲ್ಲಿನ ಅಂಬೇಡ್ಕರ್–ಗಾಂಧಿ ಸಂಬಂಧ ಕುರಿತ ಬರಹಗಳು ಬೆರಗು ಹುಟ್ಟಿಸುವಂತಹವು. ನನ್ನಂಥ ಸಮಕಾಲೀನರಿಗೆ ಗಾಂಧಿ ಕುರಿತು ಹೆಚ್ಚಿನ ಮಾಹಿತಿ ನೀಡಿ ಹೆಚ್ಚಿನ ಓದು, ಚಿಂತನೆಗೆ ಹಚ್ಚಿವೆ. ನಿಮಗೆ ನಾನು ಋಣಿ.

**–ಡಾ. ವಿಜಯಾ,** ಬೆಂಗಳೂರು

ನಿಮ್ಮ ಪತ್ರಿಕೆಯ ಕಳೆದ ಸಂಚಿಕೆಯಲ್ಲಿ ಜೆಎನ್‌ಯುನಲ್ಲಿನ ಅಫ್ಜಲ್ ಗುರು ಸ್ಮರಣೆಯ ಪ್ರಸ್ತಾಪ ಮಾಡಿ, ಇದರಲ್ಲಿ ಕನ್ಹಯ್ಯಲಾಲ್‌ನ ಪಾತ್ರ ಸ್ಪಷ್ಟವಾಗಿಲ್ಲ ಎಂದಿದ್ದೀರಿ. ಹೌದು, ಅದು ಸ್ಪಷ್ಟವಾಗಬೇಕು. ಆದರೆ ಅವನನ್ನು ಗಲ್ಲಿಗೇರಿಸಿದ ಕ್ರಮವನ್ನು ಪ್ರಶ್ನಿಸುವವರ ದೇಶ ನಿಷ್ಠೆಯ ಬಗ್ಗೆ ಹಲವು ಮಾಧ್ಯಮಗಳಲ್ಲಿ ಸಂದೇಹಗಳನ್ನು ವ್ಯಕ್ತಪಡಿಸಲಾಗುತ್ತಿರುವುದು ಸರಿಯಲ್ಲ. ಏಕೆಂದರೆ ಯಾವುದೇ ಭಯೋತ್ಪಾದಕ ಗುಂಪಿಗೆ ಸೇರಿದ ಯಾವುದೇ ಸಾಕ್ಷ್ಯವಿಲ್ಲದ ಅಫ್ಜಲ್ ಗುರುಗೆ ಗಲ್ಲು ಶಿಕ್ಷೆ ನೀಡಿದ ತೀರ್ಪಿನಲ್ಲಿ ನಿರ್ಣಾಯಕ ದೋಷಗಳಿವೆ ಎಂದು ಹಲವು ಉನ್ನತ ನ್ಯಾಯಾಂಗ ತಜ್ಞರೇ ಹೇಳಿದ್ದಾರೆ. ಜೊತೆಗೆ ಅಫ್ಜಲ್ ಗುರುಗೆ ತನ್ನ ಪರ ವಾದ ಮಂಡಿಸುವ ಆತನ ಆಯ್ಕೆಯ ವಕೀಲರ ಸೌಲಭ್ಯವನ್ನೂ ಒದಗಿಸಲಾಗಿರಲಿಲ್ಲ ಮತ್ತು ಸ್ವತಃ ಅತನ ವಾದವನ್ನೂ ಆಲಿಸಲಿಲ್ಲ. ಸರ್ವೋನ್ನತ ನ್ಯಾಯಾಲಯವು ತನ್ನ ತೀರ್ಪಿನಲ್ಲಿ ಹೇಳಿದ್ದು 'ದೇಶದ ಸಾಮೂಹಿಕ ಆತ್ಮಸಾಕ್ಷಿಯನ್ನು ತಣಿಸಲು ಈತನನ್ನು ಗಲ್ಲಿಗೇರಿಸಬೇಕಿದೆ'. ಇದು ಗಲ್ಲುಶಿಕ್ಷೆಯಂತಹ ಆತ್ಯಂತಿಕ ಶಿಕ್ಷೆಗೆ ಸಮರ್ಥನೆಯಾಗಲಾರದು ಎಂಬುದು ಕೆಲವು ಹೆಸರಾಂತ ನ್ಯಾಯವಾದಿಗಳ ಅಭಿಪ್ರಾಯ. ಜೊತೆಗೆ ಆಗ ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿಯಾಗಿದ್ದ ಒಮರ್ ಅಬ್ದುಲ್ಲಾರೂ ಈ ಗಲ್ಲು ಶಿಕ್ಷೆ ಕಾಶ್ಮೀರದ ಜನತೆಯನ್ನು ಭಾರತದ ಬಗ್ಗೆ ಮತ್ತಷ್ಟು ಅಪನಂಬಿಕೆ ಬೆಳೆಸಿಕೊಳ್ಳಲು ಕಾರಣವಾಗುತ್ತದೆ ಎಂದು ಅಲವತ್ತುಕೊಂಡಿದ್ದರು ಎಂಬುದನ್ನೂ ನಾವು ಗಮನಿಸಬೇಕು. ಇದೆಲ್ಲವನ್ನೂ ಸರ್ವೋನ್ನತ ನ್ಯಾಯಾಲಯವೂ ಗಮನಿಸದೇ ಇಲ್ಲ.

ಇಂತಹ ಹಿನ್ನೆಲೆಯಲ್ಲಿ ಅಫ್ಜಲ್ ಗುರುವನ್ನು ಗಲ್ಲಿಗೇರಿಸುವುದನ್ನು ಯುಪಿಎ ಸರ್ಕಾರ ಸಾಕಷ್ಟು ಕಾಲ ಮುಂದೂಡುತ್ತಲೇ ಬಂತು. ಆದರೆ ಚುನಾವಣೆಗಳು ಹತ್ತಿರ ಬರುತ್ತಿದ್ದಂತೆ ಸಂಘ ಪರಿವಾರದವರ ಒತ್ತಡಕ್ಕೆ ಸಿಕ್ಕ ಸರ್ಕಾರ ಆತನ ಕುಟುಂಬಕ್ಕೆ ಮುಂಗಡ ಮಾಹಿತಿ ನೀಡುವ, ಆತನ ದೇಹವನ್ನು ಅವರಿಗೆ ಒಪ್ಪಿಸುವ ಯಾವ ನಾಗರಿಕ ಔಪಚಾರಿಕತೆಗಳನ್ನೂ ಅನುಸರಿಸದೆ ಆತನನ್ನು ಒಂದು ದಿನ ಗಲ್ಲಿಗೇರಿಸಿತು. 'ನನ್ನ ಶತ್ರುವಿಗೂ ನ್ಯಾಯ ಸಲ್ಲಬೇಕೆಂಬ ಕಾಳಜಿಯಿಲ್ಲದವನಿಗೆ ತನಗಾಗಿ ನ್ಯಾಯ ಕೇಳುವ ಯಾವ ನೈತಿಕ ಹಕ್ಕೂ ಇರುವುದಿಲ್ಲ' ಎಂಬ ಗಾಂಧೀಜಿಯ ಮಾತು ಇಲ್ಲಿ ನೆನಪಿಗೆ ಬರುತ್ತದೆ.


**–ಟಿ.ಸಿ. ಉಲ್ಲಾಸ್**, ಮಂಗಳೂರು

ಕಳೆದ ಸಂಚಿಕೆಯಲ್ಲಿ ಜಿ. ರಾಜಶೇಖರ್ ಅವರ 'ಬಹು ವಚನ ಭಾರತ' ಪುಸ್ತಕವನ್ನು ವಿಮರ್ಶಿಸುತ್ತಾ ಡಾ. ಸಿರಾಜ್ ಅಹಮದ್ ಅವರು ಲೇಖಕರ ಸೆಕ್ಯುಲರ್ ಧ್ವಜವನ್ನು ಎತ್ತಿ ಹಿಡಿಯುವ ಭರದಲ್ಲಿ 'ಅನ್ಯಧರ್ಮೀಯನನ್ನು ಮದುವೆಯಾಗಿದ್ದಕ್ಕೆ ಹೆತ್ತ ಮಗಳನ್ನೇ ಕೊಂದ ತಂದೆ ಮತ್ತು ಅಣ್ಣ ತಮ್ಮಂದಿರ ಕೃತ್ಯವನ್ನು ಮತಾಂಧ ಕೃತ್ಯವೆಂದು ತೀರ್ಮಾನಿಸಿ...' ಮುಂತಾಗಿ ಬರೆಯುತ್ತಾರೆ. ನನ್ನ ಪ್ರಶ್ನೆ: ಈ ಕೃತ್ಯಕ್ಕೆ ಮತಾಂಧತೆ ಹೊರತಾಗಿ ಇನ್ನಾವ ಕಾರಣಗಳಿದ್ದಾವು? ಅವನ್ನೂ ಸೂಚಿಸಿದ್ದರೆ ಚೆನ್ನಿತ್ತು. ನಮ್ಮ 'ಪ್ರಗತಿಪರ'ರ ವಿಶ್ವಾಸಾರ್ಹತೆ ಜನರ ಮಧ್ಯೆ ಕುಸಿದು ಪಾತಾಳ ತಲುಪಿರುವುದಕ್ಕೆ ಇಂತಹ ವಾದಗಳೂ ಕಾರಣವಾಗಿವೆ. ಮೊನ್ನೆ ಮಂಡ್ಯದಲ್ಲಿ ವಿವಾದ ಹುಟ್ಟಿಸಿ ಮೈಸೂರಿನಲ್ಲಿ ಹಿಂದೂ ಹುಡುಗಿಯ ಮತಾಂತರದ ಮೂಲಕ ನಡೆದ 'ಹಿಂದು–ಮುಸ್ಲಿಂ ಮದುವೆ'ಯನ್ನು ಜಾತ್ಯತೀತ ಶಕ್ತಿಗಳ ಜಯವೆಂದು ಕರೆದಿರುವ ಇವರ 'ಪ್ರಗತಿಪರ' ರಾಜಕಾರಣ ಹೇಸಿಗೆ ಹುಟ್ಟಿಸುವಂಥಹುದಾಗಿದೆ.

**–ಎಂ.ಎನ್ ನಾರಾಯಣಮೂರ್ತಿ,** ಮೈಸೂರು

**(೫ನೇ ಮತ್ತು ೧೭ನೇ ಪುಟಗಳನ್ನೂ ನೋಡಿ)**

# ನಮ್ಮ ಸಮಾಜವಾದಿಗಳು | ನಿಷ್ಠುರ ಆದರ್ಶವಾದಿ ನಾನಾಸಾಹೇಬ ಗೋರೆ



ಭಾರತದ ಸ್ವಾತಂತ್ರ್ಯ ಆಂದೋಲನದೊಳಗಡೆಯಿಂದಲೇ ಉಗವುಗೊಂಡ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸಂಸ್ಥಾಪಕರಲ್ಲಿ ಒಬ್ಬರಾದ ನಾರಾಯಣ ಗಣೇಶ ಗೋರೆಯುವರು ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಹಿದಲಾದಲ್ಲಿ ೧೫ ಜೂನ್ ೧೯೦೭ರಲ್ಲಿ ಮಹಾ ಮಡಿವಂತ ಚಿತ್‌ಪಾವನ ಬ್ರಾಹ್ಮಣ ಕುಟುಂಬವೊಂದರಲ್ಲಿ ಹುಟ್ಟಿದರು. ಅವರು ನಾನಾ ಸಾಹೇಬ್ ಗೋರೆಯೆಂದೇ ರಾಷ್ಟ್ರಮಟ್ಟದಲ್ಲಿ ಚಿರಪರಿಚಿತರು.

ಏಳು ಬೀಳುಗಳನ್ನು ಕಂಡ ಸಮಾಜವಾದಿ ಪಕ್ಷ ಆಚಾರ್ಯ ನರೇಂದ್ರ ದೇವರ ಸಾವನ್ನು ಕಂಡಿತು, ಜೆ.ಪಿ. ಸರ್ವೋದಯಕ್ಕೆ ಹೋದರೆ, ಲೋಹಿಯಾ ಪಕ್ಷ ಬಿಟ್ಟು ಮತ್ತೊಂದು ಪಕ್ಷ ಕಟ್ಟಿದರು. ಅಶೋಕ ಮೆಹ್ತಾ ಕಾಂಗ್ರೆಸ್ ಸೇರಿದರೆ, ಕಮಲಾದೇವಿ ಚಟ್ಟೋಪಾಧ್ಯಾಯ ಮತ್ತು ಅಚ್ಯುತ ಪಟವರ್ಧನರು ರಾಜಕೀಯ ಸನ್ಯಾಸ ತಳೆದರು. ಆದರೆ ಎನ್.ಜಿ. ಗೋರೆಯವರು ಕಾಂಗ್ರೆಸ್ ಸಮಾಜವಾದಿ ಪಕ್ಷದ ಮೊದಲ ಜಂಟಿ ಕಾರ್ಯದರ್ಶಿ, ೧೯೫೩–೫೪ರಲ್ಲಿ ಪ್ರಜಾ ಸಮಾಜವಾದಿ ಪಕ್ಷದ ಅಧ್ಯಕ್ಷರಾಗಿ ೧೯೭೭ರಲ್ಲಿ ಸಮಾಜವಾದಿ ಪಕ್ಷ ಜನತಾ ಪಕ್ಷದಲ್ಲಿ ವಿಲೀನವಾಗುವವರೆಗೆ ಪಕ್ಷ ಕಟ್ಟಿ ಬೆಳೆಸಿದ ನಿಷ್ಠಾವಂತ ಸಮಾಜವಾದಿ ನಾಯಕರು.

ಅಸ್ಪೃಶ್ಯ (ಮಹರ್) ಬಾಲಕನೊಬ್ಬ ಗೋರೆ ಮತ್ತು ಅವರ ತಂದೆಯ ಮೇಲೆ ನೆರಳು ಬೀಳಬಾರದೆಂದು ಬಾಗಿ ಕುಳಿತುಕೊಂಡ ಘಟನೆ, ಬಾಲವಿಧವೆಯರನ್ನು ತಲೆ ಬೋಳಿಸಿ, ಬಿಳಿಸೀರೆ ಉಡಿಸಿದ ಘಟನೆಗಳು ಗೋರೆಯವರನ್ನು ಗೊಡ್ಡು ಬ್ರಾಹ್ಮಣ್ಯದಿಂದ ಹೊರಬಂದು ಪ್ರಗತಿಪರ ವಿಚಾರವಾದಿ ಯುವಕನನ್ನಾಗಿ ಮಾರ್ಪಡಿಸಿದವು. ಅವರು ತಾವು ತೊಟ್ಟಿದ್ದ ಜನಿವಾರವನ್ನು ಕಿತ್ತು ಹಾಕಿದರು ಮತ್ತು ವಯಸ್ಸಿನಲ್ಲಿ ತಮಗಿಂತ ಹಿರಿಯರಾದ ಬಾಲವಿಧವೆ ಸುಮತಿಬಾಯಿಯನ್ನು ತಂದೆ–ತಾಯಿಗಳ ವಿರೋಧವನ್ನು ಲೆಕ್ಕಿಸದೆ ಮದುವೆಯಾದರು.

ಗೋರೆಯವರು ೨೧ರ ಹರೆಯದಲ್ಲಿ ಹಿರಿಯ ಸಮಾಜವಾದಿ ಯೂಸುಫ್ ಮೆಹರ್ ಅಲಿಯವರು ಪ್ರಾರಂಭಿಸಿದ ಇಂಡಿಯಾ ಯೂತ್ ಲೀಗ್ ಸೇರುವ ಮೂಲಕ ತಮ್ಮ ರಾಜಕೀಯ ಜೀವನ ಶುರು ಮಾಡಿದರು. ೧೯೨೭ರಲ್ಲಿ ಗಾಂಧಿ ದಂಡಿಯಾತ್ರೆ ಮೂಲಕ ಉಪ್ಪಿನ ಸತ್ಯಾಗ್ರಹ ಆರಂಭಿಸಿದಾಗ ಗೋರೆ ತಮ್ಮ ವಿದ್ಯಾಭ್ಯಾಸ ತೊರೆದು ಚಳುವಳಿಯಲ್ಲಿ ಗೆಳೆಯರಾದ ಎಸ್.ಎಂ. ಜೋಷಿ, ಶಿರುಭಾವು ಲಿಮಯೆಯವರೊಂದಿಗೆ ಮಹಾರಾಷ್ಟ್ರದ ಆಲಿಬಾಗ್ ಕಡಲ ತೀರದಲ್ಲಿ ಉಪ್ಪಿನ ಸತ್ಯಾಗ್ರಹ ನಡೆಸಿದರು.

ಗಾಂಧಿಯವರನ್ನು ಯರವಾಡ ಜೈಲಿನಲ್ಲಿ ಬಂಧನದಲ್ಲಿಟ್ಟಾಗ ಅದನ್ನು ವಿರೋಧಿಸಲು ಗೋರೆಯವರು ಪ್ರತಿಭಟನಾ ಮೆರವಣಿಗೆಯನ್ನು ಸಂಘಟಿಸುವ ಸಿದ್ಧತೆಯಲ್ಲಿದ್ದಾಗ ಬ್ರಿಟಿಷ್ ಸರಕಾರ ಅವರನ್ನು ಬಂಧಿಸಿ ೪ ತಿಂಗಳು ಜೈಲು ಶಿಕ್ಷೆ ವಿಧಿಸಿತು. ೧೯೩೨ರಲ್ಲಿ ಗಾಂಧಿ ಸವಿನಯ ಕಾನೂನು ಭಂಗ ಚಳುವಳಿ ಪ್ರಾರಂಭಿಸಿದಾಗ ಗೋರೆ ಅದರಲ್ಲಿ ಭಾಗವಹಿಸದಿದ್ದರೂ ಅವರನ್ನು ಎರಡು ತಿಂಗಳುಗಳವರೆಗೆ ಸ್ಥಾನಬದ್ಧತೆಯಲ್ಲಿಟ್ಟು ನಂತರ ಅವರಿಗೆ ೨ ವರ್ಷ ಜೈಲು ಶಿಕ್ಷೆ ವಿಧಿಸಿತ್ತು. ಅನಂತರ ಅವರನ್ನು ನಾಸಿಕ್ ಜೈಲಿಗೆ ವರ್ಗಾಯಿಸಲಾಯಿತು. ಇಲ್ಲಿ ಕಿರಿಯರಾಗಿದ್ದ ಗೋರೆಯವರು ಅಲ್ಲಿ ಜೆ.ಪಿ., ಅಶೋಕ ಮೆಹ್ತಾ, ಮೀನು ಮಸಾನಿ ಮೊದಲಾದವರೊಡನೆ ಬೆರತು ಕಾಂಗ್ರೆಸ್ ಸಮಾಜವಾದಿ ಪಕ್ಷದ ಸ್ಥಾಪನೆಯ ಬಗ್ಗೆ ಚಿಂತನೆ ಮಾಡಿದರು. ಈ ಆಲೋಚನೆಯ ಫಲವಾಗಿ ೧೯೩೪ರಲ್ಲಿ ಸಿ.ಎಸ್.ಪಿ. ಉಗಮವಾಯಿತು.

ಮಾರ್ಕ್ಸ್ ಮತ್ತು ಏಂಗೆಲ್ಸ್, ಲೆನಿನ್, ಗಾಂಧಿ ಮೊದಲಾದವರ ವಿಚಾರಧಾರೆಗಳು ಗೋರೆ ಅವರ ಮೇಲೆ ತೀವ್ರ ಪ್ರಭಾವ ಬೀರಿದವು. ಗಾಂಧಿಯವರಿಂದ ಸರಳತೆ, ಗುರಿ ಮತ್ತು ದಾರಿಗಳ ಶುದ್ಧತೆ, ಪ್ರಾಮಾಣಿಕತೆ, ಬಡವರ ಬಗೆಗಿನ ಅಪಾರ ಕಾಳಜಿಗಳನ್ನು ಮೈಗೂಡಿಸಿಕೊಂಡಿದ್ದರೆ ಮಾರ್ಕ್ಸ್‌ನಿಂದ ಈ ಪ್ರಪಂಚದಲ್ಲಿ ಬಡವರು ತಮ್ಮ ನೆಲೆಗಾಗಿ ಹೋರಾಟ ಮಾಡುವ ಅವಶ್ಯಕತೆಗಳನ್ನು ರಕ್ತಗತ ಮಾಡಿಕೊಂಡರು. ಆದರೆ ಗಾಂಧೀಜಿಯವರ ಯಂತ್ರ ವಿರೋಧಿ ನಿಲುವು, ಹಳ್ಳಿಗಳ ಸ್ವಾವಲಂಬನೆ ಕಲ್ಪನೆಯನ್ನು ಅವರು ನಿರಾಕರಿಸಿದರು. ಹಾಗೇ ಅವರು ಮಾರ್ಕ್ಸ್‌ವಾದಿ ಸಿದ್ಧಾಂತದ ಅರ್ಥಶಾಸ್ತ್ರ, ಸಮಾಜಶಾಸ್ತ್ರ ಮತ್ತು ಇತಿಹಾಸದ ಭೌತಿಕ ವ್ಯಾಖ್ಯಾನಗಳನ್ನು ಒಪ್ಪಲಿಲ್ಲ.

ಎರಡನೆಯ ವಿಶ್ವ ಮಹಾಯುದ್ಧದಲ್ಲಿ ಬ್ರಿಟಿಷರಿಗೆ ಸಹಕಾರ ನೀಡಬಾರದೆಂದು ಹೈದರಾಬಾದ್ ನಿಜಾಮನ ಗುಲ್ಬರ್ಗಾದಲ್ಲಿ (ಈಗ ಅದು ಕರ್ನಾಟಕದಲ್ಲಿದೆ) ಭಾಷಣ ಮಾಡಿದ್ದಕ್ಕೆ ಬ್ರಿಟಿಷ್ ಸರಕಾರ ಗೋರೆಯವರಿಗೆ ಒಂದು ವರ್ಷ ಜೈಲು ಶಿಕ್ಷೆ ವಿಧಿಸಿತ್ತು. ಅವರು ಬಿಡುಗಡೆಯಾದಾಗ 'ಭಾರತ ಬಿಟ್ಟು ತೊಲಗಿ' ಚಳುವಳಿ ಪ್ರಾರಂಭವಾಗಿತ್ತು. ಅವರು ಮಾರು ವೇಷದಲ್ಲಿ ಭೂಗತರಾಗಿ ಚಳುವಳಿಯನ್ನು ಸಂಘಟಿಸುತ್ತಿದ್ದಾಗ ಮತ್ತೆ ಬಂಧನಕ್ಕೊಳಗಾಗಿ ೧೯೪೬ರ ಏಪ್ರಿಲ್‌ನಲ್ಲಿ ಬಿಡುಗಡೆಯಾದರು.

ಭಾರತ ಸ್ವಾತಂತ್ರ್ಯ ಪಡೆದ ನಂತರ ೧೯೫೫ರಲ್ಲಿ ಗೋರೆಯವರು ಗೋವಾ ವಿಮೋಚನಾ ಚಳುವಳಿಯ ಮೊದಲ ತಂಡದ ನಾಯಕರಾಗಿ ಗೋವಾ ಪ್ರವೇಶಿಸಿದರು. ಪೋರ್ಚುಗೀಸರ ಗೋವಾ ಸರಕಾರ ಅವರನ್ನು ಬಂಧಿಸಿ ೧೨ ವರ್ಷ ಶಿಕ್ಷೆ ವಿಧಿಸಿ ಆಗುವಾಡ ಕೋಟೆಯಲ್ಲಿ ಅವರನ್ನು ಬಂಧನದಲ್ಲಿಟ್ಟಿತು. ೧೯೫೭ರಲ್ಲಿ ಅವರನ್ನು ಬಿಡುಗಡೆ ಮಾಡಲಾಯಿತು.

ಕೃತಕ ಸರೋವರವೊಂದರ ನಿರ್ಮಾಣ ಸಂಬಂಧವಾಗಿ ಭೂಮಿ ಕಳೆದುಕೊಂಡ ರೈತರು ೧೯೨೦ರಲ್ಲಿ ನಡೆಸಿದ ಮುಳ್ಶಿ ಅಣೆಕಟ್ಟು ಚಳುವಳಿಯು ಗೋರೆಯವರು ರೈತರ ಸಮಸ್ಯೆಗಳನ್ನು ಅರಿಯಲು ಮತ್ತು ಡಾ. ಅಂಬೇಡ್ಕರ್ ಅವರು ೧೯೨೭ರಲ್ಲಿ ಮಹಾಡ ಮತ್ತು ನಾಸಿಕ್‌ನಲ್ಲಿ ನಡೆಸಿದ ಚೌಡರ ಕೆರೆ ಮತ್ತು ಕಾಲಾರಾಮ್ ಮಂದಿರ ಪ್ರವೇಶಗಳ ಚಳುವಳಿಗಳು ದಲಿತರ ಸಮಸ್ಯೆಗಳನ್ನು ತಿಳಿಯಲು ಪ್ರೇರೇಪಿಸಿದವು. ಯೂಸುಫ್ ಮೆಹರ್ ಅಲಿಯವರು ಸಂಘಟಿಸಿದ "ಸೈಮನ್‌ರೆ ಮರಳಿ ಹೋಗಿ" ಚಳುವಳಿಯಲ್ಲಿ ಭಾಗವಹಿಸಿದ್ದ ಗೋರೆಯವರು ಪುಣೆಯ ಪಾರ್ವತಿ ಮಂದಿರ ಪ್ರವೇಶ ಚಳುವಳಿಯ ತಂಡದ ನೇತೃತ್ವ ವಹಿಸಿದ್ದಕ್ಕೆ ಮತಾಂಧ ಹಿಂದುಗಳ ಥಳಿತಕ್ಕೆ ಗುರಿಯಾದರು. ಪುಣೆಯಲ್ಲಿ ಎಣ್ಣೆ ಗಿರಣಿ ಕಾರ್ಮಿಕರ, ಸಕ್ಕರೆ ಕಾರ್ಮಿಕರ ಒಕ್ಕೂಟ ಮತ್ತು ಪುಣೆಯ ವಿದ್ಯುಚ್ಛಕ್ತಿ ನೌಕರರ ಸಂಘಗಳ ಅಧ್ಯಕ್ಷರಾಗಿ ಕಾರ್ಮಿಕರ ಏಳಿಗೆಗೆ ದುಡಿದರು.

ಹೀಗೆ ಸಾರ್ವಜನಿಕ ಜೀವನದಲ್ಲಿ ಸಕ್ರಿಯರಾಗಿದ್ದ ಗೋರೆಯವರು ೧೯೫೭ರ ಲೋಕಸಭೆಯ ಚುನಾವಣೆಯಲ್ಲಿ ಪ್ರಜಾ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಆಯ್ಕೆಯಾದರು. ೧೯೬೫ರಲ್ಲಿ ಅವರು ಪುಣೆಯ ಕಾರ್ಪೋರೇಷನ್ನಿನ ಮೇಯರ್ ಆಗಿ ಆಯ್ಕೆಯಾದರು. ೧೯೭೦ರಲ್ಲಿ ಅವರು ಮಹಾರಾಷ್ಟ್ರದ ವಿಧಾನಸಭೆಯಿಂದ ಪ್ರಜಾ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿ ಕಾಂಗ್ರೆಸ್ಸಿನ ಹೆಚ್ಚಿನ ಮತಗಳ ಬೆಂಬಲದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದರು.

ಆದರೆ ಗೋರೆಯವರು ಇದರಿಂದ ಕಾಂಗ್ರೆಸ್ಸಿನ ಯಾವುದೇ ಮುಲಾಜಿಗೆ ಒಳಗಾಗದೆ ಇಂದಿರಾ ಗಾಂಧಿಯವರ ಆಡಳಿತ ವೈಖರಿಯನ್ನು ಟೀಕಿಸಲು ಹಿಂಜರಿಯಲಿಲ್ಲ.. ೧೯೭೫ರ ಜೂನ್ ೨೫ರಂದು ಇಂದಿರಾಗಾಂಧಿ ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿದಾಗ ಅವರನ್ನು ಬಂಧಿಸಲಿಲ್ಲ. ಆದರೆ ಅವರು ಈ ಅವಕಾಶವನ್ನು ಬಳಸಿಕೊಂಡು ಸೈಕಲ್ ಮೇಲೆ ಹಳ್ಳಿ ಹಳ್ಳಿಗೆ ಹೋಗಿ ತುರ್ತುಪರಿಸ್ಥಿತಿಯ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸಿದ್ದರು. ೧೯೭೭ರಲ್ಲಿ ಜನತಾ ಪಕ್ಷ ಅವರನ್ನು ಬ್ರಿಟನ್ನಿನ ರಾಯಭಾರಿಯನ್ನಾಗಿ ನೇಮಿಸಿತ್ತು. ೧೯೭೯ರಲ್ಲಿ ಜನತಾಪಕ್ಷದ ಸರಕಾರ ಉರುಳಿದಾಗ ಆ ಹುದ್ದೆಗೆ ರಾಜೀನಾಮೆ ನೀಡಿದರು.

( ೭ನೇ ಪಟಕ್ಕೆ

# ಪ್ರೊ.ಬಿ.ಕೃಷ್ಣಪ್ಪ ನೆನಪಿನ ಮಾಲೆ-೪೩

–ಇಂದಿರಾ ಬಿ.ಕೃಷ್ಣಪ್ಪ

## ಪ್ರಿನ್ಸಿಪಾಲ್‌ಗಿರಿ ಹೆಸರಿನಲ್ಲಿ ಕಾಡಿದ ಜಾತಿಭೂತ

ಭಾರತದ ನೆಲದಲ್ಲಿ ಬೇರೂರಿರುವ ಜಾತಿವಾದ, ಕೋಮುವಾದ, ಅಸ್ಪೃಶ್ಯತೆ ಮತ್ತು ಅನ್ಯಾಯದ ವಿರುದ್ಧ, ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಚಿಂತನೆಯ ಬೆಳಕಿನಲ್ಲಿ ಹೋರಾಡುತ್ತಿದ್ದ ಕೃಷ್ಣಪ್ಪನವರಿಗೆ, ತನ್ನನ್ನೂ ಆ ವಿಷವ್ಯೂಹ ಆವರಿಸಿಕೊಳ್ಳುತ್ತದೆ ಎಂಬ ಆಲೋಚನೆಯಿರಲಿಲ್ಲ. ಅವರು ಅಧ್ಯಾಪಕರಾಗಿ ಸೇರಿದ್ದ ಭದ್ರಾವತಿಯ ಭದ್ರಾ ಕಾಲೇಜು, ಖಾಸಗಿ ಆಡಳಿತ ಮಂಡಳಿಯ ಉಸ್ತುವಾರಿಯಿಂದ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಹಾಗೂ ಮೈಸೂರು ಕಾಗದ ಕಾರ್ಖಾನೆಯ – ಜಂಟಿ ಆಡಳಿತಕ್ಕೆ ಒಳಪಟ್ಟು, ೧೯೭೬ ರಲ್ಲಿ "ಸರ್ ಎಂ.ವಿ. ಕಾಲೇಜು" ಎಂದು ಪ್ರತಿಷ್ಠಾಪಿತವಾಯಿತು. ಕಾಲೇಜಿನ ಸುಮಾರು ೨೫೦೦ ವಿದ್ಯಾರ್ಥಿಗಳು ಕಾರ್ಮಿಕರ ಕುಟುಂಬಗಳಿಂದ, ಭದ್ರಾವತಿಯ ಸುತ್ತಲಿನ ಹಳ್ಳಗಾಡಿನಿಂದ ಬಂದವರಾಗಿದ್ದು, ಪ್ರತಿಷ್ಠಿತ ಕಾಲೇಜಾಗಿ, ಶಿವಮೊಗ್ಗ ಜಿಲ್ಲೆಯಲ್ಲಿ ಹೆಸರು ಗಳಿಸಿತ್ತು. ಸುಮಾರು ೭೫ಕ್ಕೂ ಮಿಕ್ಕಿ ಅಧ್ಯಾಪಕ ವೃಂದವನ್ನು ಹೊಂದಿದ್ದ ಈ ಕಾಲೇಜಿನಲ್ಲಿ, ಕೃಷ್ಣಪ್ಪ ಅಧ್ಯಾಪಕ ವೃತ್ತಿಯೊಂದಿಗೆ, ೧೯೮೩ ರಿಂದ ೧೯೮೫ ರವರೆಗೆ ಆಡಳಿತಾಧಿಕಾರಿಯಾಗಿ ಕೆಲಸ ನಿರ್ವಹಿಸಿದರು. ಇದೇ ಸಂದರ್ಭದಲ್ಲಿ ಅವರಿಗೆ 'ರೀಡರ್' ಆಗಿ ಮುಂಬಡ್ತಿಯೂ ದೊರಕಿತ್ತು. ೧೯೮೫ರಲ್ಲಿ ಆಡಳಿತಾಧಿಕಾರಿಗಳ ಹುದ್ದೆಯನ್ನು ವಿಶೇಷಾಧಿಕಾರಿ ಹುದ್ದೆಯಾಗಿ ಪುನರ್ ನಾಮಕರಣ ಮಾಡಲಾಗಿತ್ತು. ವಿದ್ಯಾರ್ಥಿಗಳ ಸಂಖ್ಯಾ ಬಾಹುಳ್ಯವನ್ನು ಗಮನಿಸಿ ಈ ಕಾಲೇಜನ್ನು (೧) ಕಲಾ – ವಾಣಿಜ್ಯ ಕಾಲೇಜು ಮತ್ತು (೨) ಸರ್ ಎಂ.ವಿ. ವಿಜ್ಞಾನ ಕಾಲೇಜೆಂದು ವಿಭಜನೆ ಮಾಡಲಾಗಿತ್ತಾದರೂ ಆಡಳಿತಾತ್ಮಕ ದೃಷ್ಟಿಯಿಂದ ಒಂದೇ ಕಾಲೇಜು ಎಂದು ಪರಿಭಾವಿಸಿಕೊಂಡು, ಪ್ರೊ. ಜಿ.ಎಂ. ಬಸವರಾಜುರವರ ಪ್ರಿನ್ಸಿಪಾಲತ್ವದಲ್ಲಿ ನಡೆಯುತ್ತಿತ್ತು. ಆದರೆ ಕಾಲೇಜು ಆಡಳಿತ ಮಂಡಳಿಯವರು ಕಾಲೇಜಿನ ಶಿಸ್ತು ಮತ್ತು ಶಿಕ್ಷಣದ ದೃಷ್ಟಿಯಿಂದ, ಎರಡೂ ಕಾಲೇಜುಗಳಿಗೂ ಪ್ರತೇಕ ಇನ್ ಚಾರ್ಜ್ ಪ್ರಿನ್ಸಿಪಾಲರನ್ನು ಆಯ್ಕೆ ಮಾಡಲು ಆಲೋಚಿಸಿ, ಅದರಂತೆ ಬಿ. ಕೃಷ್ಣಪ್ಪನವರನ್ನು ಕಲಾ–ವಾಣಿಜ್ಯ ವಿಭಾಗದ ಇನ್ ಚಾರ್ಜ್ ಪ್ರಿನ್ಸಿಪಾಲರಾಗಿ ಸರ್ವಾನುಮತದಿಂದ ಆಯ್ಕೆ ಮಾಡಿತು. ಇದಕ್ಕೆ ಮೆರಗುಕೊಟ್ಟಂತೆ ಕೃಷ್ಣಪ್ಪನವರಿಗೆ 'ಪ್ರೊಫೆಸರ್' ಎಂಬ ಮುಂಬಡ್ತಿ ಭುಜಕೀರ್ತಿಯನ್ನು ತಂದುಕೊಟ್ಟಿತ್ತು. ನಮಗಿಬ್ಬರಿಗೂ ಸಂತೋಷದ ದಿನಗಳವು. ಆದರೆ ಈ ಸಂತೋಷ ಬಹಳ ದಿನ ಉಳಿಯಲಿಲ್ಲ.

ಪೂರ್ಣಾವಧಿ ಪ್ರಿನ್ಸಿಪಾಲರಾಗಿದ್ದ ಪ್ರೊ.ಜಿ.ಎಂ. ಬಸವರಾಜು ರವರು, ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನ ವಿಶೇಷಾಧಿಕಾರಿಯಾದ ಕಾರಣ, ಸರ್ ಎಂ.ವಿ. ಕಾಲೇಜಿನ ಪ್ರಿನ್ಸಿಪಾಲ್ ಹುದ್ದೆಯನ್ನು ಪ್ರೊ.ಬಿ. ಕೃಷ್ಣಪ್ಪನವರಿಗೆ ವಹಿಸಿಕೊಡುವ ಸಿದ್ಧತೆಗೆ ತೊಡಗಿದರು. ಆಗ ಶುರುವಾಯ್ತು ನೋಡಿ, ಜಾತಿ ರಾಜಕೀಯ. ೧೯೮೪ರಲ್ಲಿ ಆಡಳಿತಾಧಿಕಾರಿಯಾದಾಗಲೂ, ೧೯೮೫ರಲ್ಲಿ ವಿಶೇಷಾಧಿಕಾರಿಯಾದಾಗಲೂ ತಿರಸ್ಕೃತವಾಗಿದ್ದ ಮತ್ತು ಹಲವಾರು ಆರೋಪಗಳಿಗೆ ಗುರಿಯಾಗಿದ್ದ, ಲಿಂಗಾಯಿತ ಸಮುದಾಯಕ್ಕೆ ಸೇರಿದ್ದ ಅಧ್ಯಾಪಕರೊಬ್ಬರು ಕಾಲೇಜಿನ ಆಡಳಿತ ಮಂಡಳಿಗೆ, ಕಾರ್ಖಾನೆಯ ಸಿ.ಇ.ಓ.ರವರ ಮನೆಗೆ 'ತಾನು ಸೀನಿಯರ್, ತನಗೆ ಪ್ರಿನ್ಸಿಪಾಲ್ ಹುದ್ದೆ ಕೊಡಬೇಕೆಂದು' ಓಡಾಟ ಶುರು ಮಾಡಿದರು.. ಪ್ರೊ. ಕೃಷ್ಣಪ್ಪನವರನ್ನು ಇನ್‌ಚಾರ್ಜ್ ಪ್ರಿನ್ಸಿಪಾಲರಾಗಿ ಆಯ್ಕೆ ಮಾಡಿದ್ದವರೂ ಆ ಅಧಿಕಾರಿಯೇ ಆಗಿದ್ದರೂ ಜಾತಿ ಬಾಂಧವ್ಯದ ದೌರ್ಬಲ್ಯಕ್ಕೊಳಗಾದ ಅವರು ಆ ಲಿಂಗಾಯಿತ ಅಧ್ಯಾಪಕರಿಗೆ ಪ್ರಿನ್ಸಿಪಾಲ್ ಹುದ್ದೆ ವಹಿಸಿಕೊಡುವಂತೆ ಪ್ರೊ.ಬಸವರಾಜ್‌ರವರಿಗೆ ಒತ್ತಾಯ ಮಾಡಲಾರಂಭಿಸಿದರು.

ಇದರಿಂದ ತೀವ್ರವಾಗಿ ನೊಂದುಕೊಂಡಿದ್ದ ಕೃಷ್ಣಪ್ಪ, ಸಿ.ಇ.ಓ ರವರನ್ನು ಕಂಡು, ಇದರಿಂದ ತನಗಾಗುವ ಅನ್ಯಾಯ – ಅವಮಾನಗಳು ಏನು? ಎಂಬುದನ್ನು ನಿವೇದಿಸಿಕೊಂಡರಾದರೂ ಫಲ ನೀಡಲಿಲ್ಲ. ಆಗ ಕೃಷ್ಣಪ್ಪ, ಶಿಕ್ಷಣ ಮಂತ್ರಿಗಳು, ಗೃಹ ಸಚಿವರು ಹಾಗೂ ಕೈಗಾರಿಕಾ ಮಂತ್ರಿಗಳಲ್ಲಿ ಮನವಿ ಸಲ್ಲಿಸಿದರು. ಸಚಿವರು, ಕಾರ್ಖಾನೆಯ ಎಂಡಿವಿಸಿ ಯವರೊಡನೆ ಚರ್ಚಿಸಿ, ಪ್ರೊ. ಕೃಷ್ಣಪ್ಪನವರಿಗೆ ಚಾರ್ಜ್ ವಹಿಸಿಕೊಡುವಂತೆ ನಿರ್ದೇಶಿಸಿದರು. ಆದರೇನು? ಜಾತಿಯ ಕೂಪದಲ್ಲಿ



ಪ್ರೊ. ಬಿ.ಕೃಷ್ಣಪ್ಪನವರು ಕಾಲೇಜಿನ ಪ್ರಾಂಶುಪಾಲ ಹುದ್ದೆಯಿಂದ ಸ್ವಯಂ ನಿವೃತ್ತಿ ಪಡೆದಾಗ ಬೀಳ್ಕೊಡುಗೆ ಸಮಾರಂಭದಲ್ಲಿ ಪತ್ನಿ ಇಂದಿರಾ ಅವರೊಂದಿಗೆ

ಹೂತು ಹೋದವರು, ಪ್ರತಿತಂತ್ರವನ್ನು ಹೂಡಿದರು. ಕಂಪನಿಯಲ್ಲಿ, ಗಣಿ ಎಂಜಿನಿಯರ್ ಆಗಿದ್ದ ನಾರಾಯಣ್‌ದಾಸ್ (ಆಗಿನ ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರ ಸಹೋದರ)ರವರನ್ನು 'ಕಾಲೇಜು ಪ್ರಿನ್ಸಿಪಾಲರೆಂದೂ, ಅವರಿಗೆ ಅಧಿಕಾರ ವಹಿಸಿಕೊಡಬೇಕೆಂದು' ಆದೇಶ ಹೊರಡಿಸಿದರು.

ಪ್ರೊ. ಕೃಷ್ಣಪ್ಪನವರನ್ನು ಇನ್‌ಚಾರ್ಜ್ ಹುದ್ದೆಯಲ್ಲಿ ಮುಂದುವರಿಸಿದರು. ಆ ಲಿಂಗಾಯ್ತ ಅಧ್ಯಾಪಕನಿಗೆ ಪ್ರಿನ್ಸಿಪಾಲರ ಸ್ಥಾನಮಾನ ಇರುವ ವಿಶೇಷಾಧಿಕಾರಿ ಹುದ್ದೆಯನ್ನು ದಯಪಾಲಿಸಿದರು. ಈ ನಡುವೆ, ಕೃಷ್ಣಪ್ಪನವರಿಗೆ, "ಪ್ರಿನ್ಸಿಪಾಲ್ ಹುದ್ದೆ ಮುಖ್ಯವೋ? ಮರ್ಯಾದೆ ಮುಖ್ಯನೋ? ಈ ಪತ್ರದ ವಿಷಯ ಪೋಲೀಸಿಗೆ ತಿಳಿಸಿದ್ರೆ ನಿನ್ನ ಫ್ಯಾಮಿಲಿಗೆ ಅಪಾಯ," ಅಂತ ಹೇಳುವ ಅವಾಚ್ಯ ಶಬ್ದಗಳಿರುವ ಪತ್ರಗಳು ಬರಲಾರಂಭಿಸಿದವು . ಈ ಅನಾಮಧೇಯ ಪತ್ರಸರಣಿ ನನಗೆ ಭಯ ಮೂಡಿಸಿತ್ತು. ಇಂತಹ ಪರಿಸ್ಥಿತಿ ಡಾ. ಅಂಬೇಡ್ಕರ್‌ರವರ ಜೀವನದಲ್ಲೂ ಹಲವಾರು ಘಟ್ಟಗಳಲ್ಲಿ ಎದುರಾಗಿತ್ತು. ಅದನ್ನು ಅವರು ಎದುರಿಸಿದ ಪರಿ ಅನನ್ಯವಾದದು ಹಾಗೂ ಜಾತಿ ರಾಜಕೀಯದ ಕಬಂಧ ಬಾಹುಗಳ ಅಕರಾಳ ವಿಕರಾಳ ಸ್ವರೂಪಗಳನ್ನು ಜಗತ್ತಿನ ಮುಂದೆ ಅನಾವರಣ ಮಾಡಿದ್ದರು. ಆ ಚೈತನ್ಯವೇ ಕೃಷ್ಣಪ್ಪನವರನ್ನು ಮನದಾಳದೊಳಗೇ ಸಂತೈಸುತ್ತಿತ್ತು.

ಆಡಳಿತ ಮಂಡಳಿಯವರು ತಮ್ಮ ಜಾಣ್ಮೆಗೆ ಹೆಮ್ಮೆ ಪಟ್ಟಿದ್ದಿರಲೂಬಹುದು. ಕೃಷ್ಣಪ್ಪ ತೀವ್ರ ಘಾಸಿಗೊಳಗಾಗಿದ್ದೂ ಹೌದು. ಆದರೆ ಅದರ ಪರಿಣಾಮಗಳು ಇಡೀ ಕಾಲೇಜನ್ನು ಆವರಿಸಿಕೊಂಡಿತು. ಸರ್ಕಾರ ಮತ್ತು ಕಾಲೇಜು ಶಿಕ್ಷಣ ಮಂಡಳಿಯ ಮಧ್ಯೆ ಇರುವ ಒಪ್ಪಂದವನ್ನು, ಆಡಳಿತ ಮಂಡಳಿ ನಿರ್ಲಕ್ಷಿಸಿದ್ದ ವಿಚಾರವನ್ನು ಎತ್ತಿಕೊಂಡು, ಅಧ್ಯಾಪಕರ ಸಂಬಳದ ಬಿಲ್ಲನ್ನು ಸರ್ಕಾರ ಪಾಸು ಮಾಡಲಿಲ್ಲ ಮತ್ತು ಕೂಡಲೇ ನಿಯಮಾವಳಿಯಂತೆ ಅಧ್ಯಾಪಕರೊಬ್ಬರನ್ನು ಪ್ರಿನ್ಸಿಪಾಲರನ್ನಾಗಿ ಮಾಡಬೇಕೆಂದು ಆಡಳಿತ ಮಂಡಳಿಗೆ ನಿರ್ದೇಶನ ಕಳುಹಿಸಿತು. ಇದನ್ನು ಪ್ರತಿಷ್ಠೆಯ ಪ್ರಶ್ನೆಯಾಗಿ ತೆಗೆದುಕೊಂಡ ಆಡಳಿತ ಮಂಡಳಿ, ಸರ್ಕಾರದ ಆದೇಶವನ್ನು ನಿರ್ಲಕ್ಷಿಸಿ ಕಂಪನಿಯ ಖಜಾನೆಯಿಂದಲೇ ಅಧ್ಯಾಪಕರಿಗೆ ಸಂಬಳ ನೀಡಿತು. ಕಾಲೇಜು ಶಿಕ್ಷಣ ನಿರ್ದೇಶಕರು, ಬಂದು ಸಿ.ಇ.ಓ ಹಾಗೂ ಎಂ.ಡಿ. ವಿ.ಸಿಯವರನ್ನು ಭೇಟಿಯಾಗಿ, ತುರ್ತು ಕ್ರಮ ಕೈಗೊಳ್ಳಲು ತಿಳಿಸಿದರು. ವೇತನ ಪಾವತಿ ವಿಚಾರದೊಂದಿಗೆ ಪ್ರಯೋಗಾಲಯ / ಸ್ಕಾಲರ್‌ಶಿಪ್, ಇತ್ಯಾದಿ ಹಣಕಾಸು ಸಂಬಂಧವಾದ ಯಾವ ವ್ಯವಹಾರವೂ ನಡೆಸದಂಥ ದು:ಸ್ಥಿತಿಯನ್ನು ಕಾಲೇಜು ಎದುರಿಸಬೇಕಾಯಿತು. ಜಂಟಿ ಖಾತೆಯನ್ನು ನಿರ್ವಹಿಸುವ ಪ್ರಿನ್ಸಿಪಾಲರು ಇಲ್ಲದೆ, ಇಡೀ ಕಾಲೇಜಿನಲ್ಲಿ ಅರಾಜಕತೆ ಉಂಟಾಯಿತು. ಮತ್ತೆರಡು ತಿಂಗಳುಗಳು ಯಥಾಸ್ಥಿತಿ ಮುಂದುವರಿದು, ಕಂಪನಿ ಖಜಾನೆಯಿಂದ ಕಾಲೇಜು ವೆಚ್ಚ, ನಿರ್ವಹಿಸುವ ತುರ್ತುಗಳು, ಕಾರ್ಖಾನೆಯ ಬೊಕ್ಕಸಕ್ಕೂ ಹೊರೆಯಾಗಿ ಪರಿಣಮಿಸಿತು. ಆಡಳಿತ ಮಂಡಳಿಗೆ ಶ್ರೀ ನಾರಾಯಣ ದಾಸ್‌ರವರನ್ನು ಹಿಂದಕ್ಕೆ ಕರೆಯಿಸಿಕೊಂಡು ಕೃಷ್ಣಪ್ಪನವರಿಗೆ ಪ್ರಿನ್ಸಿಪಾಲ್ ಹುದ್ದೆ ಕೊಡದೆ ಕಾಲೇಜು ನಡೆಸುವುದು ದುಸ್ತರವಾಯಿತು.

ಇಂತಹ ಸಂದರ್ಭದಲ್ಲಿ ಕೃಷ್ಣಪ್ಪನವರ ಮಿತ್ರರು, ದಸಂಸದ ಗೆಳೆಯರು,

ಒಡನಾಡಿಗಳು ಅವರ ಜೊತೆಯಾಗಿ ನಿಂತರು. ಕೆಲವರು ನ್ಯಾಯಾಲಯದಲ್ಲಿ ಪ್ರಕರಣ ಮಾಡೋಣ ಎಂದರೆ, ಇನ್ನು ಕೆಲವರು ಪ್ರತಿಷ್ಠೆಯ ಪ್ರಶ್ನೆಯಾಗದಿದ್ದರೆ, ಆ ಹುದ್ದೆ ಬಿಡೋಣ ಎಂದರು. ಅರ್ಹತೆ, ಹಿರಿತನ, ಶೈಕ್ಷಣಿಕತೆ, ಹೀಗೆ ಯಾವುದರಲೂ ಕಡಿಮೆ ಇಲ್ಲದ ತನ್ನನ್ನು, ಜಾತಿಯ ಕಾರಣದಿಂದ ಘನತೆಗೆ ಕುಂದುಂಟಾಗುವಂತೆ ಮಾಡಿದ ಈ ಪದೋನ್ನತಿಯ ವಿಚಾರ ಕೃಷ್ಣಪ್ಪನವರನ್ನು ಮಾನಸಿಕವಾಗಿ ತಲ್ಲಣಗೊಳಿಸಿತ್ತು. ಇದೆಲ್ಲವನ್ನು ಎಂ.ಡಿ.ವಿ.ಸಿ ಯವರಲ್ಲಿ ನಿವೇದಿಸಿಕೊಂಡು, ನ್ಯಾಯ ದೊರಕಿಸಿಕೊಡಬೇಕಾಗಿ ಕೋರಿದ್ದರು.

ಕಾಲೇಜು ಸುವ್ಯವಸ್ಥಿತವಾಗಿ ನಡೆಸುವ ಪ್ರಶ್ನೆಯೇ ಪ್ರಧಾನವಾದಾಗ, ಕಾಲೇಜನ್ನು ಎರಡು ಕಾಲೇಜುಗಳಾಗಿ, ಸಂಪೂರ್ಣವಾಗಿ ವಿಭಾಗಿಸಿ, ಮುಂದುವರಿಸುವುದೇ ಮಧ್ಯಮ ಮಾರ್ಗವಾಗಿ ಆಡಳಿತ ಮಂಡಳಿ ಕಂಡುಕೊಂಡಿತು. ಕನ್ನಡ ಭಾಷೆಯ ಪ್ರೊಫೆಸರ್‌ರಾದ ಕೃಷ್ಣಪ್ಪನವರು ಮಾತ್ರ, ವಿಜ್ಞಾನ ಕಾಲೇಜಿನ ಪ್ರಿನ್ಸಿಪಾಲರಾಗಲು ಸಾಧ್ಯತೆ ಇದ್ದುದರಿಂದ ಅವರನ್ನು ಸರ್ ಎಂ.ವಿ. ಸೈನ್ಸ್ ಕಾಲೇಜಿನ ಪ್ರಿನ್ಸಿಪಾಲರಾಗಿ ೧೯೮೬ ರಲ್ಲಿ ಆದೇಶ ನೀಡಿತು ಮತ್ತು ರಾಜಕೀಯ ಶಾಸ್ತ್ರದ ಪ್ರೊಫೆಸರ್ ಆದ ಆ ಲಿಂಗಾಯ್ತ ಅಧ್ಯಾಪಕರನ್ನು ಕಲಾ ಮತ್ತು ವಾಣಿಜ್ಯ ಕಾಲೇಜಿಗೆ ಪ್ರಿನ್ಸಿಪಾಲ್ ಆಗಿ ನೇಮಕ ಮಾಡಿ ತನ್ನ ಉದ್ದೇಶವನ್ನೂ ಈಡೇರಿಸಿಕೊಂಡಿತ್ತು!.

ಸರ್. ಎಂ. ವಿಶ್ವೇಶ್ವರಯ್ಯ ವಿಜ್ಞಾನ ಕಾಲೇಜಿನ ಪ್ರಿನ್ಸಿಪಾಲರಾಗಿ ೧೯೯೫ ರವರೆಗೆ (ಸ್ವಯಂ ನಿವೃತ್ತಿವರೆಗೆ) ಸೇವೆ ಸಲ್ಲಿಸುತ್ತಿರುವಾಗಲೇ, ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಹಲವು ಹುದ್ದೆಗಳನ್ನು ನಿರ್ವಹಿಸಿದರು. ಅಫಿಲಿಯೇಶನ್ ಕಮಿಶನ್ ಸದಸ್ಯರಾಗಿ, ಅಧ್ಯಕ್ಷರಾಗಿ, ಅಕಾಡೆಮಿಕ್ ಕೌನ್ಸಿಲ್ ಸದಸ್ಯರಾಗಿ, ಕನ್ನಡ ಬೋರ್ಡ್ ಆಫ್ ಸ್ಟಡೀಸ್ ಸದಸ್ಯರಾಗಿ, ಸೆನೆಟ್ ಸದಸ್ಯರಾಗಿ, ಇಂಜಿನೀಯರಿಂಗ್ ಕಾಲೇಜುಗಳ ಸೇರ್ಪಡೆ ಸಮಿತಿ ಸದಸ್ಯರಾಗಿ, ನಿಗದಿತ ಕಾಲಾವಧಿಯಲ್ಲಿ ನಿಷ್ಠೆ ಮತ್ತು ದಕ್ಷತೆಗಳಿಂದ ಕರ್ತವ್ಯ ನಿರ್ವಹಿಸಿದರು.

ಈ ಕಾಲಾವಧಿಯಲ್ಲಿ ಕುವೆಂಪು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಹುದ್ದೆಯ ಅವಕಾಶವೂ ಬಂದು ಕದತಟ್ಟಿ ಹೋಗಿತ್ತು. ಅದರಲ್ಲೂ ಕೂಡ ತೀವ್ರ ಜಾತೀಯತೆಯ ಬಿರುಗಾಳಿ ಬೀಸಿ, ಸಿಂಡಿಕೇಟ್ ಸಭೆಯಲ್ಲಿ ಕೃಷ್ಣಪ್ಪನವರ ಹೆಸರು ಹರಿದಾಡಿತ್ತು. ಅಂದಿನ ಪತ್ರಿಕೆಗಳಲ್ಲಿ ಈ ವಿಷಯ "ಕುವೆಂಪು ವಿ.ವಿ.ಯಲ್ಲಿ ಹೆಡೆಯಾಡತೊಡಗಿರುವ ಜಾತಿ ಲಾಬಿ" ಎಂಬ ಶೀರ್ಷಿಕೆಯಲ್ಲಿ ಪ್ರಚುರಗೊಂಡಿತ್ತು.

ಕಾಲೇಜುಗಳ ಮೌಲ್ಯಾಂಕಗಳ ನಿರ್ಣಯದ ಸಂದರ್ಭದಲ್ಲಿ ೨೦೦೨–೨೦೦೫ರಲ್ಲಿ ಅಕ್ರಿಡಿಟೇಶನ್ ಕೌನ್ಸಿಲ್‌ನ ಪ್ರಸ್ತಾವನೆಯಲ್ಲಿ, ಹೇಳಿದ ಕೆಲವು ಮಾತುಗಳು ಹೀಗಿವೆ – "Prof. B.Krishnappa, a close associate of Prof. Gopalakrishna Adiga, with an indepth knowledge of Kannada literature was the first HOD of this department. That the literacy, cultural and social advancement of the department was possible mainly due to the foresight and able leadership provided by Prof. B. Krishnappa is beyond doubt".

ಅದೇ ರೀತಿ ಸರ್ ಎಂ.ವಿ ವಿಜ್ಞಾನ ಕಾಲೇಜಿನ ಒಟ್ಟು ವಾತಾವರಣ ಮತ್ತು ಪರಿಸರವನ್ನು ನಿರ್ಮಲವಾಗಿಸಿದ ಪ್ರೊ.ಕೃಷ್ಣಪ್ಪನವರನ್ನು, ಆಡಳಿತ ಮಂಡಳಿ ನಡಾವಳಿ ಪುಸ್ತಕದಲ್ಲಿ ದಾಖಲಿಸಿದೆ. ಸರ್ ಎಂ.ವಿ. ವಿಜ್ಞಾನ ಕಾಲೇಜನ್ನು, ಶಿವಮೊಗ್ಗ ಜಿಲ್ಲೆಯಲ್ಲಿ ಮಾದರಿ ಕಾಲೇಜನ್ನಾಗಿ ಮಾಡಿದ ಸಂತೃಪ್ತಿ ಅವರಿಗಿತ್ತು.

ಕೃಷ್ಣಪ್ಪ ಶಿಕ್ಷಣ ಮತ್ತು ಅಧ್ಯಾಪನ ವೃತ್ತಿಯಲ್ಲಿ ಎದುರಿಸಿದ ಹಲವು ನೋವುಗಳನ್ನು ತನ್ನ ವಿವೇಕ, ವಿಷಯ ಜ್ಞಾನ ಹಾಗೂ ಅಧ್ಯಾಪಕ ವೃತ್ತಿ ಪ್ರೀತಿಯಿಂದ ಗೆದ್ದಿದ್ದರು. ಒಳಬೇಗುದಿಯಲ್ಲಿ ಬೇಯುತ್ತಿದ್ದಾಗಲೂ ಕೃಷ್ಣಪ್ಪ, ಸಾಮಾಜಿಕ ಹೋರಾಟದ ಹಾದಿಯಿಂದ ವಿಮುಖರಾಗಲಿಲ್ಲ. ವೃತ್ತಿಯಲ್ಲಿನ ಹೆಚ್ಚಿನ ಜವಾಬ್ದಾರಿ ಮತ್ತು ದಸಂಸದ ಪುನಃಶ್ಚೇತನದ ದೃಷ್ಟಿಯಿಂದ ದಿ: ೭–೧೦–೮೪ರಲ್ಲಿ ರಾಜ್ಯ ಸಂಚಾಲಕತ್ವದ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುತ್ತಾ ಬರೆದ ಪತ್ರದಲ್ಲಿ, 'ಸಾಮಾನ್ಯ ಕಾರ್ಯಕರ್ತನಾಗಿ ಕೆಲಸ ಮಾಡುವುದಾಗಿ' ತಿಳಿಸಿದರು. ಆದರೆ ಈ ರಾಜೀನಾಮೆಯ ನಂತರವೂ ೧೯೮೪ರಿಂದ ೮೬ ರ ಅವಧಿಯಲ್ಲಿ ಕರ್ನಾಟಕದ ರಾಜಕೀಯ ಮತ್ತು ಸಾಮಾಜಿಕ ಜೀವನದಲ್ಲಿ ಆದ ನಿರ್ಣಾಯಕ ಬದಲಾವಣೆಗೆ, ಕದಸಂಸ ಮತ್ತು ಪ್ರೊ.ಬಿ.ಕೃಷ್ಣಪ್ಪ ಕಾರಣರಾದರು.

**(ಮುಂದುವರೆಯುವುದು)**

---

## 'ಪಂಚಮ'ದ ಕಥೆ-ವ್ಯಥೆ : ಒಂದು ಸ್ಪಷ್ಟೀಕರಣ

ಪ್ರಿಯ ಸಂಪಾದಕರೇ,

ಏಪ್ರಿಲ್ ಸಂಚಿಕೆಯಲ್ಲಿ 'ಪಂಚಮ' ಪತ್ರಿಕೆಯ ಹುಟ್ಟು, ಬೆಳವಣಿಗೆ ಮತ್ತು ಅದು ಎದುರಿಸಿದ ಸಮಸ್ಯೆಗಳ ಬಗೆಗೆ ಶ್ರೀಮತಿ ಇಂದಿರಾ ಕೃಷ್ಣಪ್ಪ ಅವರು ಬರೆದಿದ್ದನ್ನು ಓದಿದೆ. ಕೆಲವು ವಿಷಯದಲ್ಲಿ ಅವರಿಗೆ ಸರಿಯಾದ ಮಾಹಿತಿ ಸಿಕ್ಕಿಲ್ಲದಿರುವುದರಿಂದ ಅನೇಕ ತಪ್ಪು ಮಾಹಿತಿ ಪ್ರಕಟವಾಗಿದೆ. ಹಾಗಾಗಿ ಪಂಚಮ ಪತ್ರಿಕೆಯನ್ನು ಹುಟ್ಟು ಹಾಕಿ ಅದನ್ನು ನಿರ್ವಹಿಸಿದ ತಂಡದ ಸದಸ್ಯನಾಗಿ ಇಲ್ಲಿ ಕೆಲವು ಸ್ಪಷ್ಟನೆ ನೀಡಬಯಸುವೆ.

ದಲಿತ ಚಳುವಳಿಗೆ ಮೂಲ ಪ್ರೇರಣೆ ಬೂಸಾ ಚಳುವಳಿ ಸಂಬಂಧವಾಗಿ ದಲಿತ ವಿದ್ಯಾರ್ಥಿಗಳ ಮೇಲಾದ ಹಲ್ಲೆ ಮತ್ತು ಅದರಿಂದ ಉಂಟಾದ ಜಾಗೃತಿಯೇ ಕಾರಣ. 'ಪಂಚಮದ ಹುಟ್ಟಿಗೂ ಈ ಜಾಗೃತಿಯೇ ಪ್ರೇರಣೆ ಎನ್ನಬಹುದು. ಆ ದಿನಗಳಲ್ಲಿ ಬಸವಲಿಂಗಪ್ಪನವರ ಭಾಷಣದ ಸಭೆಗಳು, ನಂತರ ಲೋಹಿಯಾವಾದಿಗಳು ನಡೆಸುತ್ತಿದ್ದ ವಿಚಾರ ಸಂಕಿರಣ, ಪ್ರತಿಭಟನೆಗಳಲ್ಲಿ ಭಾಗವಹಿಸುತ್ತಿದ್ದ ಬರವಣಿಗೆ ಬಲ್ಲ ಮತ್ತು ಜಾಗೃತಗೊಂಡ ವಿದ್ಯಾರ್ಥಿಗಳಾದ ನಾವು ಒಂದು ಪತ್ರಿಕೆಯನ್ನು ತರುವ ಮೂಲಕ ದಲಿತರಲ್ಲಿ ಜಾಗೃತಿ ಮೂಡಿಸುವ ಮತ್ತು ಅದನ್ನು ದಲಿತರ ದನಿಯನ್ನಾಗಿ ಮಾಡಬೇಕೆನ್ನುವ ಕನಸು ಕಂಡೆವು.

ಮೊದಲಿಗೆ 'ಶೋಷಿತ' ಎನ್ನುವ ಹೆಸರಿನಲ್ಲಿ ಖಾಸಗಿ ಪ್ರಸಾರಕ್ಕೆಂದು ಹದಿನೈದು ದಿನಕ್ಕೊಮ್ಮೆ ಪತ್ರಿಕೆಯ ಪ್ರಕಟಣೆಯನ್ನು ಶುರು ಮಾಡಿದೆವು. 'ಶೋಷಿತ'ದ ಆರು ಸಂಚಿಕೆಗಳು ಬಂದವು. ನಂತರ ನೋಂದಣಿಗಾಗಿ ಪತ್ರಿಕಾ ರಿಜಿಸ್ಟ್ರಾರ್ ಅವರಿಗೆ ಕಳುಹಿಸಿದ ಐದು ಹೆಸರುಗಳಲ್ಲಿ ಸಿಕ್ಕಿದ್ದು 'ಪಂಚಮ' ಎನ್ನುವುದು. ಹೀಗೆ 'ಪಂಚಮ' ತಂದ ನಾವೆಲ್ಲ–ಅಂದರೆ ನಾನು, ಎಚ್. ಗೋವಿಂದಯ್ಯ, ಇಂದೂಧರ ಹೊನ್ನಾಪುರ, ಶಿವಮಲ್ಲು ದೇವನೂರು ಮತ್ತು ರಾಮದೇವ ರಾಕೆ–ಮೈಸೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದೆವು. ನಮ್ಮೆಲ್ಲರ ಮಾರ್ಗದರ್ಶಿ ಆಗ ತಾನೆ ಎಂ.ಎ ಮುಗಿಸಿ ಸಿಐಐಎಲ್‌ನಲ್ಲಿ ಕೆಲಸಕ್ಕೆ ಸೇರಿದ್ದ ದೇವನೂರ ಮಹಾದೇವ ಅವರು.

'ಶೋಷಿತ' ಶುರುಮಾಡಿದಾಗಲೇ ಪತ್ರಿಕೆಯ ಹಣಕಾಸು ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಮಹಾದೇವ ನಮ್ಮನ್ನೆಲ್ಲ ಕೂರಿಸಿಕೊಂಡು ಯಾರು ಸಂಪಾದಕರಾಗಬೇಕು. ಯಾರು ಪ್ರಕಾಶಕರಾಗಬೇಕು ಎಂದು ಚರ್ಚಿಸಿ ಇಂದೂಧರ ಸಂಪಾದಕ, ಗೋವಿಂದಯ್ಯ ಪ್ರಕಾಶಕರಾಗಿರಬೇಕು ಮತ್ತು ಶಿವಾಜಿ, ಶಿವಮಲ್ಲು ಮತ್ತು ರಾಕೆ ಸಂಪಾದಕೀಯ ಮಂಡಳಿಯಲ್ಲಿದ್ದುಕೊಂಡು ಕೆಲಸ ಮಾಡಬೇಕು ಎಂದು ಸೂಚಿಸಿದರು. ಅದರಂತೆ ನಾವು ಪತ್ರಿಕೆ ತರಲು ಕೆಲಸ ಪ್ರಾರಂಭಿಸಿದೆವು. ಆಗ ೧೯೭೬. ಈ ಮುಂಚೆ ಬೂಸಾ ಚಳುವಳಿಯ ದಿನಗಳಲ್ಲಿ ಭದ್ರಾವತಿಯಿಂದ ಬಿ. ಕೃಷ್ಣಪ್ಪ ಅವರು ಆಗಾಗ್ಗೆ ಮೈಸೂರಿಗೆ ಬಂದು ನಮ್ಮೊಡನೆ ಸಂಘಟನೆ ಮತ್ತು ಹೋರಾಟದ ಬಗೆಗೆ ಚರ್ಚಿಸುತ್ತಿದ್ದರಷ್ಟೆ.

ನಾನು ಎಂಎ ಮುಗಿಸಿದ ನಂತರ ೧೯೭೮ರಲ್ಲಿ ಬೆಂಗಳೂರಿನಲ್ಲಿ 'ಪ್ರಜಾವಾಣಿ' ಸೇರಿಕೊಂಡೆ. ನಂತರ ಇಂದೂಧರ ಅವರೂ ಬೆಂಗಳೂರಿನಲ್ಲಿ 'ಪ್ರಜಾವಾಣಿ' ಸೇರಿಕೊಂಡರು. ಆಗ ಸಂಪಾದಕ ಸ್ಥಾನವನ್ನು ರಾಮದೇವ ರಾಕೆ ಅವರಿಗೆ ವಹಿಸಿಕೊಡಲಾಯಿತು. ಅಷ್ಟೊತ್ತಿಗೆ ದಲಿತ ಸಂಘರ್ಷ ಸಮಿತಿಯು ಜನ್ಮ ತಾಳಿತು. ಮೈಸೂರಿನಲ್ಲಿ ಪತ್ರಿಕೆ ನಡೆಸುವುದು ಆರ್ಥಿಕವಾಗಿ ಕಷ್ಟವಾದಾಗ ಅದನ್ನು ಭದ್ರಾವತಿಗೆ ವರ್ಗಾಯಿಸಲಾಯಿತು. ಮತ್ತೆ ಬೆಂಗಳೂರಿಗೆ ತರಲಾಯಿತು. ರಾಕೆ ಬೆಂಗಳೂರಿಗೆ ಬಂದರು. ಓ. ಶ್ರೀಧರನ್ ಅವರ ರೂಮಿನಲ್ಲಿದ್ದುಕೊಂಡು ಪತ್ರಿಕೆ ಶುರುಮಾಡಲಾಯಿತು. ಆನಂತರ ಮತ್ತೆ ಸಮಸ್ಯೆಯಾದಾಗ ಅದನ್ನು ನನ್ನ ಸುಪರ್ದಿಗೆ ವಹಿಸಲಾಯಿತು. ರಾಕೆಯವರೇ ಸಂಪಾದಕರಾಗಿದ್ದರು. ನನ್ನ ಸುಪರ್ದಿನಲ್ಲಿದ್ದಾಗ ಬಹುತೇಕ ಖರ್ಚು ವೆಚ್ಚವೆಲ್ಲ ನನ್ನ ಮೇಲೆಯೇ ಬಿದ್ದಿತು. ನಂತರ ೧೯೮೨ರಲ್ಲಿ ನಾನು ಧಾರವಾಡಕ್ಕೆ ವರ್ಗಾವಣೆಗೊಂಡಾಗ ಪತ್ರಿಕೆಯನ್ನು ಮೈಸೂರಿಗೇ ವಾಪಸ್ ಕಳುಹಿಸುವ ಸ್ಥಿತಿ ಬಂದಿತು. ಆ ನಂತರದ ದಿನಗಳಲ್ಲಿ ನಾನು ನನ್ನ ಪತ್ರಿಕಾ ವೃತ್ತಿಗೆ ಹೆಚ್ಚು ಗಮನ ನೀಡದ ಕಾರಣ ಪತ್ರಿಕೆಯ ಪ್ರಕಟಣೆ ಮತ್ತು ಮುದ್ರಣದ ಸಂಪರ್ಕ ಕಡಿಮೆ ಆಯಿತು. ಇದಿಷ್ಟು ಪಂಚಮ ಪತ್ರಿಕೆಯ ಆರಂಭದ ದಿನಗಳ ವಾಸ್ತವ ಸಂಗತಿ.

**–ಶಿವಾಜಿ ಗಣೇಶನ್**, ಬೆಂಗಳೂರು

# ಸ್ಮಾರ್ಟ್ ಸಿಟಿ: ಯಾರಿಗಾಗಿ? ಯಾಕಾಗಿ?

ಮೂಲ ಲೇಖನ: **ಅನು ಭೂಯಾನ್**
ಮತ್ತು **ದುನು ರಾಯ್**
ಸಂಗ್ರಹಾನುವಾದ: **ಎಂ. ರಾಜು**

**ಉದಾರೀಕರಣ ನವ ಉದಾರೀಕರಣದ ವೇಷ ತಾಳಿ ನಮ್ಮನ್ನು ತಬ್ಬಿಬ್ಬು ಮಾಡಿರುವಂತೆ ಅಭಿವೃದ್ಧಿ ಎಂಬುದೂ ಈಗ ನವ ಅಭಿವೃದ್ಧಿಯ ರೂಪ ತಾಳಿ ನಮ್ಮನ್ನು ಇನ್ನಷ್ಟು ತಬ್ಬಿಬ್ಬುಗೊಳಿಸುತ್ತಿರುವಂತಿದೆ. ಈ ನವ ಅಭಿವೃದ್ಧಿಯ ಒಂದು ಮಾದರಿಯಾಗಿ ರಾಷ್ಟ್ರದ ಗಮನ ಸೆಳೆದಿರುವ 'ಸ್ಮಾರ್ಟ್' (ಕನ್ನಡದಲ್ಲಿ 'ಚೂಟಿ' ಎನ್ನೋಣವೇ?) ನಗರಗಳ ಕಲ್ಪನೆ ನಮ್ಮ (ನವ)ಮಧ್ಯಮ ವರ್ಗಗಳ ಮುದ್ದು ಕೂಸಾಗಿದ್ದರಲ್ಲಿ ಆಶ್ಚರ್ಯವಿಲ್ಲ. ಬದುಕಲು ನರಕ ಕೂಪಗಳಂತಾಗುತ್ತಿರುವ ನಗರಗಳನ್ನು(ಹಳ್ಳಿಗಳೇನಾಗಿವೆಯೋ?) ಅತ್ಯಾಧುನಿಕವಾದ ನಾಗರೀಕ ಸೌಲಭ್ಯಗಳೊಂದಿಗೆ ಸಜ್ಜುಗೊಳಿಸಿ ಸುಗಮ ಬದುಕಿಗೆ ಅನುವು ಮಾಡಿಕೊಡುವ ಆಶ್ವಾಸನೆಯೊಂದಿಗೆ ಪರಿಚಯವಾದ ಈ ಕಲ್ಪನೆ ಎರಡು ವರ್ಷಗಳ ನಂತರ ತಾಳುತ್ತಿರುವ ರೂಪಗಳು ಗಾಬರಿ ಹುಟ್ಟಿಸುವಂತಿವೆ. ಆಯ್ದ ನಗರಗಳ ಒಂದು ಚೂರು ಭಾಗವನ್ನು ಮಾತ್ರ 'ಸ್ಮಾರ್ಟ್' ಮಾಡಲು ಹೊರಟಿರುವ ಸಾವಿರಾರು ಕೋಟಿ ರೂಪಾಯಿಗಳ ಏಕ ಕೇಂದ್ರದ ನಿಯಂತ್ರಣದ ಈ ಯೋಜನೆ, ಈಗ ರೂಪುಗೊಳ್ಳುತ್ತಿರುವುದು ಜನಸಾಮಾನ್ಯರ ಬದುಕಿನ ಆದ್ಯತೆಗಳಿಗಿಂತ ಮುಖ್ಯವಾಗಿ ಕಾರ್ಪೋರೇಟ್ ಕಂಪನಿಗಳಿಂದ ಮತ್ತು ಭೂ ದರೋಡೆಕೋರರಿಂದ ಲೂಟಿಗೆ ಅನುವು ಮಾಡಿಕೊಟ್ಟು ಜನರ ಮೇಲೆ ಇನ್ನಷ್ಟು ತೆರಿಗೆ ಹೊರಿಸುವ ಒಂದು ಮಹಾ ಬಂಡವಾಳಶಾಹಿ ಹುನ್ನಾರವಾಗಿ ಎಂಬುದು ನಿಧಾನವಾಗಿ ಬೆಳಕಿಗೆ ಬರುತ್ತಿದೆ. ಪ್ರಸ್ತುತ ಲೇಖನ ಇದನ್ನು ಹಲವು ಉದಾಹರಣೆಗಳೊಂದಿಗೆ ವಿಷದೀಕರಿಸುವ ಪ್ರಯತ್ನ ಮಾಡುತ್ತದೆ.**–ಸಂ



೨೦೧೪ರ ಲೋಕಸಭಾ ಚುನಾವಣಾ ಸಂದರ್ಭದಲ್ಲಿ ಭಾರತದಾದ್ಯಂತ ನೂರು *ಸ್ಮಾರ್ಟ್* ನಗರಗಳನ್ನು ನಿರ್ಮಿಸುವ ಆಶ್ವಾಸನೆಯನ್ನು ನರೇಂದ್ರ ಮೋದಿಯವರು ನೀಡಿದ್ದರು. ಬಿಜೆಪಿಯ ಚುನಾವಣಾ ಪ್ರಣಾಳಿಕೆಯಲ್ಲಿ ಈ ವಿಚಾರವು ಪ್ರಾಮುಖ್ಯತೆಯನ್ನು ಪಡೆದಿತ್ತು. ಈ ಹೊಸ *ಸ್ಮಾರ್ಟ್* ನಗರಗಳಿಂದ ಬೇಕಾದಷ್ಟು ಉದ್ಯೋಗ ಸೃಷ್ಟಿಯಾಗುತ್ತದೆ, ಉತ್ತಮ ಸಂಚಾರ, ಸಾಗಾಣಿಕೆ, ೨೪ ತಾಸೂ ನೀರು ಪೂರೈಕೆ, ಎಲ್ಲರಿಗೂ ಮನೆ, ರಕ್ಷಣೆ, ಸುರಕ್ಷತೆ, ಕೆಲಸದ ಸ್ಥಳಗಳ ಸಮೀಪವೇ ವಾಸಸ್ಥಳಗಳ ನಿರ್ಮಾಣ ಇತ್ಯಾದಿಗಳೆಲ್ಲಾ ಸಾಧ್ಯವಾಗಲಿವೆ ಎಂಬ ವರ್ಣಮಯ ಚಿತ್ರಗಳನ್ನು ಜನರಿಗೆ ತೋರಿಸಲಾಯಿತು. ಹೆಚ್ಚುತ್ತಿರುವ ನಗರೀಕರಣವನ್ನು ಒಂದು ಸಮಸ್ಯೆ ಎಂದು ಪರಿಗಣಿಸದೆ, ಅದನ್ನು ಅವಕಾಶವೆಂದೇ ಪರಿಗಣಿಸೋಣ, ಸವಾಲಾಗಿ ಸ್ವೀಕರಿಸೋಣ ಎಂಬ ಉತ್ಸಾಹದ ಮಾತುಗಳೂ ಕೇಳಿ ಬಂದವು. ಹೆಚ್ಚು ದಕ್ಷವೂ, ಸುರಕ್ಷಿತವೂ, ಸೇವೆಗಳ ನಿರ್ವಹಣೆಯಲ್ಲಿ ಉತ್ತಮವೂ ಆಗಿರುವ, ಜಾಲಸಂಪರ್ಕಿತ ನಗರಗಳ ಸೃಷ್ಟಿ ಈ ಮಹಾನ್ ಪ್ರಯತ್ನದ ಗುರಿ ಎಂಬುದಾಗಿ ಹೇಳಲಾಯಿತು. ಸಾಮಾನ್ಯವಾಗಿ ಅಭಿವೃದ್ಧಿಯ ಲಾಭಗಳು ತಲುಪದ ಬಡವರನ್ನೂ ಈ ಯೋಜನೆಯ ಅನುಕೂಲಗಳು ತಲುಪಬಹುದು ಎಂಬ ನಿರೀಕ್ಷೆಗಳು ಮೂಡಿದವು.

ಈ ಸಂಭ್ರಮಾಚರಣೆಗಳೆಲ್ಲಾ ಮುಗಿದು ಎರಡು ವರ್ಷಗಳೇ ಸಂದಿವೆ. ಮೋದಿಯವರು ತೋರಿದ ಮಾಯಾ ನಗರಿಗಳು ಸಾಕ್ಷಾತ್ಕಾರವಾಗುವ ಲಕ್ಷಣಗಳೇನೂ ಕಂಡುಬರುತ್ತಿಲ್ಲ. ಆದರೆ ಈಗ ಮೂಡುತ್ತಿರುವ ಸ್ಮಾರ್ಟ್ ಸಿಟಿ ಯೋಜನೆಯ ಲಾಭಗಳು ಬಡವರನ್ನು ತಲುಪದಿರುವುದು ಮಾತ್ರವಲ್ಲ, ಯಾರದೋ ದುಡ್ಡು ಎಲ್ಲಮ್ಮನ ಜಾತ್ರೆ ಎಂಬ ಮಾತಿನಂತೆ ತಮಗೆ ಸಂಬಂಧಿಸದ ಪ್ರದೇಶಗಳ ಮೇಲಿನ ಯಾವ್ಯಾವುದೋ ಖರ್ಚಿನ ಹೊರೆಯನ್ನು ಇವರು ಹೊರಬೇಕಾದಂಥ ಸ್ಥಿತಿ ಕಂಡು ಬರುತ್ತಿದೆ.

ಈ ಯೋಜನೆಯ ಅನ್ವಯ ಪ್ರಥಮ ಹಂತದಲ್ಲಿ *ಸ್ಮಾರ್ಟ್* ಆಗಲಿರುವ ನಗರಗಳಲ್ಲಿ ಕೈಗೊಳ್ಳಲಾಗುವ ಕಾಮಗಾರಿಗಳು ಮತ್ತಿತರ ಕೆಲಸದ ಸ್ಥೂಲ ರೂಪುರೇಷೆಗಳನ್ನು ಗಮನಿಸಿದರೆ ಯಾವುದೇ ರೀತಿಯ ಭರವಸೆ ಮೂಡುವುದಕ್ಕಿಂತ ನಿರಾಸೆಯೇ ಖಚಿತ ಎಂಬ ಸೂಚನೆಗಳು ದೊರೆಯುತ್ತಿವೆ. ಈ ಯೋಜನೆಯಡಿ ಆಯ್ಕೆಯಾದ ನಗರಗಳು ಸಂಪೂರ್ಣವಾಗಿ ಹೊಸ ರೂಪವನ್ನೇ ಪಡೆದು ಅತ್ಯಾಧುನಿಕ ವ್ಯವಸ್ಥೆಗಳೊಂದಿಗೆ ಸುಂದರಗೊಳ್ಳಲಿವೆ ಎಂಬ ನಂಬಿಕೆ ಹುಸಿಯಾಗಿ ಬೃಹತ್ ನಗರಗಳ ಒಳಗೆ ಅಂಗೈ ಅಗಲದ ನಿರ್ದಿಷ್ಟ ಸ್ಥಳಕ್ಕೆ ಮಾತ್ರವೇ ಯೋಜನೆಯು ಅನ್ವಯವಾಗುವುದು ಮತ್ತು ಇದರ ಅನುಷ್ಠಾನಕ್ಕಾಗಿ special purpose vehicle (SPV) ಎಂಬ ಹೆಸರಿನ ಹೊಸ ಆಡಳಿತ ಯಂತ್ರವೊಂದು ರೂಪುಗೊಂಡು, ಅದು ನೇರವಾಗಿ ಕೇಂದ್ರದ ಸುಪರ್ದಿಯಲ್ಲಿ ಕೆಲಸ ಮಾಡುವುದು ಎನ್ನಲಾಗುತ್ತಿದೆ. ಇಂದು ಭಾರತದ ಯಾವುದೇ ನಗರದ ಜನ ಬಯಸುವುದು ಉತ್ತಮ ರಸ್ತೆ, ಚರಂಡಿ, ನೀರು–ವಿದ್ಯುತ್ ಪೂರೈಕೆ ಮತ್ತು ಸಾಗಾಣಿಕಾ ವ್ಯವಸ್ಥೆಗಳಂತಹ ಮೂಲಭೂತ ಅಗತ್ಯಗಳನ್ನು. ಈ *ಸ್ಮಾರ್ಟ್* ಯೋಜನೆಯಡಿ ಆಯ್ಕೆಯಾಗಿರುವ ನಗರಗಳಲ್ಲಿ ನಡೆದಿರುವ ಪೂರ್ವಭಾವಿ ಜನಾಭಿಪ್ರಾಯ ಸಂಗ್ರಹಣೆಯ ಸಂದರ್ಭದಲ್ಲಿ ವ್ಯಕ್ತವಾಗಿರುವ ಜನರ ಆದ್ಯತೆಗಳೂ ಕೂಡ ಇವೇ ಆಗಿವೆ. ಆದರೆ *ಸ್ಮಾರ್ಟ್* ನಗರ ಯೋಜಕರ ಆದ್ಯತೆಗಳೇ ಬೇರೆಯಾಗಿವೆ.

ಯೋಜನೆಯ ಪ್ರಥಮ ಹಂತದಲ್ಲಿ ಆಯ್ಕೆಯಾಗಿರುವ ವಿಶಾಖಪಟ್ಟಣ ಮತ್ತು ಬೆಳಗಾಂ ನಗರಗಳಲ್ಲಿ ಜನ ನಿರೀಕ್ಷಿಸುವುದೇನು? ಅಲ್ಲಿ ಆಗಲಿರುವುದೇನು? ಎನ್ನುವುದನ್ನು ತುಸು ಪರಿಶೀಲಿಸೋಣ. ವಿಶಾಖಪಟ್ಟಣ ೫೪೪ ಚದರ ಕಿಲೋಮೀಟರ್ ವ್ಯಾಪಿಸಿರುವ ೧೯ ಲಕ್ಷ  ಜನಸಂಖ್ಯೆಯುಳ್ಳ ನಗರ. ಈ ವಿಸ್ತಾರದಲ್ಲಿ ಕೇವಲ ೭ ಚದರ ಕಿ.ಮೀ. ಸ್ಮಾರ್ಟ್ ಸಿಟಿ ಯೋಜನೆಗೆ ಒಳಪಡಲಿದ್ದು, ೧೦ ರಿಂದ ೧೫ ವರ್ಷಗಳ ಯೋಜನಾ ವೆಚ್ಚ ೧೯೩೮ ಕೋಟಿ ರೂಪಾಯಿಗಳು. ಇಲ್ಲಿ ನಡೆದ ಪೂರ್ವಭಾವಿ ಸಮೀಕ್ಷೆಯಲ್ಲಿ ಜನ ಬಯಸಿದ್ದು ಆಪತ್ಕಾಲೀನ ನಿರ್ವಹಣೆ (ವಿಶಾಖಪಟ್ಟಣ ಪದೇ ಪದೇ ಚಂಡಮಾರುತ ವಿಕೋಪಕ್ಕೆ ತುತ್ತಾಗುವ ಬಂದರು ನಗರ), ಚರಂಡಿ, ನೀರು ಪೂರೈಕೆ ಇತ್ಯಾದಿ. ಆದರೆ *ಸ್ಮಾರ್ಟ್* ಸಿಟಿ ಯೋಜಕರ ಆದ್ಯತೆಗಳು ಛಾವಣಿಗಳ ಮೇಲೆ ಸೌರ ಫಲಕ ಅಳವಡಿಕೆ, ಭೂಗತ ವಿದ್ಯುತ್ ಕೇಬಲ್‌ಗಳ ಅಳವಡಿಕೆ, ಕಡಲ ತೀರದ ಸೌಂದರ್ಯವರ್ಧನೆ ಇತ್ಯಾದಿ. ಜನರ ಆದ್ಯತೆಗಳ ಕಾಮಗಾರಿಗಳಿಗೆ ಮೀಸಲಾದ ಹಣ ಒಟ್ಟು ಯೋಜನಾ ವೆಚ್ಚದ  ಶೇ. ೧೦ಕ್ಕಿಂತ ಕಡಿಮೆ. ಆಪತ್ಕಾಲೀನ ಪರಿಸ್ಥಿತಿಯ ನಿರ್ವಹಣೆಗೆ ಮೀಸಲಾದ ಹಣದ ಶೇ. ೯೩ ಭಾಗ ನವೀಕರಣಕ್ಕೆ ಆಯ್ಕೆಯಾದ ಆರ್. ಕೆ. ಬೀಚ್ ಎಂಬ ಕಡಲತೀರದ ಒಂದು ಸಣ್ಣ ಪ್ರದೇಶಕ್ಕಾಗಿ ಖರ್ಚಾಗಲಿದೆ. ಹಾಗೆ ನೋಡಿದರೆ, ಈ ವಿಶಾಖಪಟ್ಟಣವು JNNURM ಎಂಬ ಅಭಿವೃದ್ಧಿ ಯೋಜನೆಯಡಿ ತುಸು ಅಭಿವೃದ್ಧಿಯನ್ನು ಕಂಡು ಭಾರತದ ಇತರೆ ಎಷ್ಟೋ ನಗರಗಳಿಗೆ ಹೋಲಿಸಿದಲ್ಲಿ ಸುಮಾರಾಗಿ ಉತ್ತಮವಾಗಿಯೇ ಇರುವ ನಗರ.

ಹಾಗೆಯೇ ಈ ಯೋಜನೆಯ ಪ್ರಥಮ ಹಂತದಲ್ಲಿ ಆಯ್ಕೆಯಾದ ಮತ್ತೊಂದು ನಗರ ಬೆಳಗಾವಿಯನ್ನು ನೋಡೋಣ. ಈ ನಗರದ ವಿಸ್ತೀರ್ಣ ೯೪ ಚದರ ಕಿ.ಮೀ. ಜನಸಂಖ್ಯೆ ೫ ಲಕ್ಷ. ಈ ನಗರದಲ್ಲಿ *ಸ್ಮಾರ್ಟ್* ಮಾದರಿ ಅಭಿವೃದ್ಧಿಗೆ ನಿಗದಿಯಾಗಿರುವ ಪ್ರದೇಶ ಒಟ್ಟು ವಿಸ್ತೀರ್ಣದ ೧೧% ರಷ್ಟು

ಮಾತ್ರ. ಆಯ್ಕೆಯಾದ ಪ್ರದೇಶದ ಜನಸಂಖ್ಯೆ ಒಟ್ಟು ಜನಸಂಖ್ಯೆಯ ಶೇ.೧೬ ಮಾತ್ರ. ಇಲ್ಲಿನ ಜನ ಬಯಸಿದ್ದು ನೀರು–ವಿದ್ಯುತ್ ಪೂರೈಕೆ, ಸರಾಗವಾದ ಸಂಚಾರ ಇತ್ಯಾದಿ. ಸ್ಮಾರ್ಟ್ ಸಿಟಿ ಯೋಜಕರ ಆದ್ಯತೆಗಳು ಇಂಧನ ಕಾರ್ಯಕ್ಷಮತೆಯನ್ನು ಉತ್ತಮ ಪಡಿಸುವುದು, ನಗರ ಸಂಚಾರ ಇತ್ಯಾದಿ. ಯೋಜನಾವೆಚ್ಚದ ವಿಚಾರದಲ್ಲಿ ಬೆಳಗಾವಿ ವಿಶಾಖಪಟ್ಟಣದಂತಲ್ಲ. ಇಲ್ಲಿ ಶೇ.೨೬ರಷ್ಟು ಹಣವನ್ನು ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವ (PPP) ರೀತಿಯ ಹೂಡಿಕೆಯಿಂದ ನಿರೀಕ್ಷಿಸಲಾಗುತ್ತಿದೆ.

ಸ್ಮಾರ್ಟ್ ನಗರಗಳ ಬಗ್ಗೆ ಮತ್ತಷ್ಟು ಅಂಕಿ ಅಂಶಗಳನ್ನು ಗಮನಿಸೋಣ. ೪೬೪ ಚದರ ಕಿ.ಮೀ. ವಿಸ್ತೀರ್ಣವುಳ್ಳ ಅಹಮದಾಬಾದ್ ನಗರದ ಜನಸಂಖ್ಯೆ ೩೫ ಲಕ್ಷ. ಇಲ್ಲಿ *ಸ್ಮಾರ್ಟ್* ಯೋಜನೆಯ ಅನುಷ್ಠಾನಕ್ಕೆ ನಿಗದಿಯಾಗಿರುವ ಪ್ರದೇಶ ಬರೀ ೩ ಚದರ ಕಿ.ಮೀ! ಯೋಜನಾ ವೆಚ್ಚ ೨೯೯೦ ಕೋಟಿ ರೂಪಾಯಿ! ಜಬಲ್‌ಪುರದ ವಿಸ್ತೀರ್ಣ ೩೬೭ ಚದರ ಕಿ.ಮೀ. ಜನಸಂಖ್ಯೆ ೧೦.೩ ಲಕ್ಷ. *ಸ್ಮಾರ್ಟ್* ಆಗಲಿರುವ ಪ್ರದೇಶ ೩ ಚದರ ಕಿ.ಮೀ. ಅಂದಾಜು ವೆಚ್ಚ ೩೯೮ ಕೋಟಿ ರೂಪಾಯಿ! ಸೂರತ್‌ನ ವಿಸ್ತೀರ್ಣ ೩೨೬ ಚದರ ಕಿ.ಮೀ. ಜನಸಂಖ್ಯೆ ೨೪ ಲಕ್ಷ. ಅಂದಾಜು ವೆಚ್ಚ ೨೫೯೭ ಕೋಟಿ ರೂಪಾಯಿ. ಇಷ್ಟೊಂದು ಅಗಾಧ ವಿಸ್ತೀರ್ಣದ ಅಪಾರ ಜನಸಂಖ್ಯೆಯ ನಗರಗಳಲ್ಲಿ ಕೇವಲ ಮೂರು ಅಥವಾ ನಾಲ್ಕು ಚದರ ಕಿ.ಮೀ ಪ್ರದೇಶಕ್ಕೆ ಮಾತ್ರ(ಅಂದರೆ ಶೇ. ೫ರಿಂದ ೧೦ ಭಾಗ) ಅನ್ವಯವಾಗುವ ಯೋಜನೆಗಾಗಿ ವ್ಯಯವಾಗಲಿರುವ ಹಣ ಸಹಸ್ರಾರು ಕೋಟಿ ರೂಪಾಯಿಗಳು! ಈ ಯೋಜನೆಗಳ ಅನುಷ್ಠಾನಕ್ಕೆ ಬೇಕಾಗುವ ಕಾಲಾವಧಿ ಸುಮಾರು ೧೦ ರಿಂದ ೧೫ ವರ್ಷಗಳು ಎಂಬುದು ಕೇಂದ್ರ ನಗರಾಭಿವೃದ್ಧಿ ಮಂತ್ರಿ ವೆಂಕಯ್ಯನಾಯ್ಡು ಅವರ ಅಭಿಪ್ರಾಯ.

ಇಷ್ಟಕ್ಕೂ ಈ ಯೋಜನೆಗಳ ಸಂಪೂರ್ಣ ವೆಚ್ಚವನ್ನು ಕೇಂದ್ರವು ಭರಿಸುವುದಿಲ್ಲ. ಈ ಅಗಾಧ ವೆಚ್ಚದ ಒಂದು ಭಾಗ ಕೇಂದ್ರದಿಂದ ಕಂತುಗಳಲ್ಲಿ ಬಂದರೆ, ಮತ್ತೊಂದು ಭಾಗ ಖಾಸಗಿಯವರಿಂದ ಬರಬೇಕು. ಅಲ್ಲಿನ ನಗರಪಾಲಕೆಯೋ ಮಹಾನಗರಪಾಲಿಕೆಯೋ ಈ ವೆಚ್ಚದ ಮತ್ತೊಂದು ಭಾಗವನ್ನು ಅಲ್ಲಿನ SPVಯಲ್ಲಿ ಹೂಡಿಕೆ ಮಾಡುವುದರ ಮೂಲಕ ಭರಿಸಬೇಕು. ಹೀಗೆ ಹೂಡಿಕೆ ಮಾಡಬೇಕಾದ ಮೊತ್ತವನ್ನು ನಗರಪಾಲಿಕೆಗಳು ಜನರ ಮೇಲೆ ತೆರಿಗೆ ಹೇರದೆ ಹೇಗೆ ಸಂಗ್ರಹಿಸಲು ಸಾಧ್ಯ? ಇಷ್ಟೊಂದು ಅಗಾಧವಾದ ಹೂಡಿಕೆಗೆ ಪ್ರತಿಯಾಗಿ ಖಾಸಗೀ ಹೂಡಿಕೆದಾರರಿಗೆ ನಗರ ಪಾಲಿಕೆಗಳಿಗೆ ಬರುವ ಲಾಭವಾದರೂ ಏನು ಎಂಬುದು ಸ್ಪಷ್ಟವಾಗಿಲ್ಲ. ಉದಾಹರಣೆಗೆ ಕೊಚ್ಚಿ ನಗರಪಾಲಿಕೆಯು ಅಲ್ಲಿನ SPV ಯಲ್ಲಿ ಹೂಡಿಕೆ ಮಾಡುವುದಕ್ಕಾಗಿ ೫೦೦ ಕೋಟಿ ರೂಪಾಯಿಗಳನ್ನು ಸಂಗ್ರಹಿಸಬೇಕೆಂದು ನಿರೀಕ್ಷಿಸಲಾಗುತ್ತಿದೆ. ಕೊಚ್ಚಿ ನಗರಪಾಲಿಕೆಯ ಒಟ್ಟು ವಾರ್ಷಿಕ ಆದಾಯವೇ ಸುಮಾರು ೫೦೦ ಕೋಟಿ ಇರುವಾಗ ಸ್ಮಾರ್ಟ್ ಯೋಜನೆಗಾಗಿ ಈ ಪ್ರಮಾಣದ ಹಣವನ್ನು ಕೊಚ್ಚಿ ನಗರಪಾಲಿಕೆ ಎಲ್ಲಿಂದ ತರಲು ಸಾಧ್ಯ?

SPVಗಳ ಆಡಳಿತಾಧಿಕಾರಿಗಳು ನೇರವಾಗಿ ಕೇಂದ್ರದಿಂದ ನಿಯುಕ್ತರಾಗುವುದರಿಂದ ಅವರ ಬಳಿ ಅಪಾರವಾದ ಹಣ ಇದ್ದು ಯಾವ ಚುನಾಯಿತ ಪ್ರತಿನಿಧಿಗೂ ಸ್ಥಳೀಯ ಸಂಸ್ಥೆಗಳಿಗೂ ಅವರು ಉತ್ತರದಾಯಿಗಳಾಗದೇ ಇರುವುದರಿಂದ ಸ್ಥಳೀಯ ನಿಯಂತ್ರಣವೇ ಇಲ್ಲದೇ ಅವರು ಸರ್ವಾಧಿಕಾರಿಗಳೂ ಜನಕಂಟಕರೂ ಆಗುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಸ್ಥಳೀಯ ಸಮಸ್ಯೆಗಳು ಅವರು ಸ್ಪಂದಿಸಲಾರರು. ಈ *ಸ್ಮಾರ್ಟ್* ನಗರಗಳ ರೂಪುರೇಷೆ ಕಾರ್ಯವೈಖರಿಗಳು ಇನ್ನೂ ಅಸ್ಪಷ್ಟವಾಗಿರುವುದರಿಂದ ಇವು ಭಾರೀ ಗೊಂದಲಕ್ಕೆ, ಅನಗತ್ಯ ಘರ್ಷಣೆಗೆ ಅಗಾಧ ಅಸಮಾನತೆಗೆ ಕಾರಣವಾಗುವಂತೆ ಕಂಡುಬರುತ್ತಿದೆ. *ಸ್ಮಾರ್ಟ್* ನಗರಗಳು ಅಸ್ತಿತ್ವಕ್ಕೆ ಬರುವ ಮೊದಲೇ ಹಲವೆಡೆ ಇದಕ್ಕೆ ವಿರೋಧ ವ್ಯಕ್ತವಾಗತೊಡಗಿದೆ. ತಮ್ಮ ನಗರಗಳು ಭಾರೀ ಅಭಿವೃದ್ಧಿ ಕಾಣಲಿವೆ ಎಂದು ಭಾವಿಸಿದ ಜನರಿಗೆ ಭ್ರಮನಿರಸನವಾಗತೊಡಗಿದೆ. ಸಾರ್ವಜನಿಕ ಭೂಮಿಯನ್ನು ಖಾಸಗಿಯವರಿಗೆ ಹಸ್ತಾಂತರಿಸುವ, ಅದೆಷ್ಟೋ ಅನಗತ್ಯ ವಿದೇಶೀ ತಾಂತ್ರಿಕ ಸಲಕರಣೆಗಳನ್ನು ತಮ್ಮ ಮೇಲೆ ಹೇರುವ ಏಜೆಂಟರಂತೆ ಈ SPVಗಳು ಗೋಚರಿಸತೊಡಗಿವೆ. ಭೂಪಾಲ್‌ನಲ್ಲಿ ಸುಸ್ಥಿತಿಯಲ್ಲಿರುವ ೪೦೦೦ ಮನೆಗಳನ್ನು ನೆಲಸಮಗೊಳಿಸಿ ೪೦೦೦೦ ಮರಗಳನ್ನು ಕಡಿದು ೬೦೦೦ ಕುಟುಂಬಗಳನ್ನು ಎತ್ತಂಗಡಿ ಮಾಡಿ ೩೦೦ ಎಕರೆ ಜಾಗವನ್ನು ಖಾಸಗಿ ಬಿಲ್ಡರ್‌ಗಳಿಗೆ ಹರಾಜು ಮಾಡುವ ಪಿತೂರಿಯ ಭಾಗವೇ ಈ *ಸ್ಮಾರ್ಟ್* ಸಿಟಿ ಯೋಜನೆ ಎಂಬ ಸಂಶಯದಿಂದ ಅಲ್ಲಿನ ನಿವಾಸಿಗಳು ಇದನ್ನು ವಿರೋಧಿಸತೊಡಗಿದ್ದಾರೆ. ಈ ಅನುಮಾನ ಸಂಪೂರ್ಣ ನಿರಾಧಾರವಾದುದಲ್ಲ. ಏಕೆಂದರೆ, ಹಿಂದಿನ ಮರುಸಾಂದ್ರೀಕರಣ (redensification) ಯೋಜನೆಯ ಅನ್ವಯ ಸರ್ಕಾರೀ ಭೂಮಿಯನ್ನು *ಗ್ಯಾಮನ್ ಇಂಡಿಯಾ* ಎಂಬ ಕಂಪನಿಗೆ ಬಿಡಿಗಾಸಿನ ಬೆಲೆಗೆ ನೀಡಲಾಗಿದ್ದು ಸರ್ಕಾರೀ ಮನೆಗಳನ್ನು ನೆಲಸಮಗೊಳಿಸಲಾದ ಆ ಸ್ಥಳದಲ್ಲಿ ನಿರ್ಮಿಸಿದ ಎರಡು ಕೋಣೆಯ ಐಷಾರಾಮಿ ಫ್ಲಾಟ್‌ಗಳು ತಲಾ ೧.೪ ಕೋಟಿ ರೂಪಾಯಿಗಳಿಗೆ ಮಾರಾಟವಾಗುತ್ತಿರುವುದು ಅವರಿಗೆ ತಿಳಿದಿದೆ.

*ಸ್ಮಾರ್ಟ್* ಸಿಟಿ ಯೋಜನೆಯ ಪ್ರಥಮ ಹಂತದಲ್ಲಿ ಆಯ್ಕೆಯಾಗಿರುವ ನಗರಗಳು ದೇಶದ ಬೇರೆ ಎಷ್ಟೋ ನಗರಗಳಿಗಿಂತ ಉತ್ತಮ ಸ್ಥಿತಿಯಲ್ಲಿ ಇರುವಂತಹವುಗಳು. ಉದಾಹರಣೆಗೆ ದೆಹಲಿಯ ಇಂಡಿಯಾ ಗೇಟ್, ಕನ್ನಾಟ್ ಪ್ಲೇಸ್, ಚಾಣಕ್ಯ ಪುರಿ, ಲೋಧಿ ರಸ್ತೆಗಳಂತಹ ಪ್ರದೇಶಗಳು ಈಗಾಗಲೇ ವಿಶಾಲ ರಸ್ತೆಗಳನ್ನೂ ಉದ್ಯಾನಗಳನ್ನೂ ಅತ್ಯುತ್ತಮ ವಾಸ್ತುಶಿಲ್ಪವನ್ನು ಹೊಂದಿ ದೇಶದಲ್ಲೇ ಅತ್ಯುತ್ತಮವಾಗಿರುವ ಪ್ರದೇಶಗಳಾಗಿವೆ. ದೆಹಲಿಯ ಉಳಿದ ಭಾಗಗಳಲ್ಲಿ ಮನುಷ್ಯವಾಸಕ್ಕೆ ಯೋಗ್ಯವೇ ಅಲ್ಲದ ಪ್ರದೇಶಗಳಲ್ಲಿ ಅಪಾರ ಸಂಖ್ಯೆಯ ಜನ ಅತ್ಯಂತ ಹೀನ ಸ್ಥಿತಿಯಲ್ಲಿರುವಾಗ ಈಗಾಗಲೇ ಉತ್ತಮ ಸ್ಥಿತಿಯಲ್ಲಿರುವ ಪ್ರದೇಶಗಳ ಮೇಲೆ ಸಹಸ್ರಾರು ಕೋಟಿ ರೂಪಾಯಿಗಳು ವೆಚ್ಚವಾಗಲಿವೆ.

ಈ *ಸ್ಮಾರ್ಟ್* ಸಿಟಿಗಳು ಪ್ರಜಾತಾಂತ್ರಿಕ ಮೌಲ್ಯಗಳಿಗೆ ಕಂಟಕಪ್ರಾಯವಾಗುವ, ಜನಸಾಮಾನ್ಯ ಪಾಲಿನ ಬಿಳಿಯಾನೆಗಳಾಗುವ, ವಿದೇಶೀ ಕಂಪೆನಿಗಳು ಉತ್ಪಾದಿಸುವ ಆಧುನಿಕ ತಾಂತ್ರಿಕ ಸಲಕರಣೆಗಳಿಗೆ ಮಾರುಕಟ್ಟೆ ಒದಗಿಸುವ ತಾಣಗಳಾಗುವ ಲಕ್ಷಣಗಳು ಗೋಚರಿಸುತ್ತಿವೆ. ತಮಗೆ ಏನೇನೂ ಅನುಕೂಲವಿಲ್ಲದ, ತಮ್ಮನ್ನು ಅವಮಾನಿಸುವ, ಅಸಮಾನತೆಗಳನ್ನು ಹೆಚ್ಚಿಸುವ ಈ ಯೋಜನೆಗಳ ಹೊರೆಯನ್ನು ಜನಸಾಮಾನ್ಯರು ಹೊರಬೇಕಾದ ಸೂಚನೆಗಳು ಕಂಡುಬರುತ್ತಿವೆ. ಕೊಳೆಗೇರಿ ನಿವಾಸಿಗಳನ್ನು ಒಕ್ಕಲೆಬ್ಬಿಸಿ ಆ ಪ್ರದೇಶಗಳನ್ನು ಖಾಸಗಿಯುವರಿಗೆ ಹಸ್ತಾಂತರಿಸುವ ಹುನ್ನಾರ ಈ ಯೋಜನೆಯು ಹಿಂದಿದೆಯೇನೋ ಎಂಬ ಅನುಮಾನವೂ ಜನರನ್ನು ಕಾಡುತ್ತಿದೆ.

(ಕೃಪೆ: ***ಔಟ್‌ಲುಕ್***, ಮಾರ್ಚ್ ೨೮, ೨೦೧೬)

---

**೩ನೇ ಪುಟದಿಂದ**

ಗೋರೆಯವರು ರಾಷ್ಟ್ರ ಮಟ್ಟದಲ್ಲಿ ಸಮಾಜವಾದಿ ರಾಜಕಾರಣಿಯೆಂದು ಹೆಸರುವಾಸಿಯಾಗಿದ್ದರೂ ಮಹಾರಾಷ್ಟ್ರದಲ್ಲಿ ಅವರು ಒಬ್ಬ ಶ್ರೇಷ್ಠ ಸಾಹಿತಿಯೆಂದೇ ಪರಿಚಿತರು. ಅವರು ಇಂಗ್ಲೀಷು ಮತ್ತು ಮರಾಠಿಯಲ್ಲಿ ಒಟ್ಟು ೨೮ ಕೃತಿಗಳನ್ನು ಬರೆದಿದ್ದಾರೆ. ಅವರ ಸಾಹಿತ್ಯ ರಚನೆಯನ್ನು ಮೆಚ್ಚಿದ ಮರಾಠಿ ಸಾಹಿತ್ಯ ಲೋಕ ಅವರನ್ನು ೧೯೬೭–೬೮ನೇ ಸಾಲಿನಲ್ಲಿ ಮರಾಠಿ ಸಾಹಿತ್ಯ ಪರಿಷತ್ತಿಗೆ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿತ್ತು. ಅಲ್ಲದೆ, ಅವರು ಬಾಂಬೆಯ ಇಂಗ್ಲೀಷ್ ವಾರಪತ್ರಿಕೆ 'ಜನತಾ', ಮರಾಠಿಯ ವಾರಪತ್ರಿಕೆ 'ಸಾಧನಾ', ಮಹಾರಾಷ್ಟ್ರದ ಸಮಾಜವಾದಿ ಪಕ್ಷದ ಮುಖವಾಣಿ 'ಜನವಾಣಿ'ಗಳಿಗೆ ಸಂಪಾದಕರಾಗಿದ್ದರು.

ಗೋರೆಯವರು ಆಸ್ತಿಯ ಬಗ್ಗೆ ನಿರ್ಮೋಹಿಗಳು. ಅವರು ಪುಣೆಯಲ್ಲಿರುವ ತಮ್ಮ ಮನೆಯನ್ನು ಸಮಾಜವಾದಿ ಮಹಿಳಾ ಸಭೆಗೆ ದಾನ ಮಾಡಿದರು. ನಾಸಿಕ್‌ನಲ್ಲಿ ತಮ್ಮ ಹೆಂಡತಿ ಸುಮತಿಬಾಯಿ ಅವರ ನೆನಪಿನಲ್ಲಿ ಗಿರಿಜನ ವಿದ್ಯಾರ್ಥಿನಿಯರಿಗಾಗಿ ಒಂದು ವಿದ್ಯಾರ್ಥಿ ನಿಲಯವನ್ನು ಕಟ್ಟಲು ಹಣವನ್ನು ನೀಡಿದರು. ಕೊನೆಗೆ ತಮ್ಮ ದೇಹವನ್ನು ಸಸೂನ್ ಆಸ್ಪತ್ರೆಗೆ ದಾನ ಮಾಡಿದರು.

ಜನತಾಂತ್ರಿಕ ಸಮಾಜವಾದಿಯಾದ ಗೋರೆ ಭಾವನೆಗಿಂತ ಚಿಂತನೆ, ಚಿಂತನೆಗಿಂತ ಕ್ರಿಯಾಶೀಲತೆ ಅತಿಮುಖ್ಯವೆಂದು ಬಗೆದು ಗಾಂಧಿಗಿಂತ ಡಾ. ಅಂಬೇಡ್ಕರರೇ ಮುಖ್ಯವೆಂದು ಭಾವಿಸಿದ್ದರು. ಹಾಗೆಯೇ ಗೋರೆಯವರು ತಮ್ಮ ಇಡೀ ಜೀವನದಲ್ಲಿ ಯಾರನ್ನೂ ಗುರುಗಳೆಂದು ಸ್ವೀಕರಿಸಲಿಲ್ಲ. ಮತ್ತು ತಮ್ಮನ್ನು ಗುರುವೆಂದು ಸ್ವೀಕರಿಸಲು ಯಾರಿಗೂ ಅವಕಾಶ ನೀಡಲಿಲ್ಲ.

೧೯೯೩ ಮೇ ೧ ರಂದು ಪುಣೆಯಲ್ಲಿ ಕಾರ್ಮಿಕರ ದಿನದಂದು ಮಾತನಾಡಬೇಕಾಗಿತ್ತು. ಅದೇ ದಿನ ಮಹಾರಾಷ್ಟ್ರದ ರಾಜ್ಯೋದಯ ದಿನವಾಗಿತ್ತು. ಗೋರೆ ಅಂದು ಏನು ಮಾತನಾಡುವರೆಂದು ಜನ ಕಾತುರವಾಗಿರುವಾಗಲೇ ಅವರು ಸಾವನ್ನಪ್ಪಿದರು.

ಯುವ ಸಮಾಜವಾದಿ ಚಿಂತನ ವೇದಿಕೆ

# ಸಹನೆ ಪ್ರೀತಿಯ ಸ್ಥಾನದಲ್ಲಿ ಅಸಹನೆ, ದ್ವೇಷ...

–ಎಂ.ರಾಘವೇಂದ್ರ



**'ಭಾ**ರತದಲ್ಲಿ ಹಿಂದೂಗಳು, ಮುಸಲ್ಮಾನರು ಒಟ್ಟಿಗೆ ಬದುಕುವುದನ್ನು ಬಿಟ್ಟರೆ ಬೇರೆ ದಾರಿಯೆ ಇಲ್ಲ' ಎಂಬ ಗಾಂಧೀಜಿಯ ಮಾತುಗಳು ಮತ್ತೆ ಮತ್ತೆ ಕಾಡಿದ್ದು ಇತ್ತೀಚೆಗೆ ಸಾಗರದಲ್ಲಿ ಪ್ರಸನ್ನ ಅವರ ರಚನೆಯ 'ಕೊಂದವರಾರು' ನಾಟಕವನ್ನು ನೋಡಿದಾಗ. ಭಾರತ–ಪಾಕ್ ವಿಭಜನೆ ಸಂದರ್ಭದಲ್ಲಿ ಭಾರತದಲ್ಲಿ ಹೊತ್ತಿ ಉರಿಯುತ್ತಿದ್ದ ಕೋಮು ದ್ವೇಷದಿಂದ ಗಾಂಧೀಜಿ ತೀವ್ರ ಆತಂಕಿತರಾಗಿ ಹೇಳಿದ ಮಾತು ಅದು.

ಗಾಂಧಿ ಹೇಳಿದ ಮೇಲಿನ ಮಾತಿಗೆ ಹೆಚ್ಚು ಕಡಿಮೆ ೭೦ ವರ್ಷ ತುಂಬಿದೆ. ದಾರ್ಶನಿಕನಂತೆ ಗಾಂಧಿ ಅಂದು ಹೇಳಿದ ಮಾತನ್ನು ನಾವು ಭಾರತೀಯರು ಇಂದಿಗೂ ನಮ್ಮೊಳಗೆ ಆಳವಾಗಿ ಬಿಟ್ಟುಕೊಳ್ಳಲು ಸಾಧ್ಯವಾಗಿಲ್ಲ. ದಿನೇ ದಿನೇ ಹಿಂದೂ–ಮುಸ್ಲಿಂರ ನಡುವೆ ಪರಸ್ಪರ ಅಸಹನೆ, ಅಪನಂಬಿಕೆ, ದ್ವೇಷ ಬೆಳೆಯುತ್ತಲೆ ಇದೆ.

ಇತ್ತೀಚೆಗೆ ನನ್ನ ಮನಸ್ಸನ್ನು ಗಾಢವಾಗಿ ಕಲುಕಿದ, ಮತ್ತ ಮತ್ತೆ ಕಾಡುತ್ತಿರುವ ಎರಡು ಪ್ರಸಂಗಗಳನ್ನು ಈ ಮಾತುಗಳಿಗೆ ಪೂರಕವಾಗಿ ಇಲ್ಲಿ ಉಲ್ಲೇಖಿಸುತ್ತೇನೆ.

**ಪ್ರಸಂಗ ೧:** ಸಾಗರಕ್ಕೆ ಸಮೀಪದ ಹಳ್ಳಿಯೊಂದರಲ್ಲಿ ೨೨ರ ವಯಸ್ಸಿನ ವಯಸ್ಸಿನ ಅವಿವಾಹಿತ ಮಹಿಳೆಯೊಬ್ಬರು ಅಚಾತುರ್ಯದಿಂದ ಗರ್ಭಧರಿಸಬೇಕಾದ ಸನ್ನಿವೇಶ ನಿರ್ಮಾಣವಾಗಿತ್ತು. ಗರ್ಭಪಾತ ಮಾಡಿಸುವ ಅವಧಿಯೂ ಮುಗಿದ ಕಾರಣ ಅನಿವಾರ್ಯವಾಗಿ ಆಕೆ ಸರ್ಕಾರಿ ಆಸ್ಪತ್ರೆಗೆ ಸೇರಿ ಮಗುವೊಂದಕ್ಕೆ ಜನ್ಮವಿತ್ತಿದ್ದಳು.

ಸಾಮಾನ್ಯವಾಗಿ ಈ ರೀತಿ ಜನ್ಮಕೊಟ್ಟವರಿಗೆ ಬೇಡವಾದ ಮಗುವನ್ನು ಸಾಕಲು ಆಸಕ್ತಿಯಿರುವ ಮಕ್ಕಳಿಲ್ಲದ ದಂಪತಿಗಳು ಆಸ್ಪತ್ರೆಯ ಸಿಬ್ಬಂದಿಗಳಿಗೆ ತಮ್ಮ ಫೋನ್ ನಂಬರ್ ನೀಡಿ ಇಂತಹ ಪ್ರಕರಣ ಬಂದರೆ ತಿಳಿಸಿ ಎಂದು ಹೇಳಿರುತ್ತಾರೆ. ಅಂತೆಯೆ, ಆಸ್ಪತ್ರೆ ಸಿಬ್ಬಂದಿ ಈ ಮಗುವಿಗೆ ಸಂಬಂಧಿಸಿದಂತೆ ಕೆಲವರಿಗೆ ಮಾಹಿತಿ ನೀಡಲು ಮುಂದಾದಾಗ, ಏನೂ ನಡೆದೆ ಇಲ್ಲ ಎನ್ನುವಂತೆ ಹೆರಿಗೆಯಾದ ಸ್ವಲ್ಪ ಹೊತ್ತಿನಲ್ಲೇ ಆಸ್ಪತ್ರೆಯಿಂದ ಹೊರಟ ಮಹಿಳೆ, ಸಿಬ್ಬಂದಿಗೆ ಹೇಳಿದ ಮಾತು ಏನೆಂದರೆ **"ಮಗುವನ್ನು ಯಾರಿಗಾದರೂ ಕೊಡಿ. ಸಾಬರಿಗೆ ಮಾತ್ರ ಕೊಡಬೇಡಿ".**

ಈ ಘಟನೆಯನ್ನು ನನಗೆ ಹೇಳಿದವರು ಇದನ್ನೊಂದು ತೀರ ಸಾಮಾನ್ಯ ಸಂಗತಿ ಎನ್ನುವಂತೆ ನಿರ್ಲಿಪ್ತರಾಗಿ ವಿವರಿಸಿದ್ದರು. ಅವರು ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದವರಲ್ಲ. ಎಡಬಲ ಸಿದ್ಧಾಂತಗಳ ಗೋಜಿಗೆ ಹೋದವರಲ್ಲ. ಅವರಿಗೆ ಹೆತ್ತ ಮಗುವನ್ನು ಹಾಗೆ ಬಿಟ್ಟು ಹೋಗಿದ್ದು ತೀವ್ರವಾಗಿ ಕಾಡಿತ್ತು. ಅದು ಸಹಜ ಕೂಡ. ಆದರೆ 'ಮಗುವನ್ನು ಸಾಬರಿಗೆ ಮಾತ್ರ ಕೊಡಬೇಡಿ' ಎಂದಿದ್ದು ಯಾಕೆ ಕಾಡಲಿಲ್ಲ ಎನ್ನುವುದು ನನಗೆ ಇಂದಿಗೂ ಯಕ್ಷಪ್ರಶ್ನೆಯಾಗಿದೆ.

**ಪ್ರಸಂಗ–೨:** ಪತಿ ಪತ್ನಿಯರಿಬ್ಬರೂ ಹೊರ ಜಿಲ್ಲೆಯವರಾದರೂ, ಸಾಗರದಲ್ಲಿ ನೌಕರಿ ಮಾಡಿ ನಿವೃತ್ತಿಯ ನಂತರ ಇಲ್ಲೇ ನೆಲೆಸಬೇಕು ಎಂಬ ಉದ್ದೇಶದಿಂದ ಮಹಡಿ ಮನೆಯೊಂದನ್ನು ಕಟ್ಟಿಸಿದ್ದರು. ನಿವೃತ್ತಿಯ ನಂತರ ಯಾಕೋ ಮರಳಿ ತಮ್ಮ ಊರಿಗೆ ಹೋಗುವ ಮನಸ್ಸಾಗಿ ಸಾಗರದ ಮನೆಯನ್ನು ಮಾರಾಟ ಮಾಡಲು ಗುರುತು ಪರಿಚಯದವರ ಬಳಿ ಹೇಳಿಕೊಂಡರು. ಆಗಲೂ ಅವರು ಹೇಳಿದ ಮಾತು "ಸಾಬರು ಬಿಟ್ಟು ಬೇರೆಯವರು ಇದ್ದರೆ ಹೇಳಿ."

ಮುಸ್ಲಿಂರಿಗೆ, ದಲಿತರಿಗೆ, ಹಿಂದುಳಿದ ಜಾತಿಯವರಿಗೆ "ನಾವೇನೂ ಜಾತಿ ವಿರೋಧಿಗಳಲ್ಲ, ಆದರೆ ಮಾಂಸಾಹಾರಿಗಳಿಗೆ ಮನೆ ಬಾಡಿಗೆ ಕೊಡಲ್ಲ" ಎನ್ನುವುದು ಹೊಸತಲ್ಲ. ಮನೆಯನ್ನು ಮಾರಿ ಊರುಬಿಟ್ಟು ಹೋಗಲು ನಿಶ್ಚಯಿಸಿದವರಿಗೆ ಯಾಕೆ ಇಂತಹ ಯೋಚನೆ ಬಂತು ಎನ್ನುವುದೂ ನನಗೆ ಯಕ್ಷಪ್ರಶ್ನೆಯಾಗಿ ಕಾಡುತ್ತಿದೆ.

ತನಗೆ ಹುಟ್ಟಿದ ಮಗುವನ್ನು ಅವಸರವಾಗಿ ಆಸ್ಪತ್ರೆಯಲ್ಲಿಯೇ ಬಿಟ್ಟು ಹೋಗುವಾಗ ಆ ಮಹಿಳೆಯ ಮನಸ್ಸಿನಲ್ಲಿ ' ಸಾಬರಿಗೆ ಮಾತ್ರ ಮಗುಕೊಡಬೇಡಿ' ಎಂಬ ಯೋಚನೆ ಬಂದದ್ದಾದರೂ ಹೇಗೆ? ಇಂತಹ ಯೋಚನಾಕ್ರಮಗಳ ಹಿಂದೆ ಕೆಲಸ ಮಾಡುತ್ತಿರುವ ಶಕ್ತಿಗಳು ಯಾವುವು ಎನ್ನುವುದನ್ನು ತಿಳಿಯುವುದು ಕಷ್ಟವೇನಲ್ಲ.


೮೦ ಅಥವಾ ೯೦ರ ದಶಕದಲ್ಲಿ ನಾನು ಆರ್.ಎಸ್.ಎಸ್ ಶಾಖೆಗೆ ಹೋಗುತ್ತೇನೆ ಎಂದು ಅಲ್ಲಿನ ಕಾರ್ಯಕರ್ತ ಹೇಳುವಲ್ಲಿ ಹಿಂಜರಿಕೆ ಕಾಣಬಹುದಾಗಿತ್ತು. ಈಗ ಅವರು ಅದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಬಿಜೆಪಿಯ ಅಂಗಸಂಸ್ಥೆಗಳು ಪ್ರಚೋದನಕಾರಿ ಮಾತು ಮತ್ತು ಘೋಷಣೆಗಳ ಮೂಲಕ ದೇಶಾದ್ಯಂತ ಮುಸ್ಲಿಂರ ಮೇಲೆ ಅಸಹನೆ, ದ್ವೇಷ ಹುಟ್ಟಿಸುವ ಕೆಲಸವನ್ನು ಅತ್ಯಂತ ವ್ಯವಸ್ಥಿತವಾಗಿ ಮಾಡುತ್ತಿದ್ದರೂ ಕಾಂಗ್ರೆಸ್ ಆಗಲಿ ಅಥವಾ ಜಾತ್ಯಾತೀತವಾದಿಗಳಾಗಲಿ ತುಂಬಾ ಪರಿಣಾಮಕಾರಿಯಾಗಿ ಅದಕ್ಕೆ ಪ್ರತಿರೋಧ ಒಡ್ಡಲಾಗುತ್ತಿಲ್ಲ.

ವಿಶ್ವದ ಎಲ್ಲಡೆ ಇಸ್ಲಾಂ ಹೆಸರಿನಲ್ಲಿ ಹಬ್ಬುತ್ತಿರುವ ಉಗ್ರವಾದ ಭಾರತದಲ್ಲಿ ಮುಸ್ಲಿಂರ ಬಗ್ಗೆ ಪೂರ್ವಾಗ್ರಹಗಳನ್ನು ಬಿತ್ತಲು ಸುಲಭವಾದ ವೇದಿಕೆ ಸೃಷ್ಟಿಸಿದೆ. ಏಳು ಅಥವಾ ಎಂಟನೆ ತರಗತಿಯ ಮಕ್ಕಳಲ್ಲಿಯೂ ಧರ್ಮದ್ವೇಷದ ಮಾತುಗಳು ಕೇಳಿಬರುತ್ತಿವೆ.

ಎರಡೂ ಕುಟುಂಬದವರು ಒಪ್ಪಿದರೂ ಹಿಂದೂ ಯುವತಿ ಮುಸ್ಲಿಂ ಯುವಕನ ಮದುವೆಗೆ ಮಂಡ್ಯದಲ್ಲಿ ಭಜರಂಗದಳದವರು ವಿರೋಧ ಸೂಚಿಸಿ ಯುವತಿ ಮನೆ ಎದುರು ಧರಣಿ ನಡೆಸಿದ ನಾಚಿಕೆಗೇಡಿನ ವಿದ್ಯಮಾನ ಈಚೆಗೆ ನಡೆದಿದೆ. ಭಜರಂಗದಳಕ್ಕೆ ಪ್ರತಿಸ್ಪರ್ಧಿಯಾಗಿ ಎನ್ನುವಂತೆ ಮುಸ್ಲಿಂ ಸಮಾಜದ ಕೆಲವು ಕಿಡಿಗೇಡಿ ಸಂಘಟನೆಗಳು ಅಲ್ಲಲ್ಲಿ ಅವಿವೇಕದ ವರ್ತನೆ ತೋರಿ ಊರಿನ ನೆಮ್ಮದಿ ಹಾಳುಗೆಡುವುತ್ತಿವೆ.

ಈ ಬೆಳವಣಿಗೆಯಿಂದ ನಡೆಯುತ್ತಿರುವ ದೊಡ್ಡ ಅನಾಹುತವೆಂದರೆ ಸಾಮಾಜಿಕವಾಗಿ ರಾಜಕೀಯವಾಗಿ ಪ್ರಮುಖವಾಗಿ ಚರ್ಚೆಯಾಗಬೇಕಾದ ವಿಷಯಗಳು, ಹಿನ್ನೆಲೆಗೆ ಸರಿಯುತ್ತಿರುವುದು. ಅಭಿವೃದ್ಧಿಯ ಹೆಸರಿನಲ್ಲಿ ನಾವು ತಂದುಕೊಂಡ ವಿನಾಶಕಾರಿ ಯೋಜನೆಗಳಿಂದ ಭೂಮಿ ಬಿಸಿಕೆಂಡದಂತಾಗಿದ್ದರೂ ಕೋಮು ವಿಷಯದ ಮುಂದೆ ಪರಿಸರದ ವಿಷಯ ಪ್ರಾಮುಖ್ಯತೆ ಪಡೆಯುವುದೇ ಇಲ್ಲ.

ಸಾಹಿತಿ ದೇವನೂರು ಮಹಾದೇವ ಅವರು ನಮ್ಮ ಇತ್ತೀಚಿನ ಭಾಷಣವೊಂದರಲ್ಲಿ ಸಹನೆ ಮತ್ತು ಪ್ರೀತಿಯೊಂದೇ ನಮ್ಮ ಎಲ್ಲ ಸಮಸ್ಯೆಗಳಿಗೆ ಪರಿಹಾರ ತರಬಲ್ಲದು ಎಂಬ ಅರ್ಥಪೂರ್ಣ ಮಾತು ಹೇಳಿದ್ದರು. ಆದರೆ ಸಹನೆ ಮತ್ತು ಪ್ರೀತಿಯ ಸ್ಥಾನದಲ್ಲಿ ಅಸಹನೆ, ದ್ವೇಷವೆ ಬಂದು ಕುಳಿತಿರುವುದನ್ನು ನಾವು ಗಂಭೀರವಾಗಿ ಪರಿಗಣಿಸದೇ ಇದ್ದಲ್ಲಿ ಪರಸ್ಪರ ಬಡಿದಾಡಿ ರಕ್ತದೋಕುಳಿ ಹರಿಯುವ ದಿನ ದೂರವಿಲ್ಲ. ಫಲಾನುಭವಿಗಳು ಇದಕ್ಕಾಗಿ ಕಾಯುತ್ತಿದ್ದಾರೆ ಎಚ್ಚರವಿರಲಿ.



**(ಸಾಗರದಲ್ಲಿ ವಕೀಲರೂ, ಪತ್ರಕರ್ತರೂ ಆಗಿರುವ ಲೇಖಕ ಎಂ. ರಾಘವೇಂದ್ರ, ವಿದ್ಯಾರ್ಥಿ ದೆಸೆಯಿಂದಲೂ ಪ್ರಗತಿಪರ ಚಳುವಳಿಗಳೊಂದಿಗೆ ಗುರುತಿಸಿಕೊಂಡು ಬಂದವರು)**

## ಸಮಕಾಲೀನ

# ಕಳೆದುಹೋಗಿರುವ ಬುದ್ಧನನ್ನು ಅರಸುತ್ತಾ...



**ಈ** ಮೇಲಿನ ಶೀರ್ಷಿಕೆಯೇ ಕೆಲವರಿಗೆ ಅತಿ ವಿಚಿತ್ರವೋ, ಉದ್ಧಟತನದ್ದೋ ಎನ್ನಿಸಬಹುದು. ಇಡೀ ಜಗತ್ತೇ ಇನ್ನೊಂದು ಬುದ್ಧ ಜಯಂತಿಯನ್ನು ಆಚರಿಸಲು ಸಜ್ಜಾಗುತ್ತಿರುವಾಗ ಬುದ್ಧ ಕಳೆದು ಹೋಗಿದ್ದಾನೆ ಎಂದರೆ ಏನರ್ಥ ಎಂದು ಕೇಳಬಹುದು. ಇನ್ನೊಂದು ಮತ್ತು ಔಪಚಾರಿಕ ಎಂಬ ಗುಣವಿಶೇಷಣಗಳುಳ್ಳ ಆಚರಣೆಗಳೇ ಹಾಗೆ. ಅವಕ್ಕೆ ಹೆಸರು ಮಾತ್ರ ಮುಖ್ಯವಾಗಿರುತ್ತವೆ. ಆ ಹೆಸರಿನ ಹಿಂದಿನ ತತ್ವ ಮತ್ತು ಸತ್ವ ಕ್ಲೀಷೆಯ ಮಾತುಗಳಾಗಿಬಿಟ್ಟಿರುತ್ತವೆ. ಆದರೆ ಬುದ್ಧನ ವಿಷಯದಲ್ಲಿ ಅವನ ತತ್ವ ಮತ್ತು ಸತ್ವ ಕ್ಲೀಷೆಯಾಗಿಲ್ಲ; ಬದಲಿಗೆ ಬಹುರೂಪಗಳನ್ನು ತಳೆದು ಅವುಗಳಲ್ಲಿ ನಿಜವಾದ ಬುದ್ಧನ ತತ್ತ್ವ ಸತ್ವವನ್ನು ಹುಡುಕುವುದೇ ದುಸ್ತರವೇ ಆಗಿಬಿಟ್ಟಿದೆ.

ಇದು ಬುದ್ಧನನ್ನು ಆಪತ್ಬಂಧು ಎಂದು ಬಹಳ ಜನ ಆತುಕೊಂಡಿರುವ ಆಧುನಿಕ ಕಾಲದ ಸಮಸ್ಯೆಯೇನೂ ಅಲ್ಲ. ಬುದ್ಧ ಪರಿನಿರ್ವಾಣ ಹೊಂದಿದ ಒಂದು ವರ್ಷದಲ್ಲೇ ಬುದ್ಧನ ಮಾತುಗಳು ಅಪವ್ಯಾಖ್ಯಾನಗೊಳ್ಳುತ್ತಿವೆ ಎಂಬ ಸಂದೇಹದ ಆಧಾರದ ಮೇಲೆ ಮೊದಲ ಬೌದ್ಧ ಸಮಾವೇಶ ನಡೆಯಿತು. ಆನಂತರ ಆಶೋಕ, ಕಾನಿಷ್ಕ ಹೀಗೆ ಹಲವರ ರಾಜಾಶ್ರಯಗಳಲ್ಲಿ ಬೌದ್ಧ ಸಮಾವೇಶಗಳು ನಡೆದು, ಬುದ್ಧ ನಿಜವಾಗಿ ಏನು ಹೇಳಿದ್ದ ಎಂಬುದನ್ನು ಹಲವು ಸಾಕ್ಷ್ಯಗಳ ಆಧಾರದ ಮೇಲೆ ದಾಖಲಿಸುವ ಕೆಲಸ ಇತಿಹಾಸದಲ್ಲಿ ನಡೆದಿದೆ. ಲಿಖಿತ ದಾಖಲೆಗಳ(ತ್ರಿಪಿಟಿಕಗಳ) ಸಾಕ್ಷ್ಯದಲ್ಲೇ ಹಲವಾರು ಪುನರ್‌ವ್ಯಾಖ್ಯಾನಗಳೂ ಕಳೆದ ಎರಡೂವರೆ ಸಹಸ್ರಮಾನಗಳಲ್ಲಿ ನಡೆದಿವೆ. ಥೇರವಾದ, ಸರ್ವಾಸ್ತಿವಾದ, ಮಹಾ ಸಾಂಘಿಕರು, ಹೀನಯಾನ, ಮಹಾಯಾನ, ವಜ್ರಯಾನ, ಮಂತ್ರಯಾನ, ತಂತ್ರಯಾನ, ಝೆನ್ ಇತ್ಯಾದಿಯಾಗಿ ಇತಿಹಾಸದಲ್ಲಿ ಬೌದ್ಧ ತತ್ವದ ಅನೇಕ ಆವೃತ್ತಿಗಳು ಜಗತ್ತಿನ ವಿವಿಧ ಭಾಗಗಳ ಜನರಿಗೆ ಬದುಕಿನ ಮಾದರಿ ಹಾಗೂ ಮೌಲ್ಯಗಳನ್ನು ಒದಗಿಸಿವೆ. ಆಧುನಿಕ ಕಾಲದಲ್ಲಂತೂ ಪೂರ್ವದ ಈ ತತ್ವ ಪಶ್ಚಿಮದವರನ್ನೂ ತೀವ್ರವಾಗಿ ಸೆಳೆದು ಇನ್ನಷ್ಟು ವ್ಯಾಖ್ಯಾನಗಳು ಸೃಷ್ಟಿಯಾಗಿವೆ. ಇವುಗಳಿಂದ ನಿಜವಾದ ಬುದ್ಧನನ್ನು ಸಂಸ್ಕರಿಸಿಕೊಳ್ಳುವ ಪ್ರಯತ್ನವಾಗಿ ಕೆಲವರು ಅನುಭಾವಿ ಬೌದ್ಧ ತತ್ವವೆಂಬ ಒಂದು ಪಂಥವನ್ನೂ ರೂಪಿಸಿಕೊಂಡಿದ್ದಾರೆ.

ಹಾಗೆ ನೋಡಿದರೆ ಇತ್ತೀಚಿನ ವರ್ಷಗಳಲ್ಲಿ ಬುದ್ಧನನ್ನು ವ್ಯಾಖ್ಯಾನ ಮಾಡಿದ ನಾಲ್ವರು ಮುಖ್ಯ ವ್ಯಕ್ತಿಗಳೆಂದರೆ, ಬಾಬಾ ಸಾಹೇಬ್ ಅಂಬೇಡ್ಕರ್, ದಲೈಲಾಮಾ, ಜಿಡ್ಡು ಕೃಷ್ಣಮೂರ್ತಿ ಮತ್ತು ಓಷೋ(ಆಚಾರ್ಯ ರಜನೀಶ್) ಎಂದು ಹೇಳಬಹುದು. ಇವರಲ್ಲಿ ಮೊದಲನೆಯವರು ಭಾರತದ ಒಂದು ಸಮುದಾಯವನ್ನು ಪಾರಂಪರಿಕ ಸಂಕಷ್ಟದಿಂದ ಪಾರು ಮಾಡುವ ಒಂದು ನಿರ್ಣಾಯಕ ಮಾರ್ಗವಾಗಿ ಬುದ್ಧನ 'ಆಶ್ರಯ' ಪಡೆದರು. ಮಿಕ್ಕವರು ಆಧುನಿಕ ಮನುಷ್ಯನ ತಳಮಳಗಳ ಶಮನಕ್ಕಾಗಿ ಬುದ್ಧನ ತತ್ವಗಳ ನವೀಕರಣದ ಪ್ರಯತ್ನಗಳನ್ನು ಮಾಡಿದವರು. ಇವರು ಮಾತ್ರವಲ್ಲದೆ, ಸ್ವಸ್ವರೂಪ ದರ್ಶನವೇ ಧರ್ಮ ಎಂದ ರಾಮಕೃಷ್ಣ ಪರಮಹಂಸ–ವಿವೇಕಾನಂದ ಮತ್ತು ರಮಣ ಮಹರ್ಷಿಗಳ ಮಾತುಗಳಲ್ಲಿಯೂ ಮನೋನಾಶದ ಮಾತನಾಡುವ ಬುದ್ಧ ಇಣುಕುವುದನ್ನು ಬುದ್ಧನ ಸತ್ವ ಬಲ್ಲವರು ಗುರುತಿಸಬಲ್ಲರು.

ಆದರೆ ಇಂದಿನ ಸಮಸ್ಯೆ ಎಂದರೆ ಬುದ್ಧ ತತ್ವವನ್ನು ಇನ್ನೊಂದು ತತ್ವದ ವಿರುದ್ಧ ನಿಲ್ಲಿಸಿ ವ್ಯಾಖ್ಯಾನ ಮಾಡಿ ರಾಜಕಾರಣಕ್ಕೆ ಅದನ್ನು ಬಳಸುತ್ತಿರುವುದು. ಉದಾಹರಣೆಗೆ, ಬುದ್ಧ ಹಿಂದೂ ಧರ್ಮದ ಜಾತಿ ವ್ಯವಸ್ಥೆಯ ವಿರುದ್ಧ ಬಂಡಾಯ ಸಾರಿದ ಎನ್ನುವುದು. ಇದರಿಂದಾಗಿಯೇ ಶಂಕರಾಚಾರ್ಯರ ನೇತೃತ್ವದಲ್ಲಿ ಬೌದ್ಧ ಸ್ಥಳಗಳ ಮೇಲೆ ದಾಳಿ ನಡೆದು ಅವನ್ನು ಹಿಂದೂ ಕ್ಷೇತ್ರಗಳಾಗಿ ಪರಿವರ್ತಿಸಿ ಬೌದ್ಧ ಧರ್ಮವನ್ನು ದೇಶದ ಆಚೆಗೆ ಓಡಿಸಲಾಯಿತು ಎಂದು ಹೇಳುವುದು.



**ದಲೈ ಲಾಮಾ ಜೆ. ಕೃಷ್ಣಮೂರ್ತಿ ಓಷೋ ಅಂಬೇಡ್ಕರ್**

ಬುದ್ಧ ಅನಾತ್ಮವಾದಿಯೂ, ಹಾಗಾಗಿ ನಾಸ್ತಿಕನೂ ಆಗಿದ್ದು ಹಿಂದೂ ಧರ್ಮ ಆತ್ಮವಾದಿಯೂ ಆಸ್ತಿಕವೂ ಆಗಿದ್ದು ಎರಡೂ ಪರಸ್ಪರ ವಿರುದ್ಧವಾದವು ಎಂದು ವಾದಿಸುವುದು ಇತ್ಯಾದಿ. ಇವು ಎರಡೂ ಧರ್ಮಗಳ ವಿದ್ವಾಂಸರ ಪ್ರಕಾರ ಎರಡೂ ಧರ್ಮಗಳನ್ನು ತಮ್ಮ ಸ್ವಾರ್ಥ ರಾಜಕಾರಣಕ್ಕನುಸಾರವಾಗಿ ಮಾತ್ರ ಓದಿಕೊಂಡವರು ಸೃಷ್ಟಿಸುತ್ತಿರುವ ಮಿಥ್ಯಗಳು.

ಮೊದಲಾಗಿ ಅರಿಯಬೇಕಾದದ್ದು, ನಾವು ಬುದ್ಧನ ಬಗ್ಗೆ ಮಾತಾಡುವಾಗ ಎರಡೂವರೆ ಸಾವಿರ ವರ್ಷಗಳ ಹಿಂದಿನ ಇತಿಹಾಸದ ಬಗ್ಗೆ ಮಾತಾಡುತ್ತಿರುತ್ತೇವೆ ಎಂಬುದು. ಒಂದು ಶತಮಾನದ ಹಿಂದಿನ ಇತಿಹಾಸವೇ ನಮಗೆ ಹಲವು ಆವೃತ್ತಿಗಳಲ್ಲಿ ಕಲಸುಮೇಲೋಗರವಾಗಿ ಕಾಣುತ್ತಿರುವಾಗ ೨೫ ಶತಮಾನಗಳ ಹಿಂದಿನ ಇತಿಹಾಸ ಇನ್ನೆಷ್ಟು ಸ್ಪಷ್ಟವಾಗಿ ನಮಗೆ ಕಾಣಿಸಬಹುದು? ಅದರ ಆಧಾರದ ಮೇಲೆ ನಾವು ಕಟ್ಟಿಕೊಳ್ಳಲಾಗುವ ಬುದ್ಧ, ಚರಿತ್ರೆಯ ನಿಜಗಳಿಗೆ ಎಷ್ಟು ಬದ್ಧನಾಗಿರಬಲ್ಲ? ಹಾಗಾಗಿ, ಇಂದು ನಮಗೆ ಬೇಕಾಗಿರುವ ಬುದ್ಧನನ್ನು ಚರಿತ್ರೆಯ ಅವಶೇಷಗಳಿಂದ ಹೆಕ್ಕಿ ರೂಪಿಸಿಕೊಳ್ಳುವುದೇನೋ ಸರಿ. ಆದರೆ ಹೀಗೆ ನಮ್ಮ ಇಂದಿನ ಅಗತ್ಯಗಳಿಗೆ ರೂಪಿಸಿಕೊಂಡ ಬುದ್ಧನನ್ನು ಚರಿತ್ರೆಯನ್ನು ನಿರೂಪಿಸಿಕೊಳ್ಳಲು ಮತ್ತು ಆ ಮೂಲಕ ಇಂದಿನ ರಾಜಕಾರಣ ಮಾಡಲು ಸಾಧನವಾಗಿ ಬಳಸುವುದು ಎಷ್ಟು ಸರಿ ಎಂಬ ಪ್ರಶ್ನೆಯನ್ನೂ ನಾವಿಂದು ಕೇಳಿಕೊಳ್ಳಬೇಕಿದೆ.

ಬುದ್ಧ ಮೂಡಿಬಂದಾಗ ಹಿಂದೂ ಧರ್ಮವೆಂಬುದು ಇರಲಿಲ್ಲ. ಇದ್ದುದು ವೈದಿಕ ಧರ್ಮ. ಅದೂ ವ್ಯವಸ್ಥಿತ ಮತ್ತು ಸರ್ವವ್ಯಾಪಿಯಾಗಿರಲಿಲ್ಲ. ಅಂದರೆ ವೈದಿಕವಲ್ಲದ ಅನೇಕ ಬೇರೆ ಸಮಾಜಗಳೂ ಇದ್ದವು. ಅಷ್ಟೇ ಅಲ್ಲ, ವೈದಿಕ (ಅಂದರೆ ವೇದ ಪ್ರಾಮಾಣ್ಯ ಮತ್ತು ಪಾರಮ್ಯವನ್ನು ಒಪ್ಪುವ) ಧರ್ಮದ ಬಗೆಗೂ ವ್ಯಾಪಕ ಭಿನ್ನಾಭಿಪ್ರಾಯಗಳು ಬೆಳೆದು ಶ್ರಮಣ ಸಂಪ್ರದಾಯವೆಂಬುದೊಂದು ರೂಪುಗೊಂಡಿತ್ತು. ಆಗಲೇ ವೇದಗಳನ್ನು ನಿಷ್ಠುರ ವಿಮರ್ಶೆಗೆ ಗುರಿ ಮಾಡಿದ್ದ ಉಪನಿಷತ್ಕಾರರು ಉದಯವಾಗಿದ್ದರು. ಇದು ಭರತ ಖಂಡದಲ್ಲಿ ನಿರಂತರವಾಗಿ ನಡೆದಿರುವ ಸೃಷ್ಟಿಯ ನಿಗೂಢ ರಹಸ್ಯಗಳನ್ನು ಅರಿಯುವ ಬೌದ್ಧಿಕ ಜಿಜ್ಞಾಸೆಯ ಒಂದು ಘಟ್ಟವಾಗಿತ್ತು. ಇದರ ಒಂದು ಉತ್ಕೃಷ್ಟ ಫಲವೇ ಬುದ್ಧ. ಈ ಅರ್ಥದಲ್ಲೇ ಬುದ್ಧನನ್ನು ಕೆಲವರು ಒಬ್ಬ ಉಪನಿಷತ್ಕಾರನೆಂದೂ ಗುರುತಿಸುತ್ತಾರೆ. ಅದೇನೇ ಇರಲಿ, ಆಗ ಬುದ್ಧನ ಜ್ಞಾನ ಮೀಮಾಂಸೆಯನ್ನು ಒಪ್ಪಿ ಅವನ ಶಿಷ್ಯರಾದವರಲ್ಲಿ ಶ್ರಮಣರ ಜೊತೆ ವೈದಿಕರೂ ಇದ್ದರು ಎಂಬುದನ್ನು ನಾವು ಮರೆಯಬಾರದು. ನಿಜ, ಬುದ್ಧ ತಾನು ಕಂಡುಕೊಂಡ ಇರವಿನ ಸತ್ಯದ ಹಿನ್ನೆಲೆಯಲ್ಲಿ ವೇದಗಳ ಅಪೌರುಷೇಯತೆಯನ್ನೂ, ಪ್ರಾಮಾಣ್ಯವನ್ನೂ ಒಪ್ಪಲಿಲ್ಲ. ಆದರೆ ಅವನ್ನು ಇಡಿಯಾಗಿ ಈಗ ಕೆಲವರು ಹೇಳುವಂತೆ ಜೀವ ವಿರೋಧಿಯೆಂದು ತಿರಸ್ಕರಿಸಿದ ಯಾವ ಸಾಕ್ಷ್ಯಗಳೂ ಇಲ್ಲ. ಆತ ಅದರ ಕರ್ಮಕಾಂಡವನ್ನಷ್ಟೇ–ಪ್ರಾಣಿ ಬಲಿಯ ಯಜ್ಞ–ಯಾಗಾದಿಗಳ ಮೂಲಕ ಸ್ವರ್ಗ ಪಡೆಯಬಹುದೆಂಬ ನಂಬಿಕೆಯ ಆಚಾರ–ತಿರಸ್ಕರಿಸಿದ.

ಬುದ್ಧ ತನ್ನ ಶಿಷ್ಯರಿಗೆ ಬ್ರಾಹ್ಮಣರನ್ನು ಗೌರವಿಸಲು ಹೇಳಿದ್ದ. ಏಕೆಂದರೆ ಅವರು (ಈಗಿನ 'ರೆಡಿಮೇಡ್' ಬ್ರಾಹ್ಮಣರಂತೆ) ಹುಟ್ಟು ಬ್ರಾಹ್ಮಣರಾಗಿರದೆ, ನಿರಂತರ ಜ್ಞಾನ ಜಿಜ್ಞಾಸುಗಳಾಗಿದ್ದುದರಿಂದ ಬ್ರಾಹ್ಮಣರೆನಿಸಿಕೊಂಡಿದ್ದರು. ಹೀಗಾಗಿ, ಇಂದಿನಷ್ಟು ರಾಜಕೀಯಗೊಂಡು ಸಂಕೀರ್ಣವಾಗಿರದಿದ್ದ ಜಾತಿ ಪದ್ಧತಿಯನ್ನು–ಅದರ ಶ್ರೇಣೀಕರಣವನ್ನು–ಬುದ್ಧ ಮಾನ್ಯ ಮಾಡುತ್ತಿರಲಿಲ್ಲ ಎಂಬ ಸಂಗತಿಯನ್ನು ಇಂದಿನ ರೂಕ್ಷ ಜಾತಿ ಮೇಲಾಟದ ರಾಜಕಾರಣಕ್ಕಾಗಿ ಬಳಸಿಕೊಳ್ಳುವುದು ಬುದ್ಧನನ್ನು ವಿಕೃತಗೊಳಿಸುವ ಕೆಲಸವೇ ಸರಿ.

ಇನ್ನು ದೇವರು–ದೇವಾಲಯಗಳ ವಿಷಯ. ಭರತ ಖಂಡದಲ್ಲಿ ವಿಗ್ರಹ ಸಂಸ್ಕೃತಿ ಆರಂಭವಾದದ್ದೇ ಮಹಾಯಾನದ ಬೌದ್ಧ ದೇವತೆಗಳ ಆವಿಷ್ಕಾರದಿಂದಾಗಿ ಎಂಬುದನ್ನು ನಾವು ತಿಳಿದಿರಬೇಕು. ಗಾಂಧಾರ ಕಲೆಯ ಮೂಲಕ ಏಷ್ಯಾದ್ಯಂತ ನಡೆದ ಬುದ್ಧ ಮತ್ತು ಆನಂತರ ವಜ್ರಯಾನದ ಮೂಲಕ ಅಭಿವ್ಯಕ್ತಗೊಂಡ ಬುದ್ಧನ ಇತರ ರೂಪುಗಳು ಹಾಗೂ ಅವುಗಳ ಪೋಷಕ ದೇವತೆಗಳ ಶಿಲ್ಪಗಳು ಮತ್ತು ಅವುಗಳ ಆಶ್ರಯದಾಣಗಳಾಗಿ ಕಟ್ಟಲ್ಪಟ್ಟ ವಿಹಾರ–ಸ್ತೂಪ ಇತ್ಯಾದಿಗಳೇ ಭಾರತದ ಶಿಲ್ಪ ಕಲೆಯ ಅತ್ಯುನ್ನತ ಸಾಧನೆಗಳಿಗೆ ಸ್ಫೂರ್ತಿಯಾದದ್ದು. ಇತ್ತೀಚೆಗೆ ತಾಲಿಬಾನಿಗಳಿಂದ ನಾಶ ಮಾಡಲ್ಪಟ್ಟ ಆಫ್ಘಾನಿಸ್ತಾನದಲ್ಲಿದ್ದ ಬೊಮಿಯಾನ್ ಬುದ್ಧ ಕ್ಷೇತ್ರಗಳು ಮತ್ತು ಭಾರತದಲ್ಲಿನ ಅಜಂತಾ–ಎಲ್ಲೋರಾ ಗುಹಾ ಕೆತ್ತನೆಗಳು ಇದಕ್ಕೆ ಅತ್ಯುತ್ತಮ ಉದಾಹರಣೆಗಳು.

ಇಂತಹ ಬೌದ್ಧ ಧರ್ಮ ತನ್ನ ವಿವಿಧ ರೂಪಗಳಲ್ಲಿ ಭಾರತದಲ್ಲಿ ಒಂದು ಸಾವಿರ ವರ್ಷ ಎಲ್ಲ ಕಾಲಾವಧಿಗಳ ಮುಖ್ಯ ರಾಜರುಗಳ ಆಶ್ರಯ ಪಡೆದು ಪ್ರಧಾನ ಧರ್ಮವಾಗಿ ಮೆರೆಯಿತು ಎಂಬುದನ್ನೂ ನಾವು ಮರೆಯಬಾರದು. ಹಾಗೇ ಒಂದು ಸಾವಿರ ವರ್ಷ ಒಂದು ಜನಸಮುದಾಯವನ್ನು ಆಳಿ ಬಾಳಿದ ಧರ್ಮ ಒಂದು ದಿನ ಶಂಕರನೆಂಬ ಓರ್ವ ಆಚಾರ್ಯನ ದಾರ್ಮಿಕ ಪಡೆಯ ದಾಳಿಗೆ ಸಿಕ್ಕಿ ದೇಶ ಬಿಟ್ಟು ಓಡಿ ಹೋಗಿ ಇಲ್ಲಿ ನಿಶ್ಶೇಷವಾಯಿತು ಎಂದು ಹೇಳುವವರನ್ನು ಏನೆಂದು ಕರೆಯವುದು?

ಇತಿಹಾಸ ತಿಳಿಸುವಂತೆ ಬೌದ್ಧ ಧರ್ಮ ಕೂಡ ಕಾಲಾಂತರದಲ್ಲಿ ಹಲವು ತೆರನ ಅನುಯಾಯಿ ಸಮುದಾಯಗಳ ಮನುಷ್ಯ ದೌರ್ಬಲ್ಯಗಳಿಗೆ ಈಡಾಗಿ ಹಲವು ರೂಪಗಳನ್ನು ತಾಳಿತು. ಆಳುವ ಎಲ್ಲ ವಿದ್ಯಮಾನಗಳೂ ಆಗುವಂತೆ ಅದೂ ಭ್ರಷ್ಟವಾಯಿತು. ವಿಶೇಷವಾಗಿ ತಂತ್ರಯಾನ ಸ್ವೇಚ್ಛಾಯಾನವಾಗಿ ಅವನತಿಗೊಂಡು ಸಮಾಜದಲ್ಲಿ ಅರಾಜಕತೆಯನ್ನು ಸೃಷ್ಟಿಸಲಾರಂಭಿಸಿತು. ವಿಹಾರಗಳು ಆರಾಮ ಕೇಂದ್ರಗಳಾಗತೊಡಗಿದ್ದವು. ಮೃಚ್ಛಕಟಿಕ ಮತ್ತು ಆ ಕಾಲದ ಇನ್ನಿತರ ಸಂಸ್ಕೃತ ನಾಟಕಗಳನ್ನು ಓದಿದರೆ, ಬೌದ್ಧ ಧರ್ಮವೆನ್ನುವುದು (ಇಂದಿನ ಅತಿ ಹಿಂದುತ್ವದಂತೆಯೇ!) ಹೇಗೆ ಹಲವು ಕಳ್ಳರ–ಸುಳ್ಳರ–ದುಷ್ಟರ–ವ್ಯಭಿಚಾರಿಗಳ–ಜೂಜುಕೋರರ ರಕ್ಷಾಕವಚವಾಗಿತ್ತು ಎಂಬುದು ಗೊತ್ತಾಗುತ್ತದೆ. ಇದರ ಐತಿಹಾಸಿಕ ಪರಿಣಾಮವೇ ಶಂಕರರ ಆಗಮನ ಮತ್ತು ನಂತರದ ಬೆಳವಣಿಗೆಗಳು.

ಹಾಗಾಗಿ ಶಂಕರರು ಬುದ್ಧನನ್ನು ಈ ದೇಶದಿಂದ ಉಚ್ಚಾಟಿಸಿದರೆಂದು ಹೇಳುವುದು ಶುದ್ಧ ಮೂರ್ಖತನ. ಹಾಗೆ ನೋಡಿದರೆ, ಸ್ವತಃ ಶಂಕರರನ್ನೇ ಅವರ ಕಾಲದಲ್ಲೇ ಪ್ರಚ್ಛನ್ನ(ವೇಷ ಮರೆಸಿಕೊಂಡ) ಬುದ್ಧ ಎನ್ನುವವರಿದ್ದರು; ಈಗಲೂ ಇದ್ದಾರೆ. ಅಂದರೆ ಶಂಕರ ಹೇಳಿದ್ದು ಮೂಲ ತತ್ವದಲ್ಲಿ ಬೌದ್ಧ ಧರ್ಮವನ್ನೇ; ಆದರೆ ವೈದಿಕ ಪರಿಭಾಷೆಯಲ್ಲಿ ಎನ್ನಬಹುದೇನೋ! ವೈದಿಕ ಪರಿಭಾಷೆ ಎನ್ನಲು ಮುಖ್ಯ ಕಾರಣ, ಅದು ವರ್ಣ ಧರ್ಮದ ಪ್ರತಿಪಾದನೆ ಮಾಡುತ್ತದೆ ಎನ್ನುವುದಕ್ಕಾಗಿ. ಅಂದರೆ ಅನಾತ್ಮವಾದ ಮತ್ತು ತಂತ್ರವಾದಗಳ ಹೆಸರಿನಲ್ಲಿ ಉಂಟಾಗಿದ್ದ ಸಾಮಾಜಿಕ ಮತ್ತು ಅಧ್ಯಾತ್ಮಿಕ ಅರಾಜಕತೆಯನ್ನು ತಹಬಂದಿಗೆ ತರಲು ಶಂಕರರು ಆ ಹೊತ್ತಿಗೆ ಸಂಪೂರ್ಣ ಅಪ್ರಸ್ತುತಗೊಂಡಿದ್ದ ಜಾತಿ ಪದ್ಧತಿಗೇ ಮೊರೆಹೋದದ್ದೊಂದು ವಿಪರ್ಯಾಸವೇ ಸರಿ. ಇದನ್ನೇ ಕಾಶಿಯಲ್ಲಿ ಚಂಡಾಲನೊಬ್ಬ ಶಂಕರರನ್ನು ಅಡ್ಡಗಟ್ಟಿ ಪ್ರಶ್ನಿಸಿದ್ದು. ಮತ್ತು ಆತನಲ್ಲಿ ಶಂಕರರು ಶಿವನನ್ನೇ ಕಂಡ ದಂತಕಥೆ ಹುಟ್ಟಿಕೊಂಡದ್ದು! ಅದೇನೇ ಇರಲಿ, ತಾಂತ್ರಿಕ ವಿದ್ಯಾ ಪರಿಣತರಾಗಿದ್ದ ಅವರು ಅನೇಕ ಬೌದ್ಧ ದೇವತೆಗಳಿಗೆ ಪರ್ಯಾಯವಾದ ದೇವತೆಗಳನ್ನು ಆವಾಹಿಸಿ ಅನೇಕ ಬೌದ್ಧ ಕ್ಷೇತ್ರಗಳನ್ನು ವೈದಿಕ ಕ್ಷೇತ್ರಗಳನ್ನಾಗಿ ಮಾರ್ಪಡಿಸಿದರು. ಇದಕ್ಕೆ ಆ ಕಾಲವೂ ಪಕ್ವವಾಗಿತ್ತು. ಕಾಲಚಕ್ರದ ಉರುಳಲ್ಲಿ ಧರ್ಮ ಪೊರೆ ಕಳಚಿ ಬದಲಾಗುವುದೇ ಹೀಗೆ. ಬೌದ್ಧ ಧರ್ಮ ಮೊದಲು ಸ್ಥಾಪನೆಯಾದದ್ದೂ ಹೀಗೇ ಅಲ್ಲವೆ? ನಿಜ, ಕಾಶಿಯ ಚಂಡಾಲನ ಪ್ರಶ್ನೆ ಹಾಗೇ ಉಳಿದಿದೆ. ಅದನ್ನು ಬಿಡಿಸುವ ಕೆಲಸ ಆಗಿನಿಂದಲೂ ನಡೆದೇ ಇದೆ! ನಮ್ಮ ಭಕ್ತಿ ಕವಿಗಳು, ಸಾಧು–ಸಂತರು ಮತ್ತು ಇತ್ತೀಚೆಗೆ ವಿವೇಕಾನಂದ ಮುಂತಾದ ಸುಧಾರಕರು ಮಾಡಿದ್ದೂ ಈ ಕೆಲಸವನ್ನೇ. ಅದನ್ನು ನಾವು ಮುಂದುವರೆಸಬೇಕಾಗಿದೆಯಷ್ಟೆ.

ಹಾಗೆ ನೋಡಿದರೆ, ಈ ದೇಶದಿಂದ ಬೌದ್ಧ ಧರ್ಮವನ್ನು ಓಡಿಸಲಾಗಿದೆ ಅಥವಾ ನಾಶ ಮಾಡಲಾಗಿದೆ ಎಂಬುದು ಅರ್ಧ ಸತ್ಯ ಮಾತ್ರ ಎನಿಸುತ್ತದೆ. ಓಡಿ ಹೋಗಿರುವುದು ಹೆಸರುಗಳು ಮಾತ್ರ; ಕುರುಹುಗಳು ಹಾಗೇ ಉಳಿದಿವೆ. ಹಾಗಾಗಿಯೇ ಈಗ ಇಲ್ಲಿರುವುದು ವೇದ ಧರ್ಮವಲ್ಲ; ವೇದ ಧರ್ಮದ ಭಾಷೆ ಮಾತಾಡುವ ಬೌದ್ಧಧರ್ಮ.ಅದುವೇ, ಸಿಂಧೂ ನದಿಯಾಚೆಯವರು ಗುರುತಿಸಿದ ಹಿಂದೂ ಧರ್ಮ. ಇದರಲ್ಲಿ ಜೈನ ಧರ್ಮವೂ ಸೇರಿದಂತೆ, ಕಳೆದ ಒಂದು ಸಾವಿರ ವರ್ಷಗಳಲ್ಲಿ ಭಾರತದಲ್ಲಿ ಮಂಥನಗೊಂಡ ಎಲ್ಲ ಅಧ್ಯಾತ್ಮಿಕ ಧಾರೆಗಳೂ ಸೇರಿಕೊಂಡಿವೆ ಎಂಬುದೂ ಸತ್ಯ. ಮತ್ತೆ ಹೇಳುವುದಾದರೆ, ಇದರ ದೊಡ್ಡ ಸಮಸ್ಯೆ ಎಂದರೆ ಇದರಲ್ಲಿ ಅಂತರ್ಗತವಾಗಿಹೋಗಿರುವ ಜಾತಿ ಪದ್ಧತಿ. ಹಾಗಾಗಿಯೇ ಸ್ಥೂಲವಾಗಿ ಹೇಳುವುದಾದರೆ, ಯಾವ ಹಿಂದೂ ಪ್ರಜ್ಞಾಪೂರ್ವಕವಾಗಿ(ಕಾಯಾ–ವಾಚಾ–ಮನಸಾ) ಜಾತಿಯನ್ನು ತಿರಸ್ಕರಿಸಿರುವನೋ ಅವನು ಒಂದಲ್ಲ ಒಂದು ರೂಪದ ಬೌದ್ಧನೇ ಸರಿ.

ಈ ಹಿನ್ನೆಲೆಯಲ್ಲಿ ನೋಡಿದಾಗ ಅಂಬೇಡ್ಕರ್ ತಮ್ಮ ಬದುಕಿನ ಕೊನೆಯಲ್ಲಿ ಬೌದ್ಧ ಮತ ಸೇರಲು ಕೈಗೊಂಡ ನಿರ್ಧಾರ ಭಾವನಾತ್ಮಕವಾಗಿ ಸರಿ ಎನಿಸಿದರೂ, ವ್ಯಾವಹಾರಿಕವಾಗಿಯೂ, ತಾತ್ವಿಕವಾಗಿಯೂ ಅಷ್ಟು ಸರಿ ಎನಿಸುವುದಿಲ್ಲ. ಏಕೆಂದರೆ ಅವರೊಂದಿಗೆ ಮತಾಂತರಗೊಂಡ ಅಸ್ಪೃಶ್ಯರು ನವ ಬೌದ್ಧರಾದರೇ ಹೊರತು ಬೌದ್ಧರಾಗಲಿಲ್ಲ. ಅಸ್ಪೃಶ್ಯತೆಯ ಅವಮಾನ–ಸಂಕಟಗಳಿಂದ ಮುಕ್ತಿ ಪಡೆಯಲಿಲ್ಲ. ಅವರ ಪಾಡು ಹಿಂದೂ ಅಸ್ಪೃಶ್ಯರಿಗಿಂತ ಬೇರೆಯಾಗಿಲ್ಲ. ಇದಕ್ಕೆ ಕಾರಣ, ಅಂಬೇಡ್ಕರ್ ತಮ್ಮ 'ಬುದ್ಧ ಮತ್ತು ಅವನ ಧರ್ಮ' ಪುಸ್ತಕದ ಮೂಲಕ ಕಂಡುಕೊಂಡ ಬೌದ್ಧ ಧರ್ಮ ಪೂರಾ ಧರ್ಮದ ಹೊರನೋಟ ಮಾತ್ರವಾಗಿರುವುದು. ಅಲ್ಲಿ ಬೌದ್ಧ ಧರ್ಮದ ಹೃದಯ ಸ್ಥಾನದಲ್ಲಿರುವ ನಾಲ್ಕು ಆರ್ಯ ಸತ್ಯಗಳಿಗೆ ಜಾಗವೇ ಇಲ್ಲದಾಗಿದೆ. ಇದರಿಂದಾಗಿ ಅಸ್ಪೃಶ್ಯತೆಯ ದುಃಖದ ಶೋಧನೆ ಅಪೂರ್ಣವಾಗಿದೆ. ಬೌದ್ಧ ಧರ್ಮ ಮೂಲತಃ ಹೃದಯದಲ್ಲಿ ಅರಳಿ ಬುದ್ಧಿಗೆ ತಾಕಿ ಸಾಮಾಜಿಕವಾಗಬಯಸುವ ಧರ್ಮ. ಆದರೆ ಅಂಬೇಡ್ಕರ್, ಧರ್ಮದ ಈ ದಾರಿಯನ್ನೇ ತಿರುಗು ಮಾಡಿದ್ದಾರೆನಿಸುತ್ತದೆ.

ಹಾಗಾಗಿಯೇ ಸಾಮೂಹಿಕ ಮತಾಂತರವೆಂಬುದು ಬೌದ್ಧ ಧರ್ಮಕ್ಕೆ ಅಸಾಧುವಾದದ್ದೆಂದು ಅವರಿಗೆ ಹೊಳೆದೇ ಇಲ್ಲ. ದಲೈಲಾಮಾ ಸೇರಿದಂತೆ ಬೌದ್ಧ ವಿದ್ವಾಂಸರು ಅಂಬೇಡ್ಕರ್ ಬೌದ್ಧ ಧರ್ಮವನ್ನು ಕಂಡರಿಸಿದ ಪರಿಯನ್ನು ಒಪ್ಪುವುದಿಲ್ಲ. ಕೆಲವರಂತೂ ಅದು ಧರ್ಮವಲ್ಲ, ರಾಜಕಾರಣ ಎಂದಿದ್ದಾರೆ.

ಸಾಮೂಹಿಕ ಮತಾಂತರವಿರಲಿ, ಆಧುನಿಕ ಅರ್ಥದ ಮತಾಂತರವೆಂಬುದೇ ಬೌದ್ಧ ಧರ್ಮಕ್ಕೆ ವಿರುದ್ಧವಾದದ್ದು. ಏಕೆಂದರೆ ಅದು ಮತವಲ್ಲ; ಧರ್ಮ. ದಲೈಲಾಮಾ ಮಾತುಗಳಲ್ಲೇ ಹೇಳುವುದಾದರೆ ಯಾರೂ ಮತಾಂತರ ಹೊಂದಿ ಬೌದ್ಧರಾಗಬೇಕಿಲ್ಲ. ನೀವು ನೀವಿರುವೆಡೆಯಲ್ಲೇ ಬೌದ್ಧರಾಗಿರಬಹುದು ಜೆಕೆಯವರಂತೆ, ಓಷೋರಂತೆ ಅಥವಾ ನಮ್ಮವರೇ ಆದ ಕಾರಂತ, ಕುವೆಂಪು, ತೇಜಸ್ವಿಯವರಂತೆ; ದೇವನೂರ ಮಹಾದೇವರಂತೆ. ಅಂದ ಹಾಗೆ ಆಧುನಿಕ ಕನ್ನಡದ ಎಲ್ಲ ಮುಖ್ಯ ಲೇಖಕರು ತೀವ್ರವಾಗಿ ಬುದ್ಧನೆಡೆಗೆ ಸೆಳೆಯಲ್ಪಟ್ಟಿರುವ ಮರ್ಮವಾದರೂ ಏನು? ಒಮ್ಮೆ ಯೋಚಿಸಿ ನೋಡಬೇಕು!

ಬಹುಶಃ ಅಂಬೇಡ್ಕರ್ ಅವಸರದಲ್ಲಿದ್ದರು. ಒಂದು ಕಾಲದಲ್ಲಿ ಅತಿ ಅಸಹಾಯಕ ಸ್ಥಿತಿಯಲ್ಲಿ ತಾವು ಆಡಿದ 'ಹಿಂದೂ ಆಗಿ ಸಾಯುವುದಿಲ್ಲ' ಎಂಬ ಮಾತಿಗೆ ಬದ್ಧರಾಗಿ ಅವರು ಕಾಷಾಯ ವಸ್ತ್ರ ಧರಿಸಿ ಬೌದ್ಧರಾದರು. ಆದರೆ ತಾವೆಂತಹ ಬೌದ್ಧರು ಎಂಬುದನ್ನು ಕ್ರಿಯಾ ಮೂಲಕ ತೋರಿಸಲು ಅವರು ಹೆಚ್ಚು ಕಾಲ ಬದುಕಲಿಲ್ಲ. ಆದರೆ ಅವರ ಈ ತಲೆಮಾರಿನ ಅನುಯಾಯಿಗಳಿಗೆ ಆ ಅವಕಾಶವಿದೆ. ಕಾದು ನೋಡಬೇಕು ಎನ್ನುವ ಮನಸ್ಸಾದರೂ, ಅವರ ಸದ್ಯದ ಚಾಲೂ–ಚಹರೆಗಳನ್ನು ನೋಡಿದರೆ, ಅವರಿಗೆ ಬುದ್ಧನೂ ಬೇಡ, ಅಂಬೇಡ್ಕರರೂ ಬೇಡ; ಆ ಎರಡು ಹೆಸರುಗಳಷ್ಟೇ ಸಾಕು ಎಂದೆನ್ನುತ್ತಿರುವಂತೆ ತೋರುತ್ತಿದೆ. ಕಷ್ಟ

ನಾನೊಮ್ಮೆ ಓರ್ವ ಬೌದ್ಧ ವಿದ್ವಾಂಸರನ್ನು ಕೇಳಿದ್ದೆ: 'ಅಷ್ಟು ಒಳ್ಳೆಯ ಹಿಂದೂ ಆಗಿದ್ದ ಗಾಂಧಿ ಕುರಿತು ಅಷ್ಟೊಂದು ಕ್ರೋಧ ಮತ್ತು ತಿರಸ್ಕಾರವಿದ್ದ ಅಂಬೇಡ್ಕರ್ ಬೌದ್ಧರಾಗುವುದಾದರೂ ಹೇಗೆ?' ಅದಕ್ಕೆ ಅವರು ಹೀಗೆ ಉತ್ತರಿಸಿದ್ದರು: ಬಹುಶಃ ಅವನ್ನೆಲ್ಲ ತ್ಯಜಿಸಲಿಕ್ಕೇ ಅವರು ಬೌದ್ಧರಾಗಲು ನಿರ್ಧರಿಸಿದರೇನೋ!'

ಇರಬಹುದೆಂದು ನಂಬುವುದೇ ಒಳ್ಳೆಯದು. ಆದರೆ ಕಟ್ಟಾ ಹಿಂದೂವಾದಿಗಳಾದ ಆರೆಸ್ಸೆಸ್‌ನವರು ತಮ್ಮ ಗುರೂಜಿ ಚಿತ್ರದ ಜೊತೆ ಅಂಬೇಡ್ಕರ್ ಚಿತ್ರವನ್ನಿಟ್ಟುಕೊಂಡು ಊರ ತುಂಬ ಮೆರವಣಿಗೆ ಹೊರಟಿರುವಾಗ ಈ ಅಂಬೇಡ್ಕರ್‌ವಾದಿಗಳು ಏಕೆ ಸುಮ್ಮನಿದ್ದಾರೋ ತಿಳಿಯದಾಗಿದೆ. ಕನಿಷ್ಠ ಅವರು, ಈ ಎರಡೂ ಚಿತ್ರಗಳ ಮಧ್ಯೆ ಬುದ್ಧನ ಚಿತ್ರ ಇಡಿ ಎಂದಾದರೂ ಹೇಳಬೇಕು ಅಲ್ಲವೆ?

ಇರಲಿ. ಓದುಗರೇ, ಮುಂದಿನ ಪುಟಗಳಲ್ಲಿರುವುದು ಇದೇ ವಿಚಾರಗಳ ವಿಸ್ತರಣೆ ಮತ್ತು ಚರ್ಚೆಗಳು. ದಯವಿಟ್ಟು ಓದಿ ಬರೆಯಿರಿ–**ಸಂಪಾದಕ.**

# ಬುದ್ಧನ ಶೂನ್ಯವೂ ವೈದಿಕರ ಪೂರ್ಣವೂ...

–ಲಕ್ಷ್ಮೀಶ ತೋಳ್ಪಾಡಿ



ಬುದ್ಧ ಭಗವಂತ ಅನುಭವಕ್ಕೆ ಕೊಟ್ಟ ಮಹತ್ತ್ವ ಅನನ್ಯವಾದ್ದು. ಹರಿತವಾದ ಬಾಣವೊಂದು ಒಡಲಲ್ಲಿ ನೆಟ್ಟವನಿಗೆ ಯಾತನೆಯ ಆ ತೀವ್ರ ಅನುಭವವೊಂದೇ ನಿಜ; ನೋವೇ ನಿಜ, ಉಳಿದ ಯಾವ ಮಾತುಗಳೂ ಅಲ್ಲ ಎನ್ನುವ ಹೇಳಿಕೆ ಸ್ವಯಂ ಬುದ್ಧನದೇ. ಉಳಿದ ಮಾತುಗಳೆಂದರೆ – ಬಾಣವನ್ನು ಎಸೆದವನಾರು? ಯಾವ ದಿಕ್ಕಿನಿಂದ? ಯಾವ ಲೋಹದಿಂದ ಆ ಬಾಣವನ್ನು ತಯಾರಿಸಲಾಗಿದೆ? – ಇಂಥ ಚಿಂತೆಗಳು. ಇವೆಲ್ಲ ವ್ಯರ್ಥ ಕಲಾಪ. ಅಂದರೆ ಇಂಥ ಚಿಂತೆಗಳು ಕಾಲ – ದೇಶಬದ್ಧವಾದ ಸನ್ನಿವೇಶವೊಂದನ್ನು ಸೃಷ್ಟಿ ಮಾಡುತ್ತವೆ. ಒಂದು ಚಿತ್ರವನ್ನು ರಚಿಸುತ್ತವೆ. ಅನುಭವಕ್ಕೆ ವಿವರಣೆಯನ್ನು ಒದಗಿಸುತ್ತವೆ. ನೋವಿನ ಅನುಭವವನ್ನು ನಮಗೆ ಅರ್ಥಮಾಡಿಸುವ ಪ್ರಯತ್ನ ಮಾಡುತ್ತವೆ. ಆದರೆ ಈ ಎಲ್ಲ ಪ್ರಯತ್ನದಲ್ಲಿ ಅನುಭವದಿಂದಲೇ ಹೊರ ಹೋಗುತ್ತಿರುವುದು ಅದಕ್ಕೆ ಗೊತ್ತೇ ಆಗುವುದಿಲ್ಲ. ಈ ಎಲ್ಲ ಪ್ರಯತ್ನಗಳೂ ಅನುಭವವನ್ನು ತೆಳ್ಳಗೆ ಮಾಡುವ, ಅದರ ತೀವ್ರತೆಯನ್ನು ಕಡಿಮೆ ಮಾಡುವ ಅನುಭವದೆಡೆಗಿನ ಗಮನವನ್ನು ಬೇರೆಡೆ ಸೆಳೆಯುವ ತಂತ್ರದಂತೆ ಕೆಲಸಮಾಡಿ ಅನುಭವದ ಮಹತ್ತ್ವವನ್ನು ಕಳೆಗುಂದಿಸುತ್ತವೆ. ತೀವ್ರವಾದ ಅನುಭವವೊಂದನ್ನು ತಡೆದುಕೊಳ್ಳುವುದು – ಧಾರಣ ಮಾಡುವುದು – ಮನುಷ್ಯ ಜೀವಕ್ಕೆ ಕಷ್ಟವೇ.

'ಧಾರಣ' ಮಾಡುವುದೆನ್ನುವುದೇ 'ಧರ್ಮ' ಪದದ ಅರ್ಥ. ಈ ಅರ್ಥದಲ್ಲಿ ಧರ್ಮ ಎನ್ನುವ ಪದ ಬುದ್ಧನಿಗೆ ತುಂಬ ಪ್ರಿಯವಾದ್ದು. ಅನುಭವವನ್ನು ಧಾರಣ ಮಾಡುವುದು, ಮನುಷ್ಯನಿಗೆ – ಅನುಭವಿಸುವುದಕ್ಕಾಗಿಯೇ ಹುಟ್ಟಿಬಂದ ಈ ಜೀವಿಗೆ – ಯಾಕೆ ಕಷ್ಟವಾಗಬೇಕೆನ್ನುವುದೇ ಒಂದು ರಹಸ್ಯವಾಗಿದೆ! ಆದರೆ ಕಷ್ಟವಾಗುವುದರಿಂದಲೇ ತೀವ್ರತೆಯನ್ನು ಕಡಿಮೆಮಾಡುವ ಪ್ರಯತ್ನಗಳತ್ತ ಮನಸ್ಸು ಹರಿಯುವುದು. ಇದಕ್ಕೆ ಇನ್ನೊಂದು ಮುಖ ಇದೆ. ಅನುಭವಕ್ಕಿಂತ ಅದರ ನಿರೂಪಣೆಯಲ್ಲಿ ಆಸಕ್ತವಾದ, ಅನುಭವವನ್ನು ಕಾಲ – ದೇಶ ಬದ್ಧಗೊಳಿಸುವುದರಲ್ಲಿ ಆಸಕ್ತವಾದ – ಈ ಅರ್ಥದಲ್ಲಿ ಸಾಂಸ್ಕೃತಿಕವಾದ – ಮನಸ್ಸಿಗೆ ತೀವ್ರವಾದ ಅನುಭವಗಳೇ ಉಂಟಾಗದಿರುವ ಸಂಭವವೇ ಹೆಚ್ಚಾಗಿದೆ! ಇದನ್ನು 'ಪ್ರಮಾದ' ಎಂದು ಬುದ್ಧ ಗುರುತಿಸುತ್ತಾನೆ. 'ಪ್ರಮಾದ' ಎಂದರೆ ಎಚ್ಚರಗೇಡಿತನ. ಅನುಭವದಲ್ಲಿ ನಿಲ್ಲಲಾಗದ, ತಳಮಟ್ಟ ಅನುಭವಿಸಲಾಗದ ದೌರ್ಬಲ್ಯ. ಮಹಾಪರಿನಿಬ್ಬಾನ ಸುತ್ತದಲ್ಲಿ ತೋರಿಬರುವಂತೆ ಬುದ್ಧನ ಕೊನೆಯ ಮಾತುಗಳೂ 'ಅಪ್ಪಮಾದೇನ ಸಂಪಾದೇಥಾ' – ಎಚ್ಚರಗೆಡದ ಪ್ರಜ್ಞೆಯ ಬೆಳಕಿನಿಂದ ಪಡೆಯಬೇಕಾದುದನ್ನು ಪಡೆಯಿರಿ – ಎಂದೇ ಆಗಿವೆ. 'ಪ್ರಜ್ಞೆ' ಮತ್ತು 'ಅಪ್ರಮಾದ' ಎಂಬ ಪದಗಳು ಬುದ್ಧನನ್ನು ತಿಳಿಯುವುದಕ್ಕೆ ಕೀಲಿಯಂತಿರುವ ಪದಗಳು.

ಈ ಅಂಶವನ್ನು ಇನ್ನಷ್ಟು ಮನನ ಮಾಡಬೇಕಿದೆ.

ಅನುಭವಕ್ಕಿಂತ ಅದರ ನಿರೂಪಣೆಯ ಪ್ರಯತ್ನಗಳೇನಿವೆ ಇವನ್ನು ಒಂದು ಕರ್ಮಕಾಂಡ ಎಂದು ನಾವು ಬಗೆದರೆ ಬುದ್ಧನು ಕರ್ಮಕಾಂಡದ ಪರ ಅಲ್ಲ. ಅವನು ಜ್ಞಾನದ ಪರ. ಜ್ಞಾನವೆಂದರೆ ಅನುಭವದ ಕಡೆಗಿನ ಏಕಗಮನ. ಆದುದರಿಂದ ಜ್ಞಾನವು ಅನುಭವನಿಷ್ಠ. ಈ ಪ್ರಯತ್ನಗಳನ್ನು ಸಂಸ್ಕೃತಿ ಎಂದು ನಾವು ಬಗೆದರೆ, ಬುದ್ಧ ಸಂಸ್ಕೃತಿಯ ಪರ ಅಲ್ಲ. ಅವನು ಪ್ರಕೃತಿಯ ಪರ. 'ಅನುಭವ'ವೆನ್ನುವ ಪ್ರಕೃತಿಯ ಮುಂದೆ, ಯಾವಾಗ, ಎಲ್ಲಿ, ಹೇಗೆ ಎನ್ನುವ ಕಾಲದೇಶಗಳ ನಿರೂಪಣೆಯೇ ಅಪ್ರಸ್ತುತ ಎನ್ನುವವನು.

ಮನುಜನಿಗೆ ಅವನ ಅನುಭವವೇ ಪ್ರಮಾಣ – ಯಾವ ವೇದ ಶಾಸ್ತ್ರಗಳೂ ಅಲ್ಲ ಎನ್ನುವ ಬುದ್ಧನ ಮಾತಿನ ಹಿಂದೆ ಆಳವಾದ ಒಳನೋಟವಿದೆ. ಒಂದು ಉದಾಹರಣೆಯ ಮೂಲಕ ನೋಡುವುದಾದರೆ, ನಮ್ಮ ಕುಮಾರವ್ಯಾಸನ ಗದುಗಿನ ಭಾರತದಲ್ಲಿ ಬರುವ ಒಂದು ಸಂದರ್ಭವನ್ನು ಗಮನಿಸಬಹುದು. ಹಸ್ತಿನಾವತಿಗೆ ಸಂಧಾನಕ್ಕಾಗಿ ಬಂದ ಕೃಷ್ಣ ವಿದುರನ ಮನೆಗೆ ತಾನಾಗಿ ಬಂದಿದ್ದಾನೆ. ವಿದುರನಿಗಾದರೋ ಕೃಷ್ಣನೆಂದರೆ ಸಾಕ್ಷಾತ್ ದೇವರು! ವಿದುರ, ಕೃಷ್ಣನನ್ನು ಕಂಡು ತೀವ್ರವಾದ ಭಾವಾವೇಶಕ್ಕೆ ಒಳಗಾಗಿದ್ದಾನೆ. ಈ ಸಂದರ್ಭವನ್ನು ಕುಮಾರವ್ಯಾಸ ಹೀಗೆ ವರ್ಣಿಸುತ್ತಾನೆ

**"ವೇದದರಿಕೆಗಳಡಗದುಪನಿಷ
ದಾದಿ ದಿವ್ಯ ಸ್ತುತಿಯ ಗಡಣೆಗೆ
ಹೋದ ಹೊಲಬಳವಡದ ಮುನಿಗಳ ಮಖಕೆ ಮನಗುಡದ
ಕಾದಿ ಕಡಗುವ ತಾರ್ಕಿಕರು ಬೆಂ –
ಡಾದರಲ್ಲದೆ ನಿಜವನರಿಯದ
ನಾದಿ ಸಿದ್ಧನ ಬರವ ಕಂಡನು ಬಾಗಿಲಲಿ ವಿದುರ"**

ವೇದೋಪನಿಷತ್ತುಗಳೆಲ್ಲ ದಿವ್ಯಸ್ತುತಿಯೇ ಇರಬಹುದು. ಆದರೆ ಅವುಗಳಿಗೆ ನಿಜದ ಪತ್ತೆ ಸಿಕ್ಕಿಲ್ಲ. ತಾನು ಕಾಣುತ್ತಿರುವ 'ನಿಜ'ವನ್ನು ತನ್ನ 'ಅನುಭವ'ವನ್ನು ಆ ಹಿಂದಿನ ಮಾತುಗಳಲ್ಲಿ ಹೇಳುವಂತಿಲ್ಲ. ಅವುಗಳನ್ನು ಉಲ್ಲೇಖಿಸುವುದಾದರೂ ಅವುಗಳಿಗೆ ಸಿಕ್ಕಿಲ್ಲ; ಅದಕ್ಕಾಗಿ ಅವು ತೊಳಲುತ್ತಿವೆ ಎಂದೇ ಉಲ್ಲೇಖಿಸಬೇಕಾಗುತ್ತದೆ. ಕುಮಾರವ್ಯಾಸ ವೇದ ನಿಂದಕನಲ್ಲ. ವೈದಿಕ ಕವಿಯೇ. ಆದರೆ ಅವನು ಮೂಲತ: ಕವಿ. ಅವನಿಗೆ ಗೊತ್ತು – ಅನುಭವದ ತೀವ್ರತೆಗೆ ಸಿದ್ಧಮಾತುಗಳ ನಿರಾಕರಣೆಯೇ ಸಹಜ ಎಂದು. ಸಿದ್ಧ ಮಾತುಗಳು ತಾವು ನಿರಾಕೃತವಾಗಿ 'ಅನುಭವ'ವನ್ನು ಗೆಲ್ಲಿಸುವವು!

ಇನ್ನೊಂದು ರೀತಿಯಲ್ಲಿ ಇದು ಬುದ್ಧನ ಸಂದರ್ಭವೂ ಹೌದು. ಅನುಭವದ 'ನಿಜ'ವನ್ನು ತಿಳಿದವನಿಗೆ ಉಳಿದೆಲ್ಲದರ 'ಹುಸಿ'ಯೂ ತಿಳಿದುಬಿಟ್ಟಿದೆ. ಕಾಲ–ದೇಶಗಳೂ ಹುಸಿ ಎಂದು ತಿಳಿದು ಬಿಟ್ಟಿದೆ. ಅನುಭವದಲ್ಲಿ ಅಚ್ಯುತನಾಗಿ ನಿಂತವನಿಗೆ, ಹಾಗೆ ನಿಂತುದರಿಂದಲೇ, ಅನುಭವವು ಸಂಭವಿಸುವುದೇ ಕಾಲ – ದೇಶಗಳ ಕಟ್ಟಿನಿಂದ ಮೇಲೆತ್ತಲು ಎಂದೂ ತಿಳಿದು ಹೋಗಿದೆ. ಈ ಅನುಭವಕ್ಕೆ ಪರ್ಯಾಯವಿಲ್ಲ; ಇದಕ್ಕೆ ಪರ್ಯಾಯಗಳನ್ನು ರೂಪಿಸುತ್ತ, ಪರ್ಯಾಯಗಳನ್ನೇ ಅನುಭವವೆಂದು ನಿರೂಪಿಸುತ್ತ, ಧರ್ಮದ ಇತಿಹಾಸ ನಡೆದಿರುವುದೂ ಕಂಡಿದೆ. ಈ ಕಾರಣದಿಂದಲೇ ಬುದ್ಧ 'ಅನುಭವ ಪ್ರಾಮಾಣ್ಯ'ವನ್ನು ರಾಜಿ ಇಲ್ಲದೆ ಸಾರುತ್ತ ಸಾಗಿರುವುದು.

ನೋವಿನ ಅನುಭವ – ನೋವಿನ ನಿಜ – ಎಂಬ ಮಾತು. ಒಡಲಿಗೆ ಬಾಣ ತಾಗಿದ ಮಾತು ಒಂದು ರೂಪಕ. ಆಶ್ಚರ್ಯವೆಂದರೆ, ಉಪನಿಷತ್ತಿನಲ್ಲಿ ಇದೇ ರೂಪಕವನ್ನು ಬಳಸಲಾಗಿದೆ. **"ಶರವತ್ ತನ್ಮಯೋ ಭವೇತ್"**. ತನ್ನ ಗುರಿಯಲ್ಲಿ ಕಚ್ಚಿನಿಂತ ಬಾಣದಂತೆ ಏಕಾಗ್ರತೆಯನ್ನು ಸಾಧಿಸು – ಎಂಬ ಮಾತು. ಬಾಣದ ಮೊನೆಯಲ್ಲಿ ಅದರ ಗುರಿ ಯಾವಾಗಲೂ ಅಡಗಿ ಇರುತ್ತದೇನೋ! ಬುದ್ಧ ನೋವಿನ ಅನುಭವವನ್ನು ಸೂಚಿಸುವುದಕ್ಕಾಗಿ ಈ ರೂಪಕವನ್ನು ಬಳಸುತ್ತಾನೆ.

ಎಂಥ ನೋವು? ಈ ನೋವಿನ ಆಳದ ಸ್ವರೂಪವೇನು? ಬುದ್ಧ ಉಪದೇಶಿಸಿದ ನಾಲ್ಕು ಆರ್ಯಸತ್ಯಗಳಲ್ಲಿ ಮೊದಲನೆಯದಾದ, ಮೊದಲನೆಯದಾಗಿ, ಉಳಿದ ಸತ್ಯಗಳಿಗೆ ಆಧಾರವೆನ್ನಬಹುದಾದ ಇಲ್ಲಿ ಈ ಬದುಕಿನಲ್ಲಿ ದುಃಖ ಹೆಪ್ಪುಗಟ್ಟಿದೆ – ಇದು ನಿಜ ಎಂಬ ಕಾಣ್ಕೆಗೆ ಕಾರಣವಾದ ನೋವಿನ ಸ್ವರೂಪವೇನು? ಯಾವ ನೋವಿನ ಅನುಭವವು ಸಾಕ್ಷಾತ್ಕಾರ ಸದೃಶವಾಗಿ 'ನಿರ್ವಾಣ'ದ ಬಾಗಿಲೇ ತೆರೆಯಲ್ಪಡುವುದೋ ಅಂಥ ನೋವಿನ ಸ್ವರೂಪವೇನು? ಅದು ದೈಹಿಕವೆ? ಮಾನಸಿಕವೆ? ಅಂತಃಕರಣ ಸಂಬಂಧಿಯೆ? ನೈಸರ್ಗಿಕವೆ? ತಾತ್ತ್ವಿಕವೆ? ಅಥವಾ ಈ ಎಲ್ಲವೆ?

ನಿಸ್ಸಂದೇಹವಾಗಿ ಇದು ಸಾವಿನ ಪ್ರಜ್ಞೆಯಿಂದ ಉಂಟಾದ ನೋವು.

ರಾಜಕುಮಾರ ಸಿದ್ಧಾರ್ಥನಿಗೆ ಸಂಬಂಧಿಸಿದ ಪ್ರಸಿದ್ಧವಾದ ಆ ಕಥೆ ಎಲ್ಲರಿಗೆ ತಿಳಿದಿದೆ. ರಥವೇರಿ ನಾಲ್ಕು ದಿನ ಕುಮಾರ ನಗರದಲ್ಲಿ ವಿಹರಿಸುವಾಗ ನಾಲ್ಕು ವಿಭಿನ್ನ ದೃಶ್ಯಗಳನ್ನು ಕಂಡ ಕಥೆ. ರೋಗಿ, ಮುದುಕ, ಶವ ಮತ್ತು ಸನ್ಯಾಸಿಯೋರ್ವನನ್ನು ಕಂಡ ಕಥೆ. ಇಂಥವನ್ನು ಅದುವರೆಗೆ ರಾಜಕುಮಾರ ನೋಡಿರಲಿಲ್ಲ ಎನ್ನಲಾಗಿದೆ. ಅಂದರೆ ಮೊದಲಬಾರಿಗೆ ಜರಾ–ಮರಣಗಳ ದರ್ಶನವಾಗಿದೆ. ಸಾವಿನ ಪ್ರಜ್ಞೆಯೊಂದು ಹೆದ್ದೆರೆಯಂತೆ ಮೇಲೆದ್ದು ಅದುವರೆಗೆ ಬದುಕಿನ ಬಗೆಗೆ ಕಟ್ಟಿಕೊಂಡ ಎಲ್ಲ ಭಾವನೆಗಳನ್ನೂ ನುಚ್ಚುನೂರಾಗಿಸಿದೆ.

ಈ ನೋವು ದೈಹಿಕವೂ ಹೌದು. ಮನುಷ್ಯ ಮನೋದೇಹಿಯಾದ್ದರಿಂದ ಮಾನಸಿಕವೂ ಹೌದು. Physical ಆದದ್ದು Metaphysical ಆಗಿ ಬೆಳೆಯುತ್ತದೆ. Metaphysical ಆದದ್ದು Physical ಆಗಿ ಕಾಣಿಸಿಕೊಳ್ಳುತ್ತದೆ. ಸಾವು ನೈಸರ್ಗಿಕವಾದ್ದರಿಂದ ಈ ನೋವು ನೈಸರ್ಗಿಕವೂ ಹೌದು. ಸಾವೆಂದರೇನೆನ್ನುವುದು ಗಹನವಾದ ತಾತ್ತ್ವಿಕ ಪ್ರಶ್ನೆಯಾದುದರಿಂದ ನೋವು ತಾತ್ತ್ವಿಕವೂ ಹೌದು.

ಮನುಷ್ಯ ಸತ್ತಮೇಲೂ ಅವನ ದೇಹ – ಕಳೇಬರ – ಇರುವುದರಿಂದ, ದೇಹ ಸಾಯುವುದಿಲ್ಲ ಎನ್ನಬಹುದು. ಅಥವಾ ದೇಹ ಸತ್ತೇ ಇದೆ ಎನ್ನಬಹುದು ಕೂಡ! ಆತ್ಮವನ್ನು ಒಪ್ಪುವವರು ಆತ್ಮಕ್ಕೆ ಹುಟ್ಟು–ಸಾವುಗಳಿಲ್ಲವಾಗಿ ಆತ್ಮವೂ ಸಾಯುವುದಿಲ್ಲ ವೆಂದಾಗ, ಹಾಗಾದರೆ ಸಾಯುವುದು ಯಾವುದು? ಅಥವಾ ಸಾಯಬೇಕಾದುದು ಯಾವುದು? ಸತ್ತವರು ಮರಳಿ ಹುಟ್ಟುತ್ತಾರೆ ಎಂದೊಪ್ಪಿದರೆ ಅವರು ಸಾಯಲಿಲ್ಲವೆಂದಾಯಿತು. ಮರಳಿ ಹುಟ್ಟದಿರಬೇಕಾದರೆ ಹಾಗೆ ಮರಳಿ ಹುಟ್ಟದಂತೆ ಸಾಯಬೇಕೆಂದಾಯಿತು! ಹಾಗೆ ಸಾಯಬೇಕಾದ 'ಅದಾ'ವುದು? ಮರಳಿ ಹುಟ್ಟದಿರುವ ಸ್ಥಿತಿಯನ್ನು ಬಿಡುಗಡೆ – ನಿರ್ವಾಣ ಎಂದೊಪ್ಪಿದರೆ ತಾನು ಸತ್ತು ನಮ್ಮನ್ನು ಬಿಡುಗಡೆಗೊಳಿಸುವ ಆ 'ಅಂಶ' ಅದಾವುದು? ಸಾವಿನ 'ಅನುಭವ'ದಲ್ಲಿಯೇ, – ಪ್ರಜ್ಞಾಪೂರ್ವಕವಾದ ಸಾವಿನ ಅನುಭವದಲ್ಲಿಯೇ – ಈ ಎಲ್ಲ ಅಂಶಗಳು ನಿಚ್ಚಳವಾಗಬೇಕು. ಬೇರೆ ದಾರಿಗಳಿಲ್ಲ. ಸಾವಿನ ಅನುಭವವನ್ನು ಪಡೆದವನು ಮತ್ತೆ ಸಾಯುವುದಿಲ್ಲ. ಅಂದರೆ ಮತ್ತೆ ಹುಟ್ಟುವುದಿಲ್ಲ. ಹುಟ್ಟು–ಸಾವುಗಳ ಚಕ್ರ ತನ್ನಲ್ಲಿ ನಿಲುಗಡೆಯಾಗಿದೆ ಎಂದು ಬುದ್ಧ ಹೇಳಿದ್ದುಂಟು. ಸಾವಿನ ಪ್ರಜ್ಞೆಯಿಂದ ಹುಟ್ಟಿಕೊಂಡ ನೋವು ಎಲ್ಲ ನೋವುಗಳ ಮೂಲ! ಸಾವಿನ ಅನುಭವದತ್ತ ಕೊಂಡೊಯ್ಯುವ ಹಾದಿಯೂ ಈ ನೋವೇ. ಆದುದರಿಂದಲೇ ಬುದ್ಧನ ದರ್ಶನದಲ್ಲಿ ನೋವಿನ ಅನುಭವ – ಅರ್ಥಾತ್ ದುಃಖ ಇದೆ ಎಂಬ ಸತ್ಯ – ಮೂಲಭೂತವಾದದ್ದು.

ಉಪನಿಷತ್ತಿನಲ್ಲಿ, ಯಾವ ಒಂದನ್ನು ತಿಳಿದರೆ ಈ ಎಲ್ಲವನ್ನೂ ತಿಳಿದಂತಾಗುವುದೋ ಅದಾವುದು – *ಕಸ್ಮಿನ್ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತಿ* – ಎಂಬ ಜಿಜ್ಞಾಸೆಯೊಂದಿದೆ. ಯಾವುದೋ ಒಂದು ಸೂತ್ರದಲ್ಲಿ ಲೋಕದ ಬದುಕೆಲ್ಲ ಪೋಣಿಸಲ್ಪಟ್ಟಿದೆ ಎಂಬ ಉತ್ತರವನ್ನು ಈ ಪ್ರಶ್ನೆ ತನ್ನಲ್ಲಿಯೇ ಒಳಗೊಂಡಿದೆ. ಆ ಸೂತ್ರವನ್ನು, ದೇವರು, ಬ್ರಹ್ಮ, ಆತ್ಮ, ಸತ್ಯ ಇತ್ಯಾದಿಯಾಗಿ ಹೇಳಿದ್ದಾರೆ. ಆ ಮಾತಿರಲಿ. ಬುದ್ಧನಲ್ಲಿ ಯಾರಾದರೂ ಈ ಪ್ರಶ್ನೆಯನ್ನು ಮುಂದಿಡುತ್ತಿದ್ದರೆ, ನೋವಿನ ಅನುಭವದಲ್ಲಿ ಬದುಕಿನ ಎಲ್ಲ ರಹಸ್ಯಗಳೂ ಅಡಗಿವೆ ಎನ್ನುತ್ತಿದ್ದ. ಇದು ಬುದ್ಧನ ವಿಶೇಷ. ಇದು ಹೊಸಮಾತು. ಇದು ಅನುಭವದಿಂದಲೇ ಹುಟ್ಟಿಕೊಂಡ ಮಾತು. ಯಾವ ಕಲಬೆರಕೆಯೂ ಇಲ್ಲದ ಮಾತು. ದೊಡ್ಡಜ್ಞಾನಿ, ಎಷ್ಟು ಮುಗ್ಧನಾಗಿರುತ್ತಾನೆ ಎನ್ನುವುದಕ್ಕೆ ಸೂಚಕವಾದ ಮಾತು.

ತಾನು ಬೋಧಿಯನ್ನು ಪಡೆದ ಮೇಲೆ ಮಾಡಿದ ತನ್ನ ಮೊದಲ ಪ್ರವಚನದಲ್ಲಿ ಬುದ್ಧ ನೀವು ಇದುವರೆಗೆ ಕೇಳಿರದ ವಿಷಯದಲ್ಲಿಯೇ ಬೆಳಕು – 'ಜ್ಞಾನದ ಬೆಳಕು' ಇರುವುದು ಎಂದು ಅರ್ಥಪೂರ್ಣವಾಗಿ ಹೇಳಿದ್ದ. ಹೊಸತನ್ನು ಕೇಳುವ ಕಿವಿಯ ಕಂಪನವನ್ನು ಕೇಳುವ ಕಲೆಯನ್ನು ಸೂಚಿಸಿದ್ದ. ಸಾವಿನ ವಿಷಯವಾಗಿ ಮೊದಲಬಾರಿಗೆ ಸಿದ್ಧಾರ್ಥ ಕೇಳಿದಾಗ ಹಾಗೆಯೇ ಕೇಳಿದ್ದ!

ಬುದ್ಧ ಯಾವುದನ್ನು ಕುರಿತೇ ಮಾತನಾಡಲಿ; ಅದೇ ಅನುಭವ ನಿಷ್ಠೆ. ರಂಜನೆಯ ಮಾತೇ ಇಲ್ಲ. 'ಅನಂತ' ಎನ್ನಲಾರ. 'ಕ್ಷಣ' ಎನ್ನುವ. 'ಆನಂದ' ಎನ್ನಲಾರ. 'ದುಃಖ' ಎನ್ನುವ. 'ಬ್ರಹ್ಮೈಕ್ಯ' ಎನ್ನಲಾರ. 'ನಿರ್ವಾಣ' ಎನ್ನುವ. ನಿರ್ವಾಣವೆಂದರೆ – ದೀಪ ಆರಿಹೋಗುವುದು – ಎಲ್ಲಿಂದ ಬಂತೋ ಅಲ್ಲಿಗೆ ಹೋಗುವುದು; ಸಹಜ ನಡೆ ಎನ್ನುವ ಅರ್ಥದಲ್ಲಿ. 'ಪೂರ್ಣ' ಎನ್ನಲಾರ. 'ಶೂನ್ಯ' ಎನ್ನುವ. ಶೂನ್ಯವೆಂದರೇನು? ನಾಲ್ಕು ಕೋಟಿಗಳನ್ನು ಮೀರಿದ್ದು ಎಂದು ಬೌದ್ಧರು ವಿವರಿಸುವರು. ನಾಲ್ಕು ಕೋಟಿಗಳೆಂದರೆ? ಇದೆ, ಇಲ್ಲ, ಇದೆ ಮತ್ತು ಇಲ್ಲ, ಇದೆ ಮತ್ತು ಇಲ್ಲ ಎಂಬೆರಡೂ ಇಲ್ಲ – ಇವೇ ಪ್ರಸಿದ್ಧವಾದ ಆ ನಾಲ್ಕು ಕೋಟಿಗಳು. ಇರುವಿಕೆಯ ನಾಲ್ಕು ವಚನೀಯ ಅವಸ್ಥೆಗಳು. ಶೂನ್ಯವೆಂದರೆ ಈ ನಾಲ್ಕನ್ನೂ ಮೀರಿದ್ದು ಎಂದು. ಅನಿರ್ವಚನೀಯ –ಎಂದು. ಇದೇನೋ ನಿಜ.



ಆದಿ ಶಂಕರಾಚಾರ್ಯ

ಆದರೆ ಅಂಟೋನಿಂಯೋ ಪೋರ್ಷಿಂಯಾ ಎಂಬ ಬೌದ್ಧ ಅನುಭಾವಿಯೋರ್ವ 'He who has seen every thing empty itself is close to knowing what it is filled with' ಎಂದು ಅದ್ಭುತವಾಗಿ ಹೇಳಿದ. ಈ ಅನುಭಾವಿ, ವೃತ್ತಿಯಲ್ಲಿ ಖಾಲಿ ಮಡಕೆಗಳನ್ನು ಮಾಡುವ ಕುಂಬಾರ ಎನ್ನುವ ಅಂಶ ಇನ್ನಷ್ಟು ಅರ್ಥಪೂರ್ಣ. ತಾತ್ಪರ್ಯವೇನೆಂದರೆ, ಬುದ್ಧನ ಮಾತುಗಳಿಗೆ ಸ್ಪಂದಿಸಬೇಕಾದರೆ ಅನುಭವ ಸಂವಾದಿಯಾಗಿ ಸ್ಪಂದಿಸಬೇಕಲ್ಲದೆ, ಕಲಿತ ಮಾತುಗಳ ಹಿನ್ನೆಲೆಯಲ್ಲಿ ಅಲ್ಲ ಎನ್ನುವುದು.

ಬುದ್ಧ ಪೂರ್ವದ ಉಪನಿಷತ್ ವಾಙ್ಮಯದಲ್ಲಿ ಬೌದ್ಧ ದರ್ಶನದ ಹೊಳಹುಗಳು ಇವೆ ಎನ್ನುವುದು ನಿಜ. ಬುದ್ಧ ಪದೇಪದೇ ಬಳಸುವ ಅಪ್ರಮಾದ ಎಂಬ ಪದ ಉಪನಿಷತ್ತುಗಳಲ್ಲಿ ಬಳಕೆಯಾಗಿರುವಂಥದೇ. 'ನಪ್ರಮದಿತವ್ಯಂ' ಎಚ್ಚರಗೇಡಿಗಳಾಗಬೇಡಿ ಎನ್ನುವುದು ಉಪನಿಷದುಪದೇಶವೇ. ಇನ್ನಷ್ಟು ಸ್ಪಷ್ಟವಾಗಿ ಛಾಂದೋಗ್ಯದಲ್ಲಿ ಒಂದು ಕಥೆ ಇದೆ. ಸನತ್ಕುಮಾರನೆಂಬ ದೊಡ್ಡ ಜ್ಞಾನಿಯ ಬಳಿಗೆ ನಾರದನೆಂಬ ಜಿಜ್ಞಾಸು ಬರುತ್ತಾನೆ. ನಾರದ ವೇದಾದಿ ಶಾಸ್ತ್ರಗಳನ್ನೆಲ್ಲ ಓದಿದ್ದಾನೆ. ಮತ್ತೇನು ಸಮಸ್ಯೆ? ನಾರದ ಹೇಳುತ್ತಾನೆ: ತಾನು ಓದಿದ್ದೇನೋ ನಿಜ. ಆದರೆ ತಾನು ದುಃಖಮುಕ್ತನಾಗಿಲ್ಲ. ದುಃಖದಿಂದ ತನ್ನನ್ನು ಬಿಡುಗಡೆ ಗೊಳಿಸದ ಓದು ಯಾತರ ಓದು? ಆದುದರಿಂದ ತನ್ನನ್ನು ಬದುಕೆಂಬ ಈ ದುಃಖದ ಹೊಳೆಯ ಆಚೆಗಿನ ದಡ ಹತ್ತಿಸಿರಿ ಎಂದು ಸನತ್ಕುಮಾರನಲ್ಲಿ ಪ್ರಾರ್ಥಿಸುತ್ತಾನೆ.

ಇದು ಸ್ಪಷ್ಟವಾಗಿ, ವೇದಶಾಸ್ತ್ರಗಳ ಸಮಸ್ಯೆ; ಅಂತರಂಗದಲ್ಲಿ ಮಡುಗಟ್ಟಿದ ದುಃಖದ ಸಮಸ್ಯೆಗಳ ಕುರಿತು ಹೇಳುತ್ತ ಬುದ್ಧದರ್ಶನಕ್ಕೆ ಮುನ್ನುಡಿ ಬರೆದಂತೆ ಇದೆ. ಆದರೆ ಉಪನಿಷತ್ತು ಅನಾತ್ಮವಾದಿಯಲ್ಲ. ಬುದ್ಧ ಆತ್ಮವಾದಿಯಲ್ಲ. ಈ ಭಿನ್ನತೆ ಇರುವುದು ನಿಜ. ಆದರೆ, ಇರುವಿಕೆ (ಆತ್ಮ) ಇಲ್ಲದಿರುವಿಕೆ (ಅನಾತ್ಮ)ಗಳ ಅನುಭವವೂ ಕೂಡ, ಶೂನ್ಯ–ಪೂರ್ಣಗಳಂತೆ ತುಂಬ ಸೂಕ್ಷ್ಮವಾಗಿರುವಂಥದು. ನಮ್ಮ ತರ್ಕದ ಮಿತಿಯನ್ನು, ನಮ್ಮ ಭಾಷೆಯ ಮಿತಿಯನ್ನು ನಮಗೇ ತಿಳಿಸುವಂಥದು, ಉದಾಹರಣೆಗೆ ದೇವರು ತನ್ನಲ್ಲೇ ತಾನಿದ್ದ ಎಂಬ ಸ್ಥಿತಿಯನ್ನು ವರ್ಣಿಸುತ್ತ ಭಾಗವತ ಪುರಾಣವು, 'ಅವನು ತಾನಿಲ್ಲವೆಂದೇ ತಿಳಿದಿದ್ದ' (*ಮೇನೇ ಅಸಂತಮಿವ ಆತ್ಮಾನಂ*) ಎನ್ನುತ್ತದೆ. ಎಲ್ಲವೂ ತಾನಾಗಿರುವ ಸ್ಥಿತಿಗೂ, ತಾನಿಲ್ಲವೆಂದು ತಿಳಿದಿರುವ ಸ್ಥಿತಿಗೂ ತುಂಬ ಹತ್ತಿರದ ಸಂಬಂಧವಿದೆ ಎಂದು ತಿಳಿಯಬೇಕೆಂದೇ – ಇಂಥ ಮಾತುಗಳನ್ನು ಆಧ್ಯಾತ್ಮಿಕ ವಾಙ್ಮಯಗಳು ಬಳಸುತ್ತವೆ. ಉಪನಿಷತ್ತುಗಳಲ್ಲಂತೂ ಪರಸ್ಪರ ವಿರೋಧವಾಗಿ ಕಾಣುವ ಮಾತುಗಳು ಹೇರಳವಿವೆ. 'I am vast, I contradict' ಎನ್ನುವ Whitman ಮಾತು ನೆನಪಾಗುತ್ತದೆ. Rilke ತನ್ನೊಂದು ಪದ್ಯದಲ್ಲಿ pure contradiction ಎನ್ನುವ ಅದ್ಭುತ ಪದ ಬಳಸುತ್ತಾನೆ. ನಾನದನ್ನು 'ಪಾವನ–ದ್ವಂದ್ವ' ಅಂದುಕೊಳ್ಳುತ್ತೇನೆ. ಉಪನಿಷತ್ತನ್ನೂ ಬುದ್ಧನನ್ನೂ ಕುರಿತು ಚಿಂತಿಸುವಾಗ ಈ 'ಪಾವನ–ದ್ವಂದ್ವ'ವೇ ನನ್ನ ಆಸರೆಯಾಗಿದೆ.

ಶಂಕರರು ತಮ್ಮ ಬ್ರಹ್ಮಸೂತ್ರ ಭಾಷ್ಯದಲ್ಲಿ ಬೌದ್ಧ ದರ್ಶನವನ್ನು ಒರಟಾಗಿ ಟೀಕಿಸಿದ್ದು ನಿಜ. ಆದರೆ ಗೌಡಪಾದಕಾರಿಕೆಗಳನ್ನು ಕುರಿತ ತಮ್ಮ ಭಾಷ್ಯದಲ್ಲಿ, ಬುದ್ಧ ಹೇಳಿದ್ದು ತಮ್ಮ ಅದ್ವೈತ ಸಿದ್ಧಾಂತಕ್ಕೆ ಸ್ವಲ್ಪ ಹತ್ತಿರವೂ ಇದೆ – *ಅದ್ವಯ ವಸ್ತು ಸಾಮೀಪ್ಯಮುಕ್ತಂ* – ಎಂದಿದ್ದಾರೆ. ನಿರ್ವಿಶೇಷಾದ್ವೈತ ಮತ್ತು ಬುದ್ಧ ದರ್ಶನ ಹತ್ತಿರವಿರುವುದು ನಿಜ.

ಉಪನಿಷತ್ತು ಬುದ್ಧಪೂರ್ವ. ಹಾಗೆಯೇ ಬುದ್ಧೋತ್ತರ. ವೈದಿಕ ವಾಙ್ಮಯದಲ್ಲಿ ಬೌದ್ಧ ಪ್ರಭಾವ ಕಾಣಿಸಿಕೊಳ್ಳುವುದು ಕೂಡ ಸಹಜವಾಗಿದೆ.


ಒಂದು ಉದಾಹರಣೆ ತೋರಿಸುವುದಾದರೆ, ಬುದ್ಧನು ಸಂಬೋಧಿಯನ್ನು ಪಡೆದು ಆರು ವರ್ಷಗಳಾದ ಮೇಲೆ, ಮರಳಿ ತನ್ನೂರಿಗೆ ಬಂದು, ಅರಮನೆಗೆ ಬಂದು, ಯಶೋಧರೆಯನ್ನು ಕಂಡ ಸಂದರ್ಭದಲ್ಲಿ ಸಹಜವಾಗಿ ತನ್ನ ಆಂತರಿಕ ಸ್ಥಿತಿಯನ್ನು ಕುರಿತು ಹೇಳುತ್ತಾನೆ. ಹಾಗೆ ಹೇಳುವ ಮುನ್ನ ಯಶೋಧರೆಯನ್ನು ಕುರಿತು ತನ್ನಲ್ಲಿರುವ ಗೌರವ ಬುದ್ಧಿಯನ್ನೂ ಹೇಳುತ್ತಾನೆ. "ಒಂದು ದೃಷ್ಟಿಯಿಂದ ನೀನೇ ನನ್ನ ಗುರು" ಎನ್ನುತ್ತಾನೆ. ಆದರೆ ನಿನ್ನಿಂದ ಕಂಡ ದಾರಿ ತುಳಿದು ನಾನು ನೀನು ಕಾಣದುದನ್ನು ಕಂಡಿದ್ದೇನೆ" ಎನ್ನುತ್ತಾನೆ. ರಾಗ – ಮೋಹ – ದ್ವೇಷಗಳು ನನ್ನಲ್ಲಿ ನಿರ್ಮೂಲವಾಗಿವೆ. ನನಗೆ ಪುನರುತ್ಪತ್ತಿ ಇಲ್ಲ. ಸಂಸಾರದ ಕತ್ತಲೆ ದಾಟಿ ನಿರ್ವಾಣದ ದೀಪ ನನ್ನಲ್ಲಿ ಬೆಳಗುತ್ತಿದೆ. ನಿನ್ನ ಭುಜಗಳಿಂದ ಬದ್ಧನಾಗಿದ್ದ ನಾನು ಈಗ ಪ್ರಪಂಚದ ಎಲ್ಲ ಬಂಧನಗಳಿಂದ ಮುಕ್ತನಾಗಿರುವುದು ನಿನಗೆ ಸಮಾಧಾನವಲ್ಲವೆ? ಎನ್ನುತ್ತಾನೆ.

ಭಾಗವತ ಪುರಾಣದಲ್ಲಿ ಕೃಷ್ಣ ತನ್ನನ್ನು ಪ್ರೇಮಿಸಿ, ಮದುವೆಯಾದ, ಮಡದಿ ರುಕ್ಮಿಣಿಯೊಡನೆ ಇದೇ ರೀತಿಯ ಸಂವಾದದಲ್ಲಿ ತೊಡಗಿರುವುದನ್ನು ನೋಡುತ್ತೇವೆ. ತನಗೆ ಆತ್ಮಜ್ಞಾನವಾಗಿರುವುದರಿಂದ ತಾನು ಕೃತಕೃತ್ಯನಾಗಿರುವುದರಿಂದ, ನಿಜದಲ್ಲಿ ತಾನು ಸಂಸಾರಿಯಲ್ಲ ಎನ್ನುವ ಮಾತು ಕೃಷ್ಣ ಆಡುತ್ತಾನೆ! ಭಾಗವತ; ಬುದ್ಧೋತ್ತರ ಎನ್ನುವುದು ನಿರ್ವಿವಾದ.

ಕೃಷ್ಣನ ಮುಖದಿಂದ ಬುದ್ಧನ ಮಾತು!
ವೈದಿಕರು ಬೌದ್ಧರನ್ನು ಓಡಿಸುವುದೆಲ್ಲಿ ಬಂತು?

ಬುದ್ಧ ತನ್ನನ್ನು 'ತಥಾಗತ'ನೆಂದು ಕರೆದುಕೊಂಡಿದ್ದ. 'ತಥಾಗತ'ನೆಂದರೆ ಸಹಜವಾಗಿ ಬಂದವನು; ಸಹಜವಾಗಿ ಹೋಗುವವನು; ಸಹಜವಾಗಿ ಅರಳಿದವನು, ಸಹಜವಾಗಿ ಬಂದವನು – ಹೋಗುವವನು ಎಂದರೆ ಸಹಜವಾದ ದಾರಿಯನ್ನು ತೋರಿಸುವವನು ಎಂದು. ಇದಕ್ಕನುಗುಣವಾಗಿ, ತಥಾಗತನು ಕೇವಲ ಮಾರ್ಗದರ್ಶಿ ಎನ್ನುವ ಮಾತನ್ನು ಬುದ್ಧ ಆಡಿದ್ದಾನೆ. ನಮಗೆ ಬೇಕಿರುವುದು ದೇವರಲ್ಲ; ಮಾರ್ಗದರ್ಶಿಗಳು ಎನ್ನುವ ಅರ್ಥದಲ್ಲಿ.

ಆಲ್ಬರ್ಟ್ ಕಾಮು ತನ್ನ ಕಾದಂಬರಿಯಲ್ಲಿ ಹೀಗೆ ಹೇಳಿದ್ದ: "Ah; for any one who is alone, without God and a master, the burden of days is dreadful. Hence one needs a master, God being out of style" ಈ ಮಾತು ಬುದ್ಧನನ್ನು ಕುರಿತೇ ಹೇಳಿದಂತಿದೆ.



**(ಲೇಖಕ ಲಕ್ಷ್ಮೀಶ ತೋಳ್ಪಾಡಿ ನಮ್ಮ ನಡುವಿನ ಬಹುಶ್ರುತ ವಿದ್ವಾಂಸರೂ, ಚಿಂತಕರೂ ಆಗಿದ್ದು ಪುತ್ತೂರಿನಲ್ಲಿ ನೆಲೆಸಿದ್ದಾರೆ)**

# ನಾನು ಕಂಡುಕೊಂಡ ನನ್ನ ಬುದ್ಧ....

**ಬುದ್ಧನ ಬಗ್ಗೆ ಮತ್ತು ಬೌದ್ಧ ಧರ್ಮದ ಬಗ್ಗೆ ಇರುವ ಬಗೆ ಬಗೆಯ ಸಾಹಿತ್ಯ, ದಂತ ಕಥೆಗಳು ಮತ್ತು ನಂಬಿಕೆಗಳ ನಡುವೆ ನಮಗೆ ಬೇಕಾದ ಬುದ್ಧನನ್ನು ನಾವೇ ಆರಿಸಿಕೊಳ್ಳಬೇಕಿದೆ ಅಥವಾ ರೂಪಿಸಿಕೊಳ್ಳಬೇಕಿದೆ, ವಿವಿಧ ಸಾಮಾಜಿಕ ಮತ್ತು ವೃತ್ತಿ ಹಿನ್ನೆಲೆಗಳಿಂದ ಬಂದ ಹಲವರು ತಾವು ತಮ್ಮ ಅಗತ್ಯಗಳಿಗೆ ಕಂಡುಕೊಂಡ ಬುದ್ಧನನ್ನು ಇಲ್ಲಿ ಕಂಡಿರಿಸಿದ್ದಾರೆ–ಸಂ**

## ಬುದ್ಧ ಬೇರೆಯಲ್ಲ, ಧ್ಯಾನ ಬೇರೆಯಲ್ಲ



**ಬು**ದ್ಧ ನನ್ನ ಪಾಲಿಗೆ ಕೇವಲ ಒಬ್ಬ ಚಾರಿತ್ರಿಕ ವ್ಯಕ್ತಿಯಲ್ಲ. ನನ್ನ ಬಾಳಿಗೆ ಬೆಳಕಾದವರಲ್ಲಿ ನಿಶ್ಚಿತವಾಗಿಯೂ ಸಿದ್ಧಾರ್ಥ ಗೌತಮನಿಗೆ ದೊಡ್ಡ ಸ್ಥಾನವಿದೆ. ಆದರೆ ಅವನಿಗಿಂತ ಮೊದಲು ಮತ್ತು ಅವನ ನಂತರವೂ ಅನೇಕ ಬುದ್ಧರು ಆಗಿ ಹೋಗಿದ್ದಾರೆ. ಹಾಗಾಗಿ ಬುದ್ಧ ನನಗೆ ಎಷ್ಟು ಅವನು ಹೌದೋ ಅಷ್ಟೇ ಅವಳೂ ಹೌದು. ಬುದ್ಧ ಅಂದರೆ ನನಗೆ ಒಂದು ಶಕ್ತಿ, ಒಂದು ಆಲೋಚನಾ ಕ್ರಮ, ಒಂದು ಮೌಲ್ಯ ಪ್ರಣಾಳಿಕೆ, ಒಂದು ದರ್ಶನ, ಎದೆಯಾಳದೊಳಗೆ ಸದಾ ಜುಳುಜುಳು ಹರಿಯುವ ತಿಳಿವಿನ ಹೊಳೆ.


ಪ್ರಜ್ಞೆ ಮತ್ತು ಕರುಣೆ ಇವೆರಡೂ ಬೌದ್ಧ ದರ್ಶನದ ಎರಡು ಕಣ್ಣುಗಳು. ಇದರ ಸಹಜ ತಾರ್ಕಿಕ ಮುಂದುವರಿಕೆಯಾಗಿಯೇ ಸಮಾನತೆ, ಸರಳತೆ, ಶ್ರಮ ಗೌರವ, ಜಾತಿ ವಿನಾಶ ಇತ್ಯಾದಿಯೆಲ್ಲ ಬರುತ್ತವೆ. ಈ ಮೌಲ್ಯಗಳ ಪ್ರೇರಣೆಯಿಂದಾಗಿಯೇ ನನಗೆ ಜಾತಿ ಮತಗಳ ಚೌಕಟ್ಟಿನಾಚೆ ಸಂಪೂರ್ಣವಾಗಿ ಹೋಗಿಯೂ ಪ್ರೀತಿ, ಘನತೆ, ಮತ್ತು ಗೌರವಗಳೊಂದಿಗೆ ಬಾಳುವದು, ಮೂವತ್ತೈದು ವರ್ಷಗಳಿಂದ ನನ್ನ ಕ್ಷೌರವನ್ನು ನಾನೇ ಮಾಡಿಕೊಳ್ಳುವದು, ಈ ವರೆಗೆ ನೂರು ಸಲ ರಕ್ತದಾನ ಮಾಡಿರುವದು, ಮರಣಾನಂತರ ನಾನು ವೈದ್ಯಕೀಯ ಕಲಿತ ಹುಬ್ಬಳ್ಳಿಯ ಕಿಮ್ಸ್ ಸಂಸ್ಥೆಗೆ ದೇಹದಾನದ ವ್ಯವಸ್ಥೆ, ಸದಾ ಖಾದಿ ಧರಿಸುವದು, ಯಾವದೇ ದೇವರ ಫೋಟೋ ಅಥವಾ ವಿಗ್ರಹವನ್ನು ಇಡದೆಯೂ ಕಳೆದ ಇಪ್ಪತ್ತು ವರ್ಷಗಳಿಂದ ಬಾಲ ಬಳಗ ಶಾಲೆಯನ್ನು ನಡೆಸಿಕೊಂಡು ಬಂದಿರುವದು, ಸುಮನ ಸಂಗಮ ಕಾಡುತೋಟದಲ್ಲಿ ಸಾವಯವ ಸಹಜ ಕೃಷಿಯ ಪಯತ್ನ ಮಾಡುವದು – ಇದೆಲ್ಲ ಸಾಧ್ಯವಾಗಿದೆ.

ಜಾತಿ ಮತ ಹೋಗಲಿ ನಿನಗೆ ದೇವರಲ್ಲಿಯೂ ನಂಬಿಕೆಯಿಲ್ಲವೇ ಎಂದು ನನಗೆ ಅನೇಕರು ಕೇಳುತ್ತಾರೆ. ನನಗೆ ಈ ವರೆಗೆ ಮನುಷ್ಯ ರೂಪದ ಸರ್ವಶಕ್ತ ಸರ್ವ ನಿಯಾಮಕ ದೇವರ ಅಸ್ತಿತ್ವದ ಅನುಭವವಾಗಿಲ್ಲ. ನನಗೆ ಅದರ ಅವಶ್ಯಕತೆಯೂ ಕಾಣುವದಿಲ್ಲ. ಆದುದರಿಂದ ನಾನು ದೇವರು, ಪೂಜೆ, ಪುರೋಹಿತರು, ಪ್ರವಚನ, ಮತಮಾನ್ಯಗಳು, ಪವಿತ್ರ ಕ್ಷೇತ್ರ ದರ್ಶನ ಮುಂತಾದ ಎಲ್ಲದರಿಂದ ಬಹಳ ದೂರ ಬಂದು ಬಿಟ್ಟಿದ್ದೇನೆ. ಇದು ನನ್ನ ಬದುಕಿಗೆ ಒಂದು ವಿಶಿಷ್ಟ ತರದ ಹಗುರತೆಯನ್ನು ನಿರಾಳತೆಯನ್ನು ತಂದಿದೆ.

ಹೀಗೆ ಹೇಳಿರುವದರಲ್ಲಿ ಒಂದಿಷ್ಟು ಆತ್ಮ ಶ್ಲಾಘನೆಯಿಲ್ಲವೇ ಎಂದು ನನ್ನ ಒಳಮನಸ್ಸೇ ನನ್ನನ್ನು ಕೇಳುತ್ತಿದೆ. 'ನನಗೆ ಸಿಕ್ಕಿರುವ ಬುದ್ಧ' ಎಂಬುದರ ಬಗ್ಗೆ ಬರೆಯುವಾಗ ನನಗೆ ಬೌದ್ಧ ದರ್ಶನ ಕಾಣಿಸುವದು ಎರಡು ನೆಲೆಗಳಲ್ಲಿ. ಮೊದಲನೆಯದು ನಾನು ಓದಿ ಕೇಳಿ ತಾತ್ವಿಕವಾಗಿ ಅರ್ಥೈಸಿಕೊಂಡಿರುವದು ಮತ್ತು ಎರಡನೆಯದು ಅದನ್ನು ಹೇಗೆ ಆಚರಣೆಯಲ್ಲಿ ತರಲು ಪ್ರಯತ್ನಿಸಿದ್ದೇನೆ ಎಂಬುದು. ಮೊದಲನೆಯದರ ಬಗ್ಗೆ ಪುಟಗಟ್ಟಲೆ ಬರೆಯಬಹುದು. ಆದರೆ ಹೆಚ್ಚು ಮುಖ್ಯವಾಗಿರುವದು ಎರಡನೆಯದು. ಹಾಗಾಗಿ ಒಂದಿಷ್ಟು ಸ್ವಂತದ ವಿಷಯಗಳ ಬಗ್ಗೆ ಹೇಳಿದ್ದೇನೆ ಅಷ್ಟೇ.

ನಿಯಮಿತ ಧ್ಯಾನ ಎಂದೆನಲ್ಲವೇ? ನನ್ನ ದೃಷ್ಟಿಯಲ್ಲಿ ಬೌದ್ಧ ದರ್ಶನದ ಅತ್ಯಂತ ಮಹತ್ವದ ಭಾಗ, ಅದರ ಆಧಾರ ಶಿಲೆಯೆಂದರೆ ಧ್ಯಾನ. ಬುದ್ಧ ಬೇರೆಯಲ್ಲ ಧ್ಯಾನ ಬೇರೆಯಲ್ಲ. ಹಾಗಾಗಿಯೇ ನಮಗೆ ಬುದ್ಧ ಚರಿತ್ರೆಯುದ್ದಕ್ಕೂ ಚಿತ್ರಗಳಲ್ಲಿ ಮತ್ತು ವಿಗ್ರಹಗಳಲ್ಲಿ ನೋಡಲು ಸಿಗುವದು ಧ್ಯಾನ ಮುದ್ರೆಯಲ್ಲಿಯೇ. ಧ್ಯಾನ ನಮ್ಮ ಒಳಗನ್ನು ಸದಾಕಾಲ ನೋಡಿಕೊಳ್ಳಲು ಸರಿಪಡಿಸಿಕೊಳ್ಳಲು ಹಾಗೆಯೇ ಹೊರಗನ್ನು ವಸ್ತುನಿಷ್ಠವಾಗಿ ನೋಡಿ ಅರ್ಥೈಸಿಕೊಳ್ಳಲು ಸಹಾಯ ಮಾಡುತ್ತದೆ. ಬುದ್ಧನ ಆ ಕೊನೆಯ ಮಾತು ಇದೆಯಲ್ಲ 'ನಿನಗೆ ನೀನೇ ದೀಪವಾಗು' ಎಂಬುದು, ಅದನ್ನು ಸಾಕಾರಗೊಳಿಸಿಕೊಳ್ಳಲು ಇರುವ ಒಂದು ಸರಳ ಸಾಧನವೆಂದರೆ ಧ್ಯಾನ. ಆದುದರಿಂದಲೇ ಧ್ಯಾನವೆಂದರೆ ನನಗೆ ಜೀವಜೀವಾಳ.

**–ಡಾ. ಸಂಜೀವ ಕುಲಕರ್ಣಿ**



**(ಧಾರವಾಡದಲ್ಲಿ ನೆಲೆಸಿರುವ ಲೇಖಕರು ಪರಿಣತಿಯಿಂದ ವೈದ್ಯರಾದರೂ, ಈಗ ಸಾವಯವ ಕೃಷಿ, ಕನ್ನಡ ಶಾಲಾಶಿಕ್ಷಣ ಇತ್ಯಾದಿ ಸಾರ್ವಜನಿಕ ವಿಧಾಯಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವವರು)**

## ಕ್ಷೀಣಿಸುತ್ತಿರುವ ಬೌದ್ಧ ಧರ್ಮ



ಬುದ್ಧ ಅನಾತ್ಮವಾದಿಯಾಗಿದ್ದುದರಿಂದ ಸಹಜವಾಗಿ ಅವನು ಪುನರ್ಜನ್ಮವನ್ನೂ ನಂಬಲಿಲ್ಲ, ದೇವರ ಬಗ್ಗೆ ಅವನೆಂದೂ ಸುಳ್ಳು ಹೇಳಲಿಲ್ಲ. ದೇವರ ಅಸ್ತಿತ್ವದ ಬಗ್ಗೆ ತನಗೇನೂ ಗೊತ್ತಿಲ್ಲವೆಂದ. ತನ್ನ ಅನುಭವಕ್ಕೆ ಬಾರದುದನ್ನು, ಗ್ರಹಿಕೆಗೆ ಗೋಚರವಾಗದುದನ್ನು ತನ್ನ ಉಪದೇಶಗಳಿಂದ ದೂರವಿಟ್ಟ. ಈ ಜೀವನದ ಸಕಲ ಸಮಸ್ಯೆಗಳಿಗೆ ಈ ಜೀವಾವಧಿಯ ಕಾಲದಲ್ಲೇ, ಇಲ್ಲೇ ಪರಿಹಾರ ಹುಡುಕಬೇಕೆಂದು ತಿಳಿಸಿದ. ಬುದ್ಧನ ಈ ತತ್ವ ನನ್ನ ಮೇಲೆ ಆಳವಾದ ಪ್ರಭಾವವನ್ನು ಬೀರಿತು.

ಆಧುನಿಕ ವೈಚಾರಿಕ ಮನಸ್ಸಿಗೆ ಬುದ್ಧ ವಿಮರ್ಶಾತೀತನಲ್ಲ. ಸ್ತ್ರೀಯರ ಬಗ್ಗೆ ಅವನ ನಿಲವು ಕೊನೆಯವರೆಗೂ ಸ್ಪಷ್ಟವಾಗುವುದಿಲ್ಲ. ಇಂದಿಗೂ ಜಗತ್ತಿನ ಬೌದ್ಧ ಧಾರ್ಮಿಕ ಸಂಸ್ಥೆಗಳಲ್ಲಿ ಸ್ತ್ರೀಯರ ಪಾತ್ರ ಸೀಮಿತವಾದುದು. ಅಲ್ಲದೆ, ಬೌದ್ಧ ಧರ್ಮ ವಿಕಾಸಗೊಂಡ ಹಂತದಲ್ಲಿ ಬೋಧಿಸತ್ವನ ಕಥಾನಕಗಳ ಮೂಲಕ ಜನ್ಮಾಂತರ ಕಲ್ಪನೆಯನ್ನು ಒಪ್ಪಿ ಪ್ರಚಾರಮಾಡಿರುವುದು ಬುದ್ಧತತ್ವದ ಅವರೋಹಣವನ್ನು ಸೂಚಿಸುತ್ತದೆ. ಬುದ್ಧತತ್ವದ ಮೂಲ ಆಶಯಕ್ಕೆ ಹೊರತಾದ ಜೀವನ ಕ್ರಮವನ್ನು ಅಳವಡಿಸಿಕೊಂಡು ಮೌಢ್ಯಗಳಿಗೆ ಆತುಕೊಂಡಿರುವುದನ್ನು ಇಂದು ಕಾಣಬಹುದು. ಬುದ್ಧ ಧರ್ಮ ಇಂದು ಕ್ಷೀಣವಾಗುತ್ತಿರುವುದಕ್ಕೆ ಒಂದು ಕಾರಣವಾಗಿದೆ. ಆಕ್ರಮಣಶೀಲತೆಯನ್ನು ತನ್ನ ಗುಣವಾಗಿಸಿಕೊಂಡಿಲ್ಲದ, ಕಾಲಾಂತರದಲ್ಲಿ ಧಾರ್ಮಿಕ ಸಾಂಸ್ಥಿಕರೂಪ ಪಡೆದು ಸಂಪ್ರದಾಯಗಳಲ್ಲಿ ನರಳಿ ಹೊರಳುತ್ತಿರುವ ಎಲ್ಲ ಧರ್ಮಗಳ ಸ್ಥಿತಿಯೂ ಹೀಗೆಯೇ ಇದೆ.

ಇಂಥ ಸ್ಥಿತಿಯಲ್ಲಿ ನಮ್ಮಲ್ಲಿ ವಿಚಾರವಂತ ದಲಿತರಲ್ಲನೇಕರು ಅಂಬೇಡ್ಕರ್‌ರನ್ನನುಸರಿಸಿ ಬೌದ್ಧಧರ್ಮವನ್ನು ಸ್ವೀಕರಿಸಿದ್ದರೂ ಅವರಲ್ಲಿ ಬಹುತೇಕರು 'ಮಾರಮ್ಮ-ಕಾಳಮ್ಮ'ರನ್ನೇ ಆರಾಧಿಸುತ್ತಿದ್ದಾರೆ. ಈ ಬಗೆಯ ಮತಾಂತರದಿಂದ ಬೌದ್ಧಧರ್ಮವನ್ನು ಪುನರ್‌ಸ್ಥಾಪಿಸ ಹೊರಟಿರುವುದು ವಿಪರ್ಯಾಸ.

ಯಾವುದೇ ಧರ್ಮದ ತಾತ್ವಿಕ ವಿಚಾರಧಾರೆಯನ್ನು ಆಚಾರವನ್ನಾಗಿ ಬದುಕಿಗೆ ಅಳವಡಿಸಿಕೊಳ್ಳಲಾರದೆ, ತತ್ವವೇ ಬೇರೆ ಬದುಕಿನ ನಡೆಯೇ ಬೇರೆ ಆದಾಗ ಅದು ಜಡವಾಗುತ್ತದೆ. ತಾತ್ವಿಕತೆಯಲ್ಲಿ ಎಲ್ಲವೂ ಇದೆಯೆಂದು ವರ್ತಮಾನದಲ್ಲಿ ನಿಂತು ಬಡಬಡಿಸುವುದು ಮೂಲಭೂತವಾದವಾಗುತ್ತದೆ. ಹಾಗೇ ಈಗ ಕೆಲವರು ಪ್ರತಿಪಾದಿಸುತ್ತಿರುವ ಬೌದ್ಧವೆಂದು ಹೇಳಲಾಗುವ ಕಾವ್ಯಮೀಮಾಂಸೆಯೂ ಅತಿಯಾದದ್ದಾಗಿದೆ.



**–ಪ್ರೊ. ಶಿವರಾಮು ಕಾಡನಕುಪ್ಪೆ**

**(ಮೈಸೂರಿನಲ್ಲಿರುವ ಲೇಖಕರು ವಿಶ್ರಾಂತ ಕನ್ನಡ ಪ್ರಾಧ್ಯಾಪಕರು ಮತ್ತು ನಮ್ಮ ಹಿರಿಯ ಸಂಸ್ಕೃತಿ ಚಿಂತಕರಲ್ಲೊಬ್ಬರಾಗಿದ್ದಾರೆ.)**

## ಬುದ್ಧ ದೇವರಲ್ಲ, ಮನುಷ್ಯ



ಎಂಬತ್ತರ ದಶಕದಲ್ಲಿ ದಲಿತ ಚಳವಳಿಯ ಗೆಳೆಯರ ನಡುವೆ ದೇವರು ಧರ್ಮದ ವಿಷಯಗಳು ಆಗಾಗ ಚರ್ಚೆಗೆ ಬರುತ್ತಿದ್ದವು. ಚಳವಳಿಯಲ್ಲಿ ಕಮ್ಯುನಿಸ್ಟರಿದ್ದರು, ಸಮಾಜವಾದಿಗಳಿದ್ದರು. ಎಲ್ಲ ವಿಷಯಗಳ ಬಗ್ಗೆ ಸಮಾನವಾಗಿ ಗೊಂದಲಗೊಂಡವರೂ ಇದ್ದರು! ಇವರೆಲ್ಲರ ನಡುವೆಯೂ ಮತ್ತೆ ಮತ್ತೆ ಚರ್ಚೆಗೆ ಬರುತ್ತಿದ್ದವನು ಬುದ್ಧ. ಆ ಸಮಯದಲ್ಲಿ ನಾನು ಉಗ್ರ ನಾಸ್ತಿಕನಾಗಿದ್ದೆ. ಮನುಷ್ಯನಿಗೆ ದೇವರು, ಧರ್ಮಗಳ ಅವಶ್ಯಕತೆ ಇಲ್ಲವೆಂದೂ ನಂಬಿಕೊಂಡಿದ್ದೆ. ಧರ್ಮವೆಂಬುದು ಅಫೀಮು ಎಂಬ ಮಾರ್ಕ್ಸ್‌ನ ಉವಾಚ ನಮಗೆ ಆಪ್ಯಾಯಮಾನವಾಗಿತ್ತು.

ಮತ್ತು ತುಸು ದಿನಗಳಲ್ಲೇ ನಮ್ಮ ದೃಷ್ಟಿಕೋನದಲ್ಲಿ ತುಸುವೇ ಮಾರ್ಪಾಡಾಯಿತು. ಅಂದರೆ ನಾನು ದೇವರ ಪರ ವಾಲಿದೆ ಎಂದಲ್ಲ, ಆದರೆ ಜನಸಮುದಾಯ ಒಂದಿಲ್ಲೊಂದು ಧರ್ಮದ ಆಸರೆಯಿಲ್ಲದೆ ಕಂಗಾಲಾಗುತ್ತದೆ ಎಂಬ ಸತ್ಯ ಅಸ್ಪಷ್ಟವಾಗಿಯಾದರೂ ನಮ್ಮ ತಲೆಯೊಳಗಿಳಿದಿತ್ತು. ಆಗೊಮ್ಮೆ ಗೆಳೆಯ ಕೆ.ಬಿ. ಸಿದ್ದಯ್ಯ 'ಮನುಷ್ಯನಿಗೆ ಧರ್ಮ ಬೇಕೋ ಬೇಡವೋ?' ಎಂದು ನನ್ನನ್ನು ಪರೀಕ್ಷಿಸುವಂತೆ ಕೇಳಿದರು. ನಾನು 'ಖಂಡಿತ ಬೇಕು' ಎಂದೆ. ಇಬ್ಬರೂ ಆ ಕ್ಷಣದಲ್ಲಿ ಅಂದುಕೊಂಡಿದ್ದು 'ಹೌದು ಎಲ್ಲರಿಗೂ, ಅದರಲ್ಲೂ ದಲಿತರಿಗೆ ಬೇಕಾದದ್ದು ಬೌದ್ಧ ಧರ್ಮ'. ಬೌದ್ಧ ಧರ್ಮವೇ ಯಾಕೆ? ಅದನ್ನು ಅಂಬೇಡ್ಕರ್ ಅತ್ಯಂತ ಸ್ಪಷ್ಟವಾಗಿ ವಿವರಿಸಿದ್ದಾರೆ.

ಮೊದಲನೆಯದಾಗಿ– ಬುದ್ಧ ದೇವರಲ್ಲ! ಮನುಷ್ಯ. ನಮ್ಮೆಲ್ಲರ ಬುದ್ಧಿ ಹೃದಯಗಳನ್ನು ಒಟ್ಟಿಗೇ ತೋಯಿಸಬಲ್ಲ ವೈಜ್ಞಾನಿಕ ಮಾನವತಾವಾದಿ. ಹಾಗಾಗಿಯೇ ದೇವರು ಅಂದಾಗ ಹುಟ್ಟುವ "ನಿರಾಕಾರ ನಿರ್ಗುಣ" ಗೊಂದಲಕ್ಕೆ ಬುದ್ಧನ ವಿಷಯದಲ್ಲಿ ಎಂದೂ ಆಸ್ಪದವಿಲ್ಲ. ಯಾಕೆಂದರೆ ಬುದ್ಧ ಆತ್ಮ, ಪರಮಾತ್ಮನ ಪ್ರಸ್ತಾಪವನ್ನೇ ಮಾಡುವುದಿಲ್ಲ. ಮನುಷ್ಯನಿಗೆ ದುಃಖವಿದೆ, ಆ ದುಃಖವನ್ನು ನಿವಾರಿಸಿಕೊಳ್ಳುವ ಸಾಧ್ಯತೆಯೂ ಮನುಷ್ಯನ ಕೈಯಲ್ಲೇ ಇದೆ ಅನ್ನುತ್ತಾನೆ.

ಆದರೆ ಇಲ್ಲಿ ಅರ್ಥವಾಗದ ಸಂಗತಿಯೆಂದರೆ, ಅಂದು ಲಕ್ಷಾಂತರ ಮಂದಿ ಅಂಬೇಡ್ಕರರೊಂದಿಗೇ ಬೌದ್ಧ ದೀಕ್ಷೆ ಪಡೆದದ್ದು ನಿಜವಾದರೂ, ಅಂದಿಗೂ ಇಂದಿಗೂ ಹಿಂದೂ ಪರಿಧಿಯಲ್ಲಿ ಉಳಿದವರ ಸಂಖ್ಯೆಯೇ ಬಹುಪಾಲು ಹೆಚ್ಚಲ್ಲವೇ? ಅಂದರೆ ಶೋಷಣೆಯೋ, ಅವಮಾನವೋ ಮತ್ತೊಂದೋ, ಅಂತೂ ಶತಮಾನಗಳಿಂದ ತಮ್ಮ ಪೂರ್ವಿಕರು ಪಾಲಿಸಿಕೊಂಡು ಬಂದ ಸಂಪ್ರದಾಯವೇ ಯಾಕೆ ದೊಡ್ಡ ಆಸರೆಯಾಗಿ ಕಾಣುತ್ತದೆ? ಒಂದು ಕಾಲದಲ್ಲಿ ಬೌದ್ಧ ಪಂಥವೂ ಭಾರತದ ಪ್ರಧಾನ ಧರ್ಮವಾಗಿತ್ತು. ಅಂದರೆ ಅದು ಜನಮನ್ನಣೆ ಪಡೆಯಲು ಸಾಧ್ಯವಿಲ್ಲದ ಪಂಥವೂ ಅಲ್ಲ. ಅಷ್ಟಾಗಿಯೂ ಯಾಕೆ ಈ ಹಿಂಜರಿಕೆ?

ನಾನು ಈಗೇನೂ ನಾಸ್ತಿಕನಲ್ಲ. ಮತ್ತು ಬೌದ್ಧಿಕವಾಗಿ ಬುದ್ಧ ನನಗೂ ಸಮ್ಮತನೇ. ಅಷ್ಟಾದರೂ ಕೆಲವೇ ವರ್ಷಗಳ ಮುಂಚೆ ದಲಿತ ಚಳವಳಿಕಾರರ ಒಂದು ಗುಂಪು 'ಬುದ್ಧನೆಡೆಗೆ ಮರಳಿ ಮನೆಗೆ' ಎಂದು ಘೋಷಿಸಿ ದೊಡ್ಡ ಸಮಾರಂಭ ಮಾಡಿ ಬೌದ್ಧ ಧರ್ಮ ಅಪ್ಪಿಕೊಂಡಾಗ ನನ್ನಂಥ ಕೆಲವರಿಗೆ ಅದು 'ಹೊಟ್ಟೆ ತುಂಬಿದ ದಲಿತ ಅಧಿಕಾರಿಗಳ ಶೋಕಿ'ಯಾಗಿ ಕಂಡಿತೇ ಹೊರತು ಅದು ಯಾವ ರೋಮಾಂಚನವನ್ನೂ ಹುಟ್ಟಿಸಲಿಲ್ಲ...


ಇಂದು ಬುದ್ಧ ನನಗೆ ದಕ್ಕಿದ್ದೆಷ್ಟು ಎಂದು ನಾನು ಯೋಚಿಸುವಾಗ ಇಂಥ ಗೊಂದಲಗಳು ಮುಂದೆ ಬರುತ್ತಿವೆಯೇ ಹೊರತು ಆಧ್ಯಾತ್ಮಿಕ ಪ್ರಶ್ನೆಗಳಲ್ಲ! ಏನು ಮಾಡಲಿ?!



**–ಎನ್.ಎಸ್.ಶಂಕರ್**

**(ಬೆಂಗಳೂರಿನಲ್ಲಿ ನೆಲೆಸಿರುವ ಶಂಕರ್, ನಮ್ಮ ಹಿರಿಯ ಪತ್ರಕರ್ತ, ಲೇಖಕ ಹಾಗೂ ಚಲಚಿತ್ರಜ್ಞರೂ ಹೌದು)**

## ಎಲೆಯ ಮೇಲಿರುವ ತೆಳ್ಳಗಿನ ಗೆರೆಯಾಗಿ...



ಬುದ್ಧನ ಕುರಿತು ಬರೆಯುವುದು ತುಂಬಾ ಕಷ್ಟದ ವಿಷಯ. ಈ ನೆಲ, ಆಕಾಶ, ಬೆಳದಿಂಗಳು ಎಲ್ಲಾ ನೆನಪಾಗುತ್ತದೆ. ಬೆಳದಿಂಗಳನ್ನು ಹಿಡಿದಿಡಲು ಸಾಧ್ಯವೇ? ನನಗೆ ತಕ್ಷಣಕ್ಕೆ ಲಂಕೇಶ್ ಮೇಷ್ಟ್ರು ಬರೆದ 'ಮೋಕ್ಷವನ್ನು ಹುಡುಕುತ್ತಾ ಪ್ರೀತಿಯ ಬಂಧನದಲ್ಲಿ' ಬರವಣಿಗೆ ನೆನಪಾಗುತ್ತೆ. ಬುದ್ಧನ ಬಗ್ಗೆ ತಿಳಿಯುವುದು ಎಂದರೆ, ಹರಿಯುವ ನೀರಿನಂತೆ ಚಲಿಸುತ್ತಲೇ ಇರಬೇಕು, ಇದೊಂದು ಅಗಾಧ ಅರಿವಿನ ಸಂಕೇತ, ಬರೆಯುವುದಕ್ಕಿಂತ ಮಾತನಾಡುವುದಕ್ಕಿಂತ, ಮುಗುಳ್ನಗೆಯ ಮಂದಸ್ಮಿತವನ್ನು ನೋಡುತ್ತಾ ತಣ್ಣಗೆ ಅನುಭವಿಸಬಹುದು. ಆದರೂ ನನ್ನಂತ ಸಾಮಾನ್ಯರಲ್ಲಿ ಸಾಮಾನ್ಯನಾದ ನಾನು ಅವರ ಬಗೆಗಿನ ಒಂದು ಘಟನೆಯನ್ನು ಆಗಾಗ ನೆನಪಿಸಿಕೊಳ್ಳುತ್ತಿರುತ್ತೇನೆ.

ಒಮ್ಮೆ ಬುದ್ಧ ಗುರುಗಳು ಊರಿಂದ ಊರಿಗೆ ಪ್ರಯಾಣ ಬೆಳೆಸುತ್ತಿರುವಾಗ ಒಂದು ನಿರ್ದಿಷ್ಟ ಗ್ರಾಮದಲ್ಲಿ ಅವರ ಪ್ರವಚನ ಕಾರ್ಯಕ್ರಮವಿರುತ್ತದೆ. ಬುದ್ಧ ಗುರುಗಳು ಆ ಊರಿನ ಕಟ್ಟೆಯ ಹತ್ತಿರ ಬಂದು ಕುಳಿತುಕೊಂಡು ಸಭೆಯನ್ನು

ಗಮನಿಸುತ್ತಾರೆ, ಸ್ವಲ್ಪ ಜನ ಕಟ್ಟೆಯ ಹತ್ತಿರವೇ ಕುಳಿತಿದ್ದರೆ, ಇನ್ನೂ ಕೆಲವರು ಬುದ್ಧಗುರುಗಳು ಕುಳಿತ ಜಾಗದಿಂದ ದೂರ ಕುಳಿತುಕೊಂಡಿರುತ್ತಾರೆ. ಇದನ್ನು ಗಮನಿಸಿದ ಬುದ್ಧ ಗುರುಗಳು ಎಷ್ಟು ಜೋರಾಗಿ ಮಾತನಾಡಿದರೂ ನಿಮಗೆ ಕೇಳಿಸುವುದಿಲ್ಲ ಇಲ್ಲೇ ಹತ್ತಿರ ಬನ್ನಿ, ಇಲ್ಲೇ ಸ್ಥಳವಿದೆ ಎಂದು ಹೇಳುತ್ತಾರೆ. ಆದರೆ ಇದನ್ನು ಕೇಳಿಸಿಯೂ ಕೇಳಿಸಿಕೊಳ್ಳದಂತೆ ಸಭೆ ಕುಳಿತಿರುತ್ತದೆ. ಇದರ ಸೂಕ್ಷ್ಮವನ್ನು ಅರ್ಥ ಮಾಡಿಕೊಂಡ ಗುರುಗಳು ಎದ್ದು ನಿಂತು, ಒಂದು ಮಾತು ಹೇಳುತ್ತಾರೆ ನಾಳೆ ನಾನು ಬರುವುದರೊಳಗೆ ನೀವೆಲ್ಲಾ ಒಟ್ಟಾಗಿ ಕುಳಿತಿದ್ದರೆ ನಾನು ಪ್ರವಚನ ಮಾಡುವುದು ಎಂದು ಹೇಳಿ ಹೊರಡುತ್ತಾರೆ. ಮತ್ತೆ ನಾಳೆ ಬುದ್ಧಗುರುಗಳು ಸಭೆಗೆ ಬರುತ್ತಾರೆ. ನೋಡಿದರೆ ಆಶ್ಚರ್ಯ. ಎಲ್ಲರೂ ಒಂದಾಗಿ ಕುಳಿತಿದ್ದಾರೆ. ಇವರೂ ಬಂದು ಕುಳಿತುಕೊಳ್ಳುತ್ತಾರೆ. ಮೌನವಾಗಿ ಎಲ್ಲವನ್ನೂ ಗಮನಿಸುತ್ತಾರೆ. ಜನ ಈಗ ಪ್ರವಚನ ಶುರುವಾಗಬಹುದು ಎಂದು ಕಾಯುತ್ತಾರೆ. ಬುದ್ಧಗುರುಗಳು ಏನನ್ನೂ ಮಾತನಾಡದೇ ಇರುವುದನ್ನು ಗಮನಿಸಿದ ಜನ ಇನ್ನೂ ಒತ್ತಿ ಕೂರುತ್ತಾರೆ. ಬುದ್ಧಗುರುಗಳು ಏನೋ ಹೇಳಿದಂತೆ ಸಭೆ ಏನೋ ಕೇಳಿಸಿಕೊಂಡಂತೆ ಒಂದು ರೀತಿಯ ಮೌನ ಸಂವಾದ ಅಲ್ಲಿ ಆಗುತ್ತಿರುತ್ತದೆ. ಸ್ವಲ್ಪ ಸಮಯದ ನಂತರ ಬುದ್ಧ ಗುರುಗಳು ಎದ್ದು ನಿಂತು ನಾನು ನೆನ್ನೆ ಹೇಳಿದ್ದಕ್ಕೆ ಗೌರವಕೊಟ್ಟು ನೀವೆಲ್ಲಾ ಒಟ್ಟಾಗಿ ಕುಳಿತುಕೊಂಡಿದ್ದಕ್ಕೆ ಧನ್ಯವಾದಗಳು. ನನಗೆ ಇದಕ್ಕಿಂತ ಹೆಚ್ಚಿಗೆ ಹೇಳಲು ಏನೂ ಇಲ್ಲ ನೀವೆಲ್ಲಾ ಗೌರವಾನ್ವಿತರು ಎಲ್ಲರಿಗೂ ಒಳ್ಳೆಯದಾಗಲಿ. ಎಂದು ಹೇಳಿ ಇನ್ನೊಮ್ಮೆ ಬಂದಾಗ ನೀವು ಹೇಳಿ ನಾನು ಕೇಳಿಸಿಕೊಳ್ಳುತ್ತೇನೆ ಎಂದು ಹೊರಡುತ್ತಾರೆ. ಏನೂ ಹೇಳದೆ ಎಲ್ಲವನ್ನೂ ಕೇಳಿಸಿಕೊಂಡ ಹಾಗೆ ಸಭೆ ಮುಗಿಯುತ್ತದೆ.

ಈ ವಿಷಯ ನೆನಪಾದಾಗಲೆಲ್ಲಾ ಬುದ್ಧಗುರುಗಳು ನನ್ನ ಕುರಿತು 'ನೀನು ತುಂಬಾ ಮಾತನಾಡುತ್ತಿದ್ದೀಯ ಮಾತಿಗಿಂತ ಕೃತಿ ಮೇಲು, ಮಗು ಸ್ವಲ್ಪ ದಿನ ಸುಮ್ಮನಿರು' ಎಂದು ಹೇಳಿದ ಹಾಗೆ ಕೇಳಿಸುತ್ತದೆ. ಹೌದು ನಾನು ಒಂದು ಮರದ ಹಾಗೆ ಸಾಧ್ಯವಾದರೆ ಒಂದು ಪುಟ್ಟ ಗಿಡದ ಹಾಗೆ ಇದೂ ಸ್ವಲ್ಪ ಜಾಸ್ತಿಯಾಯಿತು, ಒಂದು ಎಲೆಯಾಗಿ ಅದರ ಮೇಲಿರುವ ತೆಳ್ಳನೆಯ ಗೆರೆಯಾಗಿ...

**–ಸುಬ್ಬು ಹೊಲೆಯಾರ್**



**(ಬೆಂಗಳೂರು ದೂರದರ್ಶನದಲ್ಲಿ ಕೆಲಸ ಮಾಡುವ ಸುಬ್ಬು ಕನ್ನಡದ ಮುಖ್ಯ ಕವಿಗಳಲ್ಲೊಬ್ಬರು ಮತ್ತು ದಲಿತ ಹೋರಾಟಗಳಲ್ಲಿ ಆಸಕ್ತಿ ಇರುವ ನಮ್ಮ ನಡುವಿನ ಸಂಸ್ಕೃತಿ ಚಿಂತಕರೂ ಹೌದು)**

## ಲೋಕದ ಬೆಳಕು: ನನ್ನ ಬುದ್ಧ



**ತ**ನ್ನೊಳಗಿದ್ದ ಶ್ರೇಣೀಕೃತ ಜಾತಿಪದ್ಧತಿ, ಅಸ್ಪೃಶ್ಯತೆಯ ವಿಕೃತ ಆಚರಣೆ, ಲಿಂಗ ತಾರತಮ್ಯ ಹಾಗೂ ಮೇಳು–ಕೀಳು ಎಂಬ ಹೊಲೆವಂಚನೆಯಿಂದ ಜಗತ್ತಿನೆದುರು ಕುರೂಪವಾಗಿ ನಿಂತಿದ್ದ ಭಾರತವನ್ನು ಮಾನವೀಯಗೊಳಿಸಿದ್ದು ಬೌದ್ಧಧರ್ಮ.

ಕರುಣೆ, ಮೈತ್ರಿ ಮತ್ತು ಲೋಕಹಿತದ ಪೂರ್ಣದೃಷ್ಟಿಯಿಂದ ಮೈದಾಳಿರುವ ಬುದ್ಧ ತೋರಿದ ಧರ್ಮದ ಬೆಳಕು, ಮನುಷ್ಯನಲ್ಲಿರುವ ಕ್ರೌರ್ಯ, ಹಿಂಸೆ, ಸ್ವಾರ್ಥ ಹಾಗೂ ಅಸಹಿಷ್ಣುತೆಯ ಅಹಂಕಾರವನ್ನು ಕರಗಿಸಿ, ಲೋಕವನ್ನು ಉನ್ನತ ನೈತಿಕತೆಯ ಮಾನವೀಯ ನೆಲೆಯನ್ನಾಗಿಸಬಹುದು. ಬೌದ್ಧಧರ್ಮ ಬಹುತ್ವದ ಸೌಹಾರ್ದದ ಸಮಾಜ ಅರಳುವಂತೆ ಮಾಡುವ ಪ್ರಜಾಸತ್ತಾತ್ಮಕವಾದ ಮುಕ್ತ ವ್ಯವಸ್ಥೆ ಎಂದು ನಂಬಿರುವವರಲ್ಲಿ ನಾನೂ ಒಬ್ಬ.

ಧಮ್ಮದ ತಿಳಿವು ನನ್ನೊಳಗೆ ಮೂಡಿಸಿದ ಎಚ್ಚರದಲ್ಲಿ ಹೇಳುವುದಾದರೆ, ಬುದ್ಧನೆಂದರೆ; ಕ್ರಿಯಾಶೀಲತೆ, ಸೃಜನಶೀಲತೆಯಿಲ್ಲದ ಮತವಲ್ಲ! ಬರಿ ಹೊತ್ತಗೆಗಳೂ ಅಲ್ಲ! ಧಮ್ಮವನ್ನು ಆಚರಣೆಯಲ್ಲಿ ತಂದೇ ಅನುಭವಿಸುವಂತದ್ದು. ಇದನ್ನು ಬುದ್ಧನ ಮಾತುಗಳಿಂದಲೇ ಇನ್ನಷ್ಟು ಸ್ಪಷ್ಟಪಡಿಸುವುದು ಉಚಿತ; ಒಮ್ಮೆ ಬುದ್ಧ, ಭಿಕ್ಖುಗಳ ಸಂಘದಲ್ಲಿ ಎಲ್ಲರ ಅನಾದರಕ್ಕೆ ತುತ್ತಾಗಿ ತೀವ್ರವಾದ ರೋಗದಿಂದ ನರಳುತ್ತಿದ್ದ ಭಿಕ್ಖುವಿನ ಆರೈಕೆ ಮಾಡುತ್ತಿದ್ದ. ಅದನ್ನು ಕಂಡ ಉಳಿದ ಭಿಕ್ಖುಗಳು, 'ಭಗವನ್, ಅವನಿಗೆ ಕುಕ್ಷಿವಿಕಾರದ ಕಾಯಿಲೆ. ಆದ್ದರಿಂದ ಅವನನ್ನು ಆರೈಕೆ ಮಾಡದೆ ನಾವು ದೂರ ಸರಿದಿದ್ದೇವೆ' ಎಂದರು. ಅವರಿಗೆ ಬುದ್ಧ ಹೇಳಿದ: 'ನನ್ನ ಸೇವೆ ಮಾಡುವವರು ಮೊದಲು ರೋಗಿಗಳು, ಹಸಿದವರು ಹಾಗೂ ಆಧಾರ ತಪ್ಪಿದವರ ಸೇವೆ ಮಾಡಲಿ. ಯಾವ ತೆರನಾದ ಬೀಜಗಳನ್ನಾಗಲಿ, ಮರಗಳನ್ನಾಗಲಿ ಸಂಹಾರ ಮಾಡದೆ ವಾಸಿಸುವವನು, ಅನ್ನ, ಪಾನ, ಸಂಪತ್ತು ಮುಂತಾದುವನ್ನು ಕೂಡಿಟ್ಟುಕೊಳ್ಳದಿರುವವನು ನನ್ನ ಸೇವೆ ಮಾಡಲಿ.'

ಬುದ್ಧನೆಂದರೆ ಅದೊಂದು ನಡೆಯುವ ದಾರಿ. ಹಾಗೆಯೇ ಇದು, ನಡೆದು ಹೋಗಿ ತಲುಪುವ ಒಂದು ನಿರ್ದಿಷ್ಟ ಜಾಗವಲ್ಲ! ಅದು ಯಾರ ನೆರವಿಲ್ಲದೆ ಸದಾ ನಡೆಯುವ ಪಯಣದ ಹಾದಿ. ಇದನ್ನೇ ಬೌದ್ಧರು 'ಏಕಾಯನ' ಎಂದು ಕರೆದಿದ್ದಾರೆ. ಈ ಹಿನ್ನೆಲೆಯಲ್ಲಿ ಕುವೆಂಪು 'ಅನಿಕೇತನ' ಕವಿತೆ ಬೌದ್ಧಧರ್ಮದ ಸಕಲ ತೇಜಸ್ಸನ್ನು ಔನ್ನತ್ಯದ ರೂಪಕವಾಗಿ ಒಳಗೊಂಡ ತಣ್ಣನೆಯ ಬೆಳದಿಂಗಳೆನಿಸಲು. ಈ ಕವಿತೆಯಲ್ಲಿನ ಶಕ್ತಿಶಾಲಿ ರೂಪಕಗಳು ಪಯಣವನ್ನು ಮುಂದವರೆಸಲು ನನಗೆ ತೋರುದೀಪಗಳಾಗಿ ಸಹಕರಿಸುತ್ತಿವೆ.

ವೈಯಕ್ತಿಕ ಕ್ಲೇಶಗಳಿಂದ ಬಿಡುಗಡೆ ಪಡೆಯಲು ಬುದ್ಧನ ದಾರಿಯನ್ನು ಆರಿಸಿಕೊಂಡವರು ಇದ್ದಾರೆ. ಹಾಗೆಯೇ ಸಾಮಾಜಿಕ ಮತ್ತು ರಾಜಕೀಯ ಬಾಧೆಗಳಿಂದ ವಿಮೋಚನೆ ಹೊಂದಲು, ಬೌದ್ಧಧರ್ಮವನ್ನು ಹೋರಾಟದ ಅಸ್ತ್ರವನ್ನಾಗಿ ಸ್ವೀಕರಿಸಿದವರೂ ಇದ್ದಾರೆ. ಇಪ್ಪತ್ತನೇ ಶತಮಾನದಲ್ಲಿ ಬೌದ್ಧಧರ್ಮಕ್ಕೆ ಸಾಮಾಜಿಕ ವಿಮೋಚನೆಯ ಹೊಸ ರೂಪವನ್ನು ಕೊಟ್ಟವರು ಬಾಬಾ ಸಾಹೇಬ್ ಅಂಬೇಡ್ಕರ್. ನನಗೆ ಈ ದಾರಿಯೂ ಸಮ್ಮತವೇ.

ನನ್ನ ಬುದ್ಧನೆಂದರೆ ಸಮಷ್ಟಿಯ ಹಿತವನ್ನು ಬಯಸುವವನು.

**–ಜಿ. ವಿ. ಆನಂದಮೂರ್ತಿ**



**(ತುಮಕೂರಿನಲ್ಲಿ ನೆಲೆಸಿರುವ ಲೇಖಕರು, ವಿಶ್ರಾಂತ ಕನ್ನಡ ಉಪನ್ಯಾಸಕರಾಗಿದ್ದು ಗಮನಾರ್ಹ ಕಥೆಗಾರ ಹಾಗೂ ಪ್ರಬಂಧಕಾರರೂ ಆಗಿದ್ದಾರೆ.)**

## ಗಾಂಧಿಯ ಜೊತೆಯಲ್ಲಿ ಬಂದ ಬುದ್ಧ



**ಬಾ**ಲ್ಯದಲ್ಲಿ ನನ್ನ ಮೇಲೆ ದಟ್ಟ ಪ್ರಭಾವ ಬೀರಿದವರು ಇಬ್ಬರು: ಅಜ್ಜಿ ಮತ್ತು ನಮ್ಮ ತಾಯಿ. ಅಜ್ಜಿ ಗಾಂಧಿ ಭಕ್ತರು. ಅವರು ನಮ್ಮಲ್ಲಿ ಸರಳತೆ, ಸೇವೆ, ಸ್ವಚ್ಛತೆ, ಸಭ್ಯತೆ ಆಚರಣೆಯಲ್ಲಿರುವಂತೆ ನಿಗಾ ವಹಿಸಿದ್ದರು. ಜೊತೆಗೆ ಕೂಗಾಟ, ನಿಂದನೆ ಮತ್ತು ಚಾಡಿ ಮಾತುಗಳಿಗೆ ಮನೆಯಲ್ಲಿ ಅವಕಾಶವಿರಲಿಲ್ಲ.

ಇನ್ನು ಸದಾ ಕಾಯಕದಲ್ಲಿ ನಿರತರಾಗಿರುತ್ತಿದ್ದ ನನ್ನ ತಾಯಿಯ ರೀತಿ ನೀತಿಗಳೇ ಬೇರೆ. ಮನೆಯಲ್ಲಿ ನಾವು ಮಕ್ಕಳು, ತಂದೆ–ತಾಯಿ ಸೇರಿ ಏಳು ಜನ ಇದ್ದೆವು. ಮನೆಯಲ್ಲಿ ಏನಾದರೂ ವಿಶೇಷ ತಿನಿಸು ಮಾಡಿದಾಗ ಅಥವಾ ಕಡಲೆಕಾಯಿ, ಗೆಣಸು ಬೇಯಿಸಿದಾಗ ಸಮನಾಗಿ ಏಳು ಪಾಲು ಮಾಡುತ್ತಿದ್ದೆವು. ನನ್ನ ತಾಯಿ ಅವರ ಪಾಲನ್ನು ಮುಟ್ಟಿದ ಶಾಸ್ತ್ರ ಮಾಡಿ, 'ನನಗೆ ಆಸೆಯಿಲ್ಲ' ಎಂದು ನಾಕು ಜನ ಮಕ್ಕಳಿಗೆ ಹಂಚಿಬಿಡುವರು. ಇದು ಹಲವು ಬಾರಿ ಪುನರಾವರ್ತನೆ ಆದಾಗ ನಾವು ಅಮ್ಮನಿಗೆ ಪಾಲು ಹಾಕಿದರೂ 'ಅಮ್ಮನಿಗೆ ಆಸೆಯಿಲ್ಲ' ಎಂದು ನಾವೇ ಹಂಚಿಕೊಂಡು ಬಿಡುತ್ತಿದ್ದೆವು. ಅಮ್ಮನಿಗೆ ಯಾಕೆ ಆಸೆ ಇಲ್ಲ ಎಂಬ ಪ್ರಶ್ನೆ ನನ್ನ ಮನಸ್ಸಿನಲ್ಲಿ ಮೂಡಿ ಕೊರೆಯುತ್ತಿರುವಾಗಲೇ ನನ್ನ ನಾಲ್ಕನೆಯ ಇಯತ್ತೆಯ ಪಠ್ಯ ಪುಸ್ತಕದಲ್ಲಿ ಪರಿಚಯವಾದ ಬುದ್ಧ. ಆತನ ಆಸೆ ಪಡುವುದು, ಅತಿಯಾಗಿ ಯಾವುದಕ್ಕೂ ಅಂಟಿಕೊಳ್ಳುವುದು ದುಃಖ ತರುವುದು ಎಂಬ ಸರಳ ಸತ್ಯವನ್ನು ನನ್ನ ಅಮ್ಮನ 'ನನಗೆ ಆಸೆಯಿಲ್ಲ' ಎಂಬ ಮಾತಿಗೆ ತಾಳೆ ಹಾಕಿ ನೋಡಿದಾಗ ಇದು ಅನುಸರಿಸಬಹುದಾದ ತತ್ವ ಎಂದು ಮನದಟ್ಟಾಯಿತು. ಅಂದಿನಿಂದಲೇ ಮೈತ್ರಿ–ಕರುಣೆಗಳೇ ಸಾಕಾರಗೊಂಡಂತಿರುವ ಬುದ್ಧ ತಾಯಿಯಂತೇ ಜೊತೆಗಿರುವನು, ಅಜ್ಜಿಯ ಗಾಂಧಿಗೆ ಜೊತೆಯಾಗಿ.

**–ಸವಿತಾ ನಾಗಭೂಷಣ**



**(ಶಿವಮೊಗ್ಗದಲ್ಲಿರುವ ಲೇಖಕಿ ಕನ್ನಡದ ಮುಖ್ಯ ಕವಿಗಳಲ್ಲೊಬ್ಬರು.)**

# ಸಾಹಿತ್ಯ–ಸಂಸ್ಕೃತಿ–ಪ್ರಶಸ್ತಿ–ಪ್ರವಾಸ ಇತ್ಯಾದಿ

–ಡಿಎಸ್ಸೆನ್

ಇತ್ತೀಚೆಗೆ ನನ್ನ ಅತಿ ಆಪ್ತರೊಬ್ಬರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿಯನ್ನು ಪ್ರಕಟಿಸಲಾಯಿತು. ಇದು ನನಗೆ ಗೊತ್ತಾದಾಗ ನಾನು ಅವರಿಗೆ ಈ ಪ್ರಶಸ್ತಿಯನ್ನು ಒಪ್ಪಿಕೊಳ್ಳಬಾರದಿತ್ತು ಎಂದೆ. ಏಕೆಂದರೆ ಇವರಿಗಿಂತ ಪ್ರಶಸ್ತಿಗೆ ಅರ್ಹರಾದ ಹಲವು ಹಿರಿಯರಿದ್ದರು.

ಇದಕ್ಕೆ ಆ ನನ್ನ ಆಪ್ತರು ಹೇಳಿದ್ದು: 'ಈ ಪ್ರಶಸ್ತಿ ಕೊಡಲಾಗಿದೆಯೆಂದು ಅಕಾಡೆಮಿಯ ಸದಸ್ಯರೊಬ್ಬರು ನನಗೆ ಕರೆ ಮಾಡಿ ತಿಳಿಸಿದಾಗ ನಾನು ತಕ್ಷಣವೇ ಇದೇ ಕಾರಣಕ್ಕಾಗಿ, ಕೆಲವು ಹೆಸರುಗಳನ್ನೂ ಹೇಳಿ, ನನಗೆ ಈ ಪ್ರಶಸ್ತಿ ಬೇಡವೆಂದು ಹೇಳಿದೆ. ಆದರೆ ಅವರು ಕರೆಯನ್ನು ಕಟ್ ಮಾಡಿಬಿಟ್ಟರು. ನಂತರ ನಾನು ಆ ಕೆಲವು ಹೆಸರುಗಳನ್ನು ಸಂದೇಶ ಕೂಡ ಮಾಡಿದೆ. ಆದರೆ ಅಕಾಡೆಮಿ ಅಧ್ಯಕ್ಷರು ಸ್ವಲ್ಪ ಹೊತ್ತಿನಲ್ಲೇ ಕರೆ ಮಾಡಿ ಪ್ರಶಸ್ತಿಗಳನ್ನು ಈಗಾಗಲೇ ಸಾರ್ವಜನಿಕವಾಗಿ ಪ್ರಕಟಿಸಲಾಗಿದೆ ಎಂದು ಹೇಳಿ ಅಭಿನಂದನೆಗಳನ್ನೂ ಸಲ್ಲಿಸಿಬಿಟ್ಟರು. ನಾನು ಮೂಕಳಾದೆ. ಇಂತಹ ಪರಿಸ್ಥಿತಿಯಲ್ಲಿ ಪ್ರಶಸ್ತಿ ನಿರಾಕರಿಸಿ ಸುದ್ದಿ ಮಾಡುವುದು ನನಗೆ ಪ್ರಶಸ್ತಿ ಸ್ವೀಕರಿಸುವುದಕ್ಕಿಂತ ಹೆಚ್ಚು ಮುಜುಗರದ ಸಂಗತಿ ಎನ್ನಿಸಿತು. ಇರಲಿ ಬಿಡಿ, ಮಹಿಳಾ ಕೋಟಾದಲ್ಲಿ ನನಗೆ ಈ ಪ್ರಶಸ್ತಿ ಕೊಟ್ಟಿದ್ದಾರೆನಿಸುತ್ತದೆ. ಅದು ಅಷ್ಟೇನೂ ಮುಜುಗರದ ಸಂಗತಿಯಲ್ಲ!'

'ಅಕಾಡೆಮಿಯ ಈ ಪ್ರಶಸ್ತಿಗಳು ಅರ್ಹರಿಗೆ ವಂಚಿತವಾಗುತ್ತಿರುವುದು ಈ ಕೋಟಾ ಪದ್ಧತಿಯಿಂದಲೇ ಅಲ್ಲವೆ? ಸಾಹಿತ್ಯವೇನು ಸರ್ಕಾರಿ ಸೇವೆಯೇ, ಮೀಸಲಾತಿ ನಿಗದಿಯಾಗಲು? ಕುವೆಂಪು, ಬೇಂದ್ರೆ, ಕಣವಿ, ಮಹಾದೇವ, ಸಿದ್ಧಲಿಂಗಯ್ಯ, ವೀಣಾ, ಸಾರಾ, ವೈದೇಹಿ ಇವರೆಲ್ಲ ಈ ಸಾಮಾಜಿಕ, ಪ್ರಾದೇಶಿಕ, ಲಿಂಗ ನ್ಯಾಯಗಳ ಕೋಟಾದ ಕೃಪೆಯಿಂದಾಗಿ ಕನ್ನಡಿಗರ ಮಧ್ಯೆ ಮಾನ್ಯತೆ ಪಡೆದರೆ?'

'ಈಗ ಏನು ಮಾಡುವುದು ಹೇಳಿ! ಅಕಾಡೆಮಿ ಕೆಲ ವರ್ಷಗಳಿಂದ ಈ ಕೋಟಾ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಏಕೆಂದು ನನಗೆ ತಿಳಿಯದು. ಹಾಗಿದ್ದಲ್ಲಿ ಈ ಅಕಾಡೆಮಿಯ ಎಲ್ಲ ಚಟುವಟಿಕೆಗಳನ್ನೂ ಬಹಿಷ್ಕರಿಸಬೇಕಾಗುತ್ತದೆ. ಆದರೆ ಏಕೆ ಬಹಿಷ್ಕರಿಸಬೇಕು? ಅದು ನಮ್ಮ ಹಣದಿಂದ ನಡೆಯುತ್ತಿರುವ ಸಂಸ್ಥೆಯಲ್ಲವೇ?'

ಮುಂದೆ ಮಾತಾಡುವುದು ನನಗೆ ಕಷ್ಟವಾಯಿತು. ಆದರೂ ಹೇಳಿದೆ: 'ಈ ಕೋಟಾ ವ್ಯವಸ್ಥೆ ಬರುವ ಮುನ್ನ ಕನ್ನಡದ ಯಾವ ಸಾಹಿತಿಗಾದರೂ ಅಕಾಡೆಮಿಯಿಂದ ಜಾತಿ, ಪ್ರದೇಶ ಅಥವಾ ಲಿಂಗದ ಆಧಾರದ ಮೇಲೆ ಅನ್ಯಾಯವಾಗಿತ್ತೆ? ಬೇಕಾದವರಿಗೆ ಬೇಕಾದ ನೆಪ ಹೇಳಿ ಪ್ರಶಸ್ತಿ ಕೊಡಲು. ಪುಢಾರಿ ಸಾಹಿತಿಯೊಬ್ಬರು ಅಧ್ಯಕ್ಷರಾಗಿದ್ದಾಗ ಜಾರಿಗೆ ತಂದದ್ದು ಈ ಕೋಟಾ ಪದ್ಧತಿ. ಇದನ್ನು ತೆಗೆದು ಹಾಕುವ ನೈತಿಕ ಧೈರ್ಯ ಅಕಾಡೆಮಿಯ ಇತ್ತೀಚಿನ ಯಾವ ಅಧ್ಯಕ್ಷರಿಗೂ ಬರದಿರುವುದು ಸಾಹಿತ್ಯ ಸಂವೇದನೆಯೆಂಬುದು ಇಂದು ಯಾವ ಮಟ್ಟ ಮುಟ್ಟಿದೆ ಎಂಬುದರ ಸೂಚನೆಯಾಗಿದೆಯಷ್ಟೆ. ಇತ್ತೀಚಿನ ವರ್ಷಗಳಲ್ಲಿ ಎಂಥೆಂಥವರಿಗೆ ಈ ಪ್ರಶಸ್ತಿ ಕೊಡಲಾಗಿದೆ ಎಂಬುದು ನಿಮಗೇ ಗೊತ್ತಲ್ಲ? ಇದು ಸಾಹಿತ್ಯದ ರುಚಿ ಉಳಿಸುವ ಬಹು ಮುಖ್ಯ ಪ್ರಶ್ನೆ ಅಲ್ಲವೆ?'

'ಹಾಗಾದರೆ ಮುವ್ವತ್ತು ವರ್ಷ ಕನ್ನಡದಲ್ಲಿ ಪದ್ಯ ಬರೆದಿರುವ ನನಗೆ ಈ ಪ್ರಶಸ್ತಿ ಸ್ವೀಕರಿಸುವ ಅರ್ಹತೆಯಿಲ್ಲ ಎನ್ನುವಿರಾ?'

ಮುಂದೆ ನನ್ನ ಮಾತು ನಿಂತಿತು. 'ನೀವು ಕೋಟಾದಲ್ಲಿ ಪ್ರಶಸ್ತಿ ಪಡೆಯುವಂತಹ ಅ–ಸಾಹಿತಿಯಲ್ಲ' ಎಂದು ಹೇಳಬೇಕೆನಿಸಿದರೂ ಅದು ಸ್ವಯಂ ವಿರೋಧಾಭಾಸದ ಮಾತಾದೀತೆಂದು ಸುಮ್ಮನಾದೆ..

ಸದ್ಯದ ಅಕಾಡೆಮಿ ಅಧ್ಯಕ್ಷರೂ ಸೇರಿದಂತೆ ಈ ಹಿಂದಿನ ಒಂದಿಬ್ಬರು ಅಧ್ಯಕ್ಷರುಗಳು ಅಕಾಡೆಮಿಯ ಕಾರ್ಯಕ್ರಮಗಳ ಸುಧಾರಣೆಗಾಗಿ ಸಲಹೆ ಕೇಳಿ ಪತ್ರ ಬರೆದಿದ್ದಾಗ ನಾನು ಈ ಕೋಟಾ ಪದ್ಧತಿ ಅಕಾಡೆಮಿಗೊಂದು ಅವಲಕ್ಷಣ ಎಂದು ಹೇಳಿದ್ದೆ. ಹಾಗೇ, ಎರಡು ವರ್ಷಗಳ ಹಿಂದೆ ಒಂದಿಬ್ಬರು ಶುದ್ಧ ನಾಲಾಯಕ್‌ರಿಗೆ ಈ ಪ್ರಶಸ್ತಿ ನೀಡಿದಾಗ ನಾನು ಕನ್ನಡ ಸಂಸ್ಕೃತಿ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರಿಗೆ ಕರೆ ಮಾಡಿ ಈ ಕೋಟಾವನ್ನು ನಿಲ್ಲಿಸಲು ಏನು ತಡೆಯಾಗಿದೆ ಎಂದು ಕೇಳಿದೆ. ಅದಕ್ಕವರು ನೀಡಿದ ಉತ್ತರ: 'ವಿಧಾನ ಸಭೆಯಲ್ಲಿ ಶಾಸಕರು ಈ ಜಾತಿಯವರಿಗೆ ಈ ಭಾಗದವರಿಗೆ ಏಕೆ ಪ್ರಶಸ್ತಿ ಕೊಟ್ಟಿಲ್ಲ ಎಂದು ಕೇಳಿ ರಗಳೆ ಮಾಡುತ್ತಾರೆ ಸಾರ್!'

ಆಗ ನಾನು ಹೇಳಿದ್ದೆ: 'ಅಕಾಡೆಮಿ ಒಂದು ಸರ್ಕಾರಿ ಇಲಾಖೆಯಲ್ಲ. ಅದನ್ನೊಂದು ಸ್ವಾಯತ್ತ ಸಂಸ್ಥೆಯಾಗಿ ನಮ್ಮ ಹಿರಿಯರು ರಚಿಸಿರುವುದೇ, 'ರಾಜಕಾರಣ' ಅದರಲ್ಲಿ ತಲೆ ಹಾಕಬಾರದೆಂಬುದಕ್ಕಾಗಿ. ಇದೊಂದು ಪರಿಣತ ಸಂಸ್ಥೆಯಾಗಿದ್ದು, ಇಂತಹ ಪ್ರಶ್ನೆಗಳಿಗೆ ಅವಕಾಶವಿಲ್ಲ; ಅದು ತನ್ನ ಪರಿಣಿತಿಯಲ್ಲಿ ಕೆಲಸ ಮಾಡಲು ಬಿಡಬೇಕೆಂದು ಆ ಶಾಸಕರಿಗೆ ಯಾರೂ ಏಕೆ ಹೇಳಲಿಲ್ಲ?'

ನನ್ನ ಮಾತು ಅವರಿಗೆ ಅರ್ಥವಾದಂತೆ ಕಾಣಲಿಲ್ಲ. ಅಥವಾ ಇದೆಲ್ಲ ಅಧಿಕ ಪ್ರಸಂಗವಾಗಿ ಕಂಡಿರಬಹುದು. ಅವರು ಮಾತು ನಿಲ್ಲಿಸಿದರು.

ಆದರೆ ದುಃಖದ ಸಂಗತಿ ಎಂದರೆ ಅಕಾಡೆಮಿಯ ಈ ರಾಜಕಾರಣ ನೋಡಿಯೋ ಏನೋ ಸರ್ಕಾರ ಕೂಡ ಇತ್ತೀಚಿನ ವರ್ಷಗಳಲ್ಲಿ ಅಕಾಡೆಮಿ ರಚನೆಯನ್ನೇ ಸಂಪೂರ್ಣ ರಾಜಕೀಯಗೊಳಿಸಿ ಅ–ಪರಿಣಿತಿಯನ್ನು ಅದರೊಳಕ್ಕೇ ಪ್ರತಿಷ್ಠಾಪಿಸಲಾರಂಭಿಸಿದೆ. ಅಲ್ಲಿಂದ ಇದರ ಅವನತಿ ಶುರುವಾಗಿದೆ. ಜಿಎಸ್ಸೆಸ್ ಅಧ್ಯಕ್ಷ ಸ್ಥಾನದಿಂದ ನಿರ್ಗಮಿಸಿದ ನಂತರ ಈ ಅಕಾಡೆಮಿಯ ಇತಿಹಾಸವನ್ನು ಗಮನಿಸಿದವರಿಗೆ ಇದು ಅರ್ಥವಾದೀತು. ವಿವರಗಳಿಗೆ ಈ ಸಂಸ್ಥೆಗೆ ಹಲವು ವರ್ಷ ಆಡಳಿತಾಧಿಕಾರಿಯಾಗಿದ್ದ ಟಿ.ಎಸ್. ದಕ್ಷಿಣಾಮೂರ್ತಿಯವರು ಬರೆದಿರುವ 'ಅಕಾಡೆಮಿಯ ಒಳ–ಹೊರಗು' ಎಂಬ ಪುಸ್ತಕವನ್ನು ಆಸಕ್ತರು ಗಮನಿಸಬಹುದು.

ಈ ಗೌರವ ಪ್ರಶಸ್ತಿ ಪ್ರದಾನ ಸಮಾರಂಭದ ಈ ವರ್ಷದ ಆಹ್ವಾನ ಪತ್ರಿಕೆ ನೋಡಿದೆ. ಪರಿಸ್ಥಿತಿ ಸದ್ಯಕ್ಕೇನೂ ಸುಧಾರಿಸುವ ಸೂಚನೆ ಕಾಣಲಿಲ್ಲ. ಆಹ್ವಾನ ಪತ್ರಿಕೆಯ ಒಂದು ಪುಟದ ತುಂಬಾ ರಾಜಕಾರಣಿಗಳ ಹೆಸರುಗಳೇ ಅತಿಥಿಗಳಾಗಿ ರಾರಾಜಿಸುತ್ತಿವೆ! ಈ 'ಪ್ರೊಟೋಕಾಲ್' ರಾಜಕಾರಣಕ್ಕೆ ಬೀಳುವುದರಿಂದ ಅಕಾಡೆಮಿ ತನ್ನ ನಿಜ ಸ್ಥಾನಮಾನದ ಅರಿವನ್ನೂ, ಘನತೆಯನ್ನೂ ತಾನೇ ತಾನಾಗಿ ಕಳೆದುಕೊಳ್ಳುತ್ತಿದೆ ಎನಿಸುತ್ತಿದೆ. ಇದು ತೀರಾ ವಿಷಾದದ ಸಂಗತಿ. ಅದೃಷ್ಟವಶಾತ್ ಅಕಾಡೆಮಿಯಲ್ಲಿ ಇನ್ನೂ ಸ್ಥಾನ ಪಡೆಯುತ್ತಿರುವ ಕೆಲವು ನಿಜ ಸಾಹಿಗಳಾದರೂ ಈ ಬಗ್ಗೆ ಸದುದ್ದೇಶವುಳ್ಳ ಆದರೆ ಅಸಹಾಯಕರಾಗಿರುವಂತೆ ತೋರುವ ಅಧ್ಯಕ್ಷರ ಗಮನ ಸೆಳೆದು ಒತ್ತಡ ಹೇರಬೇಕಿದೆ. ಹಾಗೇ ಹಾಸ್ಯಾಸ್ಪದ ಮಟ್ಟದಲ್ಲಿರುವ ಪ್ರಶಸ್ತಿ ಮತ್ತು ಬಹುಮಾನಗಳ ಜೊತೆ ನೀಡುವ ನಗದು ಮೊತ್ತವನ್ನು ಸ್ವಲ್ಪ ಗೌರವಾನ್ವಿತ ಮಟ್ಟಕ್ಕೆ ಹೆಚ್ಚಿಸಲೂ ಇವರು ಪ್ರಯತ್ನಿಸಬೇಕು.

## ಹಲಸಂಗಿ ಗೆಳೆಯರ ನೆನಪಲ್ಲಿ....ರಾಜ

ಪ್ರಶಸ್ತಿ–ಬಹುಮಾನಗಳ ಬಗ್ಗೆ ಬರೆಯುತ್ತಿರುವ ಈ ಹೊತ್ತಿನಲ್ಲೇ ಇದಕ್ಕೇ ಸಂಬಂಧಿಸಿದ ನನ್ನ ಇತ್ತೀಚಿನ ಇನ್ನೊಂದು ಅನುಭವನ್ನು ಇಲ್ಲಿ ಹೇಳಬೇಕು. ಮೇಲೆ ಪ್ರಸ್ತಾಪಿಸಿದ ನನ್ನ ಅದೇ ಆಪ್ತರಿಗೆ(ಇನ್ನಿಬ್ಬರ ಜೊತೆಗೆ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಗೇ ಬರುವ 'ಹಲಸಂಗಿ ಗೆಳೆಯರ ಪ್ರತಿಷ್ಠಾನ'ವು ಒಂದು ದೊಡ್ಡ ಮೊತ್ತದ ಪ್ರಶಸ್ತಿಯನ್ನೇ ಪ್ರಕಟಿಸಿತು. ಪ್ರಶಸ್ತಿ ಪ್ರದಾನ ಸಮಾರಂಭ ಬಿಜಾಪುರದಲ್ಲಿ. ಅವರೊಂದಿಗೆ ಬಿಜಾಪುರ ನೋಡಲೆಂದು ನಾನೂ ಹೋದೆ.

ಬಿಜಾಪುರದ ಬಿಸಿಲಲ್ಲಿ ಯಾವ ಮಾರಾಯ ಈ ಸಮಾರಂಭವನ್ನು ಮಧ್ಯಾಹ್ನ ೩.೩೦ಕ್ಕೆ ನಿಗದಿ ಮಾಡಿದನೋ! ನಿರೀಕ್ಷೆಯಂತೆ ಸಮಾರಂಭವಿದ್ದ ಕಂದಗಲ್ ಹನುಮಂತರಾಯ ಸಭಾ ಭವನ ಬಿಕೋ ಎನ್ನುತ್ತಿತ್ತು. ಪ್ರಶಸ್ತಿ ಪ್ರದಾನ ಮಾಡಲು ಬರಬೇಕಾದ ಮಂತ್ರಿಗಳೂ ಬರಲಿಲ್ಲ; ಜನವೂ ಬರಲಿಲ್ಲ. ಸಮಾರಂಭದ ಸಂಚಾಲಕರಾದ ಅಲ್ಲಿನ ಕನ್ನಡ–ಸಂಸ್ಕೃತಿ ಇಲಾಖೆಯ ಅಧಿಕಾರಿ ಮಾತ್ರ ಯಾವ ಮುಜುಗರವೂ ಇಲ್ಲದೆ, ಇದೆಲ್ಲ ಹೀಗೇ ಎಂಬಂತೆ ಕೂತಲ್ಲಿ ಕೂತು ಅಂತೂ ಸಮಾರಂಭವನ್ನು ಸಂಜೆ ೫ಕ್ಕೆ ಆರಂಭಿಸಿದಾಗ ಪ್ರತಿಷ್ಠಾನದ ಆರೇಳು ಸದಸ್ಯರೂ ಸೇರಿದಂತೆ ನಲವತ್ತು–ಐವತ್ತು ಜನ ಸೇರಿದ್ದರು! ಅಭಿಮಾನದಿಂದ ದೂರದ ಬಳ್ಳಾರಿಯಿಂದ ಬಂದಿದ್ದ ಲೋಹಿಯಾ ಪ್ರಕಾಶನದ ಸಿ. ಚನ್ನಬಸವಣ್ಣನವರನ್ನೂ ಸೇರಿಸಿ ಒಂದಷ್ಟು ಜನರನ್ನು ವೇದಿಕೆ ಹತ್ತಿಸಿ ಸಮಾರಂಭವನ್ನು ಮುಗಿಸಿಯೇ ಬಿಟ್ಟರು. ಮುಖ್ಯ ಭಾಷಣಕಾರರಾಗಿ ಬಂದಿದ್ದ ಗೆಳೆಯ ರಾಜೇಂದ್ರ ಚೆನ್ನಿಯವರು ಮಾತ್ರ ಒಂದಿಷ್ಟೂ ವಿಚಲಿತರಾಗದೆ ಒಂದು ಅಚ್ಚುಕಟ್ಟಾದ ಭಾಷಣ ಮಾಡಿದ್ದೇ ಅಂದಿನ ನಮ್ಮ ಪಾಲಿನ ಭಾಗ್ಯವಾಗಿತ್ತು!

ಬಹುಶಃ ಸರ್ಕಾರಿ ಪ್ರಾಯೋಜಿತ ಎಲ್ಲ ಪ್ರಶಸ್ತಿಗಳ –ಓಹ್! ಇಂದು ಇವು ಎಷ್ಟೊಂದಿವೆ!–ಗೋಳೂ ಇದೇ ಆಗಿದೆ. ಸರ್ಕಾರ ಇವನ್ನು ಗೌರವಯುತವಾಗಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಯಾರಾರನ್ನೋ ಮೆಚ್ಚಿಸಲು ಅಥವಾ ಯಾವುದೋ ತುರ್ತಿಗೆ ಯಾರದೋ ಹೆಸರಲ್ಲಿ ಪ್ರಶಸ್ತಿ ಪ್ರತಿಷ್ಠಾಪಿಸಿ ಅವನ್ನೀಗ ಯಾವುದೇ ಮಾನದಂಡವಿಲ್ಲದೆ ಬೇಕಾದವರಿಗೆ ನೀಡುವ ಪರಿಪಾಠ ಬೆಳೆದಂತಿದೆ. ಕನ್ನಡ ಹೋರಾಟಗಾರರಿಗೆ ನೀಡಲೆಂದು ಸ್ಥಾಪಿತವಾಗಿ ಮೊದಲ ಬಾರಿಗೆ ವಾಟಾಳ್ ನಾಗರಾಜರಿಗೆ ನೀಡಿದ ಸಂಗೊಳ್ಳಿ ರಾಯಣ್ಣ ಪ್ರಶಸ್ತಿ ಮುಂದಿನ ವರ್ಷ ಸಂದಿದ್ದು ಬಿ.ಟಿ. ಲಲಿತಾನಾಯಕರಿಗೆ! (ಈ ಬಗ್ಗೆ ಹಿಂದೆ ಬರೆದಿದ್ದೆ.) ಈ ವರ್ಷ ಅದು ಸಂದಿರುವುದು ಕವಿ ಜಂಬಣ್ಣ ಅಮರಚಿಂತರಿಗೆ! ಜಂಬಣ್ಣ ನಮ್ಮ ಒಳ್ಳೆಯ ಕವಿ, ನಿಜ. ಅವರನ್ನು ಕವಿಯಾಗಿ ಗೌರವಿಸಿ; ಸೂಕ್ತವಾಗಿ ಗೌರವಿಸಲಾಗಿದೆ ಕೂಡ. ಆದರೆ ಅವರಿಗೆ ಈ 'ಸಂಗೊಳ್ಳಿ ರಾಯಣ್ಣ' ಪ್ರಶಸ್ತಿ ಯಾವ ಕಾರಣಕ್ಕೆ? ಕೇಳಿದರೆ ದಲಿತ ವಿರೋಧಿ ಪಟ್ಟ ಪ್ರದಾನವಾದೀತು!

## ಹಲಸಂಗಿಗೊಂದು ಭೇಟಿ



**ಮಧುರಚೆನ್ನರ ಸಮಾಧಿಯ ಬಳಿ**

ಹಲಸಂಗಿ ಗೆಳೆಯರ ಪ್ರತಿಷ್ಠಾನದ ಪ್ರಶಸ್ತಿ ಪ್ರದಾನ ಸಮಾರಂಭದ ಸುಸ್ತನ್ನು ಪರಿಹರಿಸಿಕೊಂಡ ನಾವು ಮಾರನೆಯ ದಿನ ಬಿಜಾಪುರದಿಂದ ಹಲಸಂಗಿಗೇ ಹೊರಟೆವು. ನಾವು ಅಂದರೆ ನಾನು, ಪ್ರಶಸ್ತಿ ಪಡೆದಿದ್ದ ನನ್ನ ಪತ್ನಿ ಸವಿತಾ ಮತ್ತು ಗೆಳೆಯ ಹನೂರು ಕೃಷ್ಣಮೂರ್ತಿ ಹಾಗೂ ಈ ಪ್ರವಾಸದ ಪ್ರೇರಕರಾಗಿದ್ದ ಚನ್ನಬಸವಣ್ಣ ಅವರು. ಹಲಸಂಗಿ ಗೆಳೆಯರಾದ ಮಧುರಚೆನ್ನ, ಕಾಪಸೆ ರೇವಪ್ಪ, ಸಿಂಪಿ ಲಿಂಗಣ್ಣ ಹಾಗೂ ಧೂಲಾ ಸಾಹೇಬರನ್ನು ಭೇಟಿ ಮಾಡಲು ಹೋಗುತ್ತಿದ್ದ ಶಿವರಾಮ ಕಾರಂತರು ಅದನ್ನು ಆಗ 'ಹೊಲಸಂಗಿ' ಎಂದು ಕರೆಯುತ್ತಿದ್ದರು. ಆದರೆ ಈಗ ಒಳ್ಳೆಯ ರಸ್ತೆಯಾಗಿರುವುದರಿಂದ ಅಂಗಿ ಅಷ್ಟೇನೂ ಹೊಲಸಾಗುವುದಿಲ್ಲ. ಆದರೆ ಈ ಬೇಸಿಗೆ ಬಿಸಿಲು ತಡೆಯುವುದು ಕಷ್ಟ. ಆದರೆ ನಾವು ಮಧುರಚೆನ್ನರ ಮಗ ಪುರುಷೋತ್ತಮ ಗಲಗಲಿಯವರ ಮನೆ ಹೊಕ್ಕಾಗ ನಿಜವಾಗಿಯೂ ತಂಪೆನಿಸಿತು. ಮಧುರ ಚೆನ್ನರ ನೆನಪೂ ಇದಕ್ಕೆ ಕಾರಣವಿರಬಹುದು.

ಮಹಾರಾಷ್ಟ್ರದ ಗಡಿಗೆ ಹತ್ತಿರವಿರುವ ಈ ಕುಗ್ರಾಮದಲ್ಲಿ ಈ ಹಲಸಂಗಿ ಗೆಳೆಯರು ಎಪ್ಪತ್ತು–ಎಂಬತ್ತು ವರ್ಷಗಳಷ್ಟು ಹಿಂದೆಯೇ ಅಧ್ಯಾತ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಮಾಡಿರುವ ಕೆಲಸ ಗಾಬರಿ ಹುಟ್ಟಿಸುವಂತಹುದು. ಪಾಂಡಿಚೆರಿಯ ಅರವಿಂದರೆಲ್ಲಿ? ಈ ಕುಗ್ರಾಮವೆಲ್ಲಿ? ಹಲಸಂಗಿಯಲ್ಲಿ ನಾವು ಮುಖ್ಯವಾಗಿ ನೋಡಿದ್ದು, ಜೀರ್ಣಾವಸ್ಥೆಯಲ್ಲಿದ್ದರೂ ಮಧುರಚೆನ್ನರ ಧ್ಯಾನ ಸ್ಪಂದನಗಳು ಇನ್ನೂ ಜೀವಂತವಿರುವ ಅವರ ಹಳೆಯ ಮನೆ, ಅವರು ಗೆಳೆಯರೊಂದಿಗೆ ಸ್ಥಾಪಿಸಿರುವ, ಈಗಲೂ ಆನಂದ ಕೊಡುವಂತಿರುವ ಅರವಿಂದಾಶ್ರಮ ಮತ್ತು ಆ ಉರಿಬಿಸಿಲಿನ ಬಯಲಲ್ಲಿದ್ದರೂ ತಂಪು ನೆಳಲು ಸೂಸುವ ಮಧುರಚೆನ್ನರ ಸಮಾಧಿ.

ಈ ನಮ್ಮ ಭೇಟಿ ನಮ್ಮ ಮಧುರ ನೆನಪಿನಲ್ಲಿ ಉಳಿಯಲು ಮಧುರಚೆನ್ನರಷ್ಟೇ ಕಾರಣವಾದದ್ದು, ಅಂದು ನಮ್ಮೊಂದಿಗಿದ್ದ ಅವರ ಮಕ್ಕಳು, ಮೊಮ್ಮಕ್ಕಳ ಪ್ರೀತಿಪೂರ್ವಕ ಉಪಚಾರ ಮತ್ತು ಸಮಾಧಿ ಬಳಿ ಅದರ ಮೌನವನ್ನೇ ಶೃತಿ ಮಾಡಿಕೊಂಡಂತೆ ಮಗ ಅಲ್ಲಮಪ್ರಭು ಅವರು ಹಾಡಿದ ಮಧುರಚೆನ್ನರ ಒಂದು ಗೀತವೆಂದೇ ಹೇಳಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಮಧುರಚೆನ್ನರ ಬಗ್ಗೆ ಒಂದು ಪುಟ್ಟ ಪುಸ್ತಕವನ್ನೂ ಬರೆದಿರುವ ಅವರ ಮಗಳು ೮೨ ವರ್ಷ ವಯಸ್ಸಿನ ಅಜ್ಜಿ ಸರೋಜಿನಿಯವರ ಪ್ರೀತಿ ತುಂಬಿದ ಕಣ್ಣುಗಳನ್ನು ಹೇಗೆ ಮರೆಯಲು ಸಾಧ್ಯ?

## 'ಬೋಲ್' ಕುರಿತ ವಿಮರ್ಶೆ: ಒಂದು ಪ್ರತಿಕ್ರಿಯೆ

ಪ್ರಿಯ ಸಂಪಾದಕರೆ,

ಪತ್ರಿಕೆಯ ಏಪ್ರಿಲ್ ಸಂಚಿಕೆಯನ್ನು ಓದಿ ಮುಗಿಸಿದೆ. ಎಂದಿನಂತೆ ಆಸಕ್ತಿಯನ್ನು ಉದ್ದೀಪಿಸುವ ಪತ್ರಿಕೆ ಎಂಬುದು ಮತ್ತೂ ಖಾತ್ರಿಗೊಳಿಸಿದ ಅನುಭವ ನೀಡಿದ್ದೀರಿ. 'ಗಾಂಧಿ–ಅಂಬೇಡ್ಕರ್' ಅವರುಗಳ ಕುರಿತ ನಿಮ್ಮ ಲೇಖನವೂ ಸೇರಿದಂತೆ ಎಲ್ಲವೂ ತುಂಬ ಗಹನವಾದವು. ವಿಶೇಷವಾಗಿ ನನಗೆ ಲಕ್ಷ್ಮೀಶ ತೋಳ್ಪಾಡಿ ಮತ್ತು ಡಾ. ಎಂ.ಗಣೇಶ್(ಹೆಗ್ಗೋಡು) ಇವರ ಲೇಖನಗಳು ಬಹು ಇಷ್ಟವಾಯಿತು. ಈ ಬಗೆಯ ವಿಚಾರಗಳು, ಚರ್ಚೆಗಳು ಬಹುಶಃ ವರ್ಷವಿಡೀ ನಡೆಯಬೇಕಾದವು. ಕೇವಲ ಅಂಬೇಡ್ಕರ್, ಗಾಂಧಿ ಹುಟ್ಟುಹಬ್ಬಗಳ ಸಂದರ್ಭದಲ್ಲಿ ಮಾತ್ರವಲ್ಲ ಎಂದು ನನ್ನ ಭಾವನೆ.

ಕೊನೆಯ ಪುಟದಲ್ಲಿನ ನಿಮ್ಮ 'ಒಂದು ಪಾಕೀಸ್ತಾನಿ ಚಲನಚಿತ್ರ....' ಲೇಖನ ನನ್ನನ್ನು ಬಹುವಾಗಿ ಆಕರ್ಷಿಸಿತು. 'ಬೋಲ್' ಎಂಬ ಒಂದು ಚಿತ್ರ ಇದು. ಈಗಾಗಲೇ 'ಖುದಾ ಕೇ ಲಿಯೆ' ಎಂಬ ಚಿತ್ರದಿಂದ ಹೆಸರು ಮಾಡಿದ ಶೋಯೆಬ್ ಮನ್ಸೂರ್ ಅವರ ನಿರ್ದೇಶನದ ಚಿತ್ರ. ನಿಮ್ಮ ಲೇಖನ ಓದಿ ಕೂಡಲೆ ಆ ಕ್ಯಾಸೆಟ್ ಅನ್ನು ತರಿಸಿ ನೆನ್ನೆ ರಾತ್ರಿಯೇ ನೋಡಿದೆ. ನೀವು ಹೇಳಿರುವ ಪ್ರತಿಯೊಂದು ಅಂಶವನ್ನೂ ನಾನು ಒಪ್ಪುತ್ತೇನೆ. ಧಾರ್ಮಿಕ, ಕೌಟುಂಬಿಕ, ಸಾಮಾಜಿಕ, ರಾಜಕೀಯ ಸ್ಥಿತಿಗಳ ಕುರಿತಾಗಿ ಅತ್ಯಂತ ಪ್ರಾಮಾಣಿಕವೂ, ನೋಡುಗನ ಮನದಾಳಕ್ಕೆ ಹಟಾತ್ ದಾಳಿ ಮಾಡಿ ಅಲ್ಲೋಲಕಲ್ಲೋಲವನ್ನೂ ಮಾಡಿಬಿಡುವಂಥ ಅನನ್ಯ ಚಿತ್ರ. ಪಾತ್ರಕ್ಕೆ 'ಮಾತಾಡು' ಎಂದು ಹೇಳುವ ಈ ಚಿತ್ರದ ನಿರ್ದೇಶಕರೇ ದಿಟ್ಟವಾಗಿ, ಮನಕರಗಿಸಿಬಿಡುವಂಥ ಮಾನವೀಯತೆಯಲ್ಲಿ 'ಮಾತಾಡಿದ್ದಾರೆ. ತಮ್ಮ ಆಳದ ನೋವಿಗೆ ನಿರ್ಭಿಡೆಯಿಂದ ನುಡಿ ಕೊಟ್ಟಿದ್ದಾರೆ.

ಪಾಕೀಸ್ತಾನ ಎಂದರೆ ನಮ್ಮ ಪತ್ರಿಕೆಗಳು, ಮಾಧ್ಯಮಗಳು, ನಮ್ಮ ರಾಜಕೀಯ(ಅದೂ ಇಂದಿನ) ನಾಯಕರುಗಳು ಬಿಂಬಿಸುವುದೇ ನಮ್ಮ ಮನಸ್ಸುಗಳಲ್ಲೂ ನಾಟಿಬಿಟ್ಟಿರುವುದು. ಅದೊಂದು ಅನಾಗರಿಕ, ಹಿಂಸಾಪ್ರವೃತ್ತಿಯ, ಭಯೋತ್ಪಾದಕರ, ಜೀವವಿರೋಧಿ ಶಕ್ತಿಗಳಿಂದ ನಿಯಂತ್ರಿಸಲ್ಪಡುತ್ತಿರುವ ದೇಶ ಅದೆಂದು. ವ್ಯಕ್ತಿ ಸ್ವಾತಂತ್ರ್ಯ, ಅದರಲ್ಲಿಯೂ ಮಹಿಳೆಯರಿಗೆ ಸ್ವಾತಂತ್ರ್ಯವೆಂಬುದು ಎಳ್ಳುಕಾಳಿನಷ್ಟೂ ಸಾಧ್ಯವಿಲ್ಲದ ನಾಡು ಅದು; ಹಾಗೂ ಭಾರತ ದ್ವೇಷ ಮತ್ತು ಅನ್ಯ ಧರ್ಮನಾಶ ಇವೆರಡೇ ಪಾಕಿಸ್ತಾನಕ್ಕಿರುವ ಮೂಲಭೂತ ಉದ್ದೇಶ; ಪಾಕೀಸ್ತಾನದ ಮುಸ್ಲಿಮರಷ್ಟೇ ಅಲ್ಲ ಜಗತ್ತಿನ ಮುಸ್ಲಿಮರೆಲ್ಲ ಮಾನವಲೋಕದ ಕಂಟಕರು ಎಂದು ತೀರ್ಮಾನಿಸಿಬಿಟ್ಟಿದ್ದೇವೆ–ಕನಿಷ್ಠ ನೂರಕ್ಕೆ ತೊಂಬತ್ತೈದು ಮಂದಿ.

ಆದರೆ, ಮುಂದಿನ ಪ್ರಶ್ನೆ ಎಂದರೆ, ಇಂತಹ ಪಾಕೀಸ್ತಾನದಲ್ಲಿ 'ಬೋಲ್'ನಂಥ ಒಂದು ಚಿತ್ರ ಮಾಡಲು ಸಾಧ್ಯವಾದ ಹಾಗೆ ೫೦೦೦ ವರ್ಷಗಳ ಭವ್ಯ ಸಂಸ್ಕೃತಿಯ, ಪರಮಸಹಿಷ್ಣುತೆಯ ನಾಡು ಎಂದು ಬೀಗುವ ನಮ್ಮ ರಾಷ್ಟ್ರದಲ್ಲಿ ಇಂದು 'ಬೋಲ್'ನ ನೂರನೇ ಒಂದರಷ್ಟು ಬಿಚ್ಚುಮನಸ್ಸಿನ ಚಿತ್ರ ತಯಾರಾದರೆ ಅದರ ಗತಿ ಏನಾಗುತ್ತದೆ ಎಂದು ನನಗೆ ಖಂಡಿತ ಹೇಳಲು ಸಾಧ್ಯವಿಲ್ಲ. ಸದ್ಯದ ಸಮಯದಲ್ಲಿಯಂತೂ–ಸಾಧ್ಯವೇ ಇಲ್ಲ.

ಈ ದೇಶದಲ್ಲಿ ಕುಟುಂಬ, ಧರ್ಮ ಇತ್ಯಾದಿಗಳ ಬಗ್ಗೆ ಧೈರ್ಯದ ಪ್ರಶ್ನೆಗಳನ್ನು ಈ ಹಿಂದೆ ಹೆಣ್ಣು ಕೇಳಿಲ್ಲ ಎಂದಲ್ಲ; ಆತ್ಮವಿಶ್ವಾಸದಲ್ಲಿ ತನ್ನ ವ್ಯಕ್ತಿತ್ವವನ್ನು ಸ್ಥಾಪಿಸಿಲ್ಲ ಎಂದಲ್ಲ – ಆದರೆ ಇಂದು? ಇದು ಕೇವಲ ಬಿ.ಜೆ.ಪಿ ಆಳ್ವಿಕೆಗೆ ಸೀಮಿತ ಪ್ರಶ್ನೆಯಲ್ಲ, ಎಲ್ಲ ಪಕ್ಷಗಳೂ – ಪ್ರಕಟವಾಗಿ ಕೆಲವು, ಮುಗುಮ್ಮಾಗಿ ಕೆಲವು – ಮತೀಯ ಮೂಲಭೂತವಾದವನ್ನೇ ಪುಷ್ಟೀಕರಿಸುತ್ತಿರುವುದು.

ಇರಲಿ. ಪಾಕೀಸ್ತಾನದಂಥ –ಎಂದೂ ನಮ್ಮ ನಂಬಿಕೆ, ವಿಶ್ವಾಸ ಗಳಿಸದ ರಾಷ್ಟ್ರದಲ್ಲಿ 'ಬೋಲ್' ನಿರ್ಮಾಣವಾಗುತ್ತದೆ – ಮರುಭೂಮಿಯ ಮಧ್ಯದ ಓಯಸಿಸ್‌ನಂತೆ. ಫಯಾಜ಼್ ಅಹಮದ್ ಫಯಾಜ಼್ ಎಂಬ ಪಾಕಿಸ್ತಾನೀ ಕವಿ 'ಬೋಲ್' ಎಂಬ ಪುಟ್ಟ ಕವನ ರಚಿಸಿದ್ದಾನೆ. ಬಹುಶಃ ಅಸಮರ್ಪಕವೇ ಅನ್ನಿಸುವಂಥ ನನ್ನ ಅನುವಾದದಲ್ಲಿ ಇಲ್ಲಿ ಕೊಟ್ಟಿದ್ದೇನೆ:


*ಮಾತಾಡು, ಈ ಇಷ್ಟೇ ಸಮಯ ಸಾಕಷ್ಟಾಯಿತು*
*ಈ ದೇಹ ನಾಲಗೆಗಳು ಸಾಯುವ ಮುನ್ನ, ಮತನಾಡು;*
*ಸತ್ಯ ಇನ್ನೂ ಜೀವಂತವಿದೆ.*

**–ಪ್ರೊ. ಜಿ.ಕೆ. ಗೋವಿಂದರಾವ್**, ಬೆಂಗಳೂರು

# ಪುಸ್ತಕಾವಲೋಕನ

ಪು: ನಾ ಕಂಡ ಮಲೆನಾಡು ಲೇ: ವೈ.ಎಸ್. ಪುಟ್ಟಣ್ಣ, ತ್ಯಾನಂದೂರು ಪ್ರ: ಸ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ಪು: ೫೬೮ ಬೆಲೆ: ರೂ. ೪೫೦/-

## ಅಪೂರ್ವ ಕೃತಿ, ಅಪರೂಪದ ವ್ಯಕ್ತಿ




**ತೀ**ರ್ಥಹಳ್ಳಿ ತಾಲ್ಲೂಕಿನ ತ್ಯಾನಂದೂರು ಪುಟ್ಟಣ್ಣನವರೆಂಬ ರೈತಮುತ್ಸದ್ದಿ ೧೯೯೧ ರಲ್ಲಿ ಮೊದಲು ಪ್ರಕಟಿಸಿದ ಈ ಪುಸ್ತಕ ಇದೀಗ ಮೂರನೇ ಬಾರಿಗೆ ಮುದ್ರಣಗೊಂಡಿದೆ. ಈಗ ಪುಸ್ತಕದ ಮುಖಪುಟ ವಿನ್ಯಾಸ, ಅಕ್ಷರಗಳ ಗಾತ್ರ, ಶೀರ್ಷಿಕೆಗಳ ಅನುಕ್ರಮಣಿಕೆ, ಅನುಬಂಧಗಳನ್ನು ಪರಿಷ್ಕರಿಸಿ, ಮಲೆನಾಡ ಸಂಸ್ಕೃತಿ ಕಥನ ಮತ್ತು ಆತ್ಮಕಥನಗಳಾಗಿ ಎರಡು ಭಾಗಗಳಲ್ಲಿ ಗ್ರಂಥ ಸಾಮಗ್ರಿಯನ್ನು ವಿಂಗಡಿಸಲಾಗಿದೆ. ಇದು ಸರಾಗ ಓದಿಗೆ ಸಹಾಯಕವಾಗಿ ಓದಿನ ಸುಖ ಹೆಚ್ಚಿಸುತ್ತದೆ. ಮೊದಲಭಾಗ ಮಲೆನಾಡ ಸಂಸ್ಕೃತಿ ಕಥನ ಈಗಾಗಲೇ ಹಲವರು ಗುರುತಿಸಿರುವಂತೆ ಒಂದು ವಿಶ್ವಕೋಶದಂತಿದೆ. ಇಲ್ಲಿ ಪಶ್ಚಿಮ ಘಟ್ಟದ ಈ ವಿಶಿಷ್ಟ ಭೂಭಾಗದ ಪ್ರಕೃತಿ ಪರಿಚಯ, ಅರಣ್ಯ ಸಂಪತ್ತು, ಸಸ್ಯಕೋಟಿ, ಪ್ರಾಣಿ ಸಂಕುಲ, ಮಳೆ ಬೆಳೆಯ ಸಮೃದ್ಧಿ, ಜನರ ಆರ್ಥಿಕ ಸ್ಥಿತಿಗತಿ, ಆಹಾರ ವಿಹಾರ, ಉಡುಪು ಒಡವೆಗಳು, ನಿತ್ಯೋಪಯೋಗಿ ವಸ್ತುಗಳು, ರೋಗ ರುಜಿನಗಳು, ಧರ್ಮ ಜಾತಿಗಳು, ಆಚರಣೆ, ಅಂಧ ಶ್ರದ್ಧೆಗಳು, ವ್ಯಾಪಾರ ವ್ಯವಹಾರ, ರಾಜಕಾರಣ, ಆಡಳಿತ ವ್ಯವಸ್ಥೆ ಹೀಗೆ ಸಮಸ್ತ ಮಾಹಿತಿಗಳೂ ಲಭ್ಯವಿವೆ. ಇವನ್ನೆಲ್ಲಾ ಲೇಖಕರು ಕಂಡುಂಡು ದಾಖಲಿಸಿದ್ದಾರಾಗಿ ಮಲೆನಾಡನ್ನು ಕುರಿತು ಅಧ್ಯಯನ ನಡೆಸುವ ಸಂಶೋಧಕರಿಗೆ ಇವು ಅಧಿಕೃತ ಆಕರಗಳಾಗುತ್ತವೆ.

ಗ್ರಾಮೀಣ ಪ್ರದೇಶದಲ್ಲಿ ಅಕೃತಕ ಬದುಕು ನಡೆಸಿದ ಪುಟ್ಟಣ್ಣನವರಲ್ಲಿರುವ ಅನುಭವ ದ್ರವ್ಯ ಅಮೂಲ್ಯವೂ ಅಪಾರವೂ ಆಗಿದ್ದು ಈ ಲೋಕಜ್ಞಾನದಿಂದ ಪುಷ್ಟಿಗೊಂಡ ವ್ಯುತ್ಪತ್ತಿ ಪ್ರಧಾನ ಪ್ರತಿಭೆ ಅವರದಾಗಿದೆ. ಈ ಸೃಷ್ಟಿಶಕ್ತಿಯೂ ಬೆಳಕಿಗೆ ಬಂದಿದ್ದು ಸಂಕೋಚ ಸ್ವಭಾವದ ಲೇಖಕರ ಸ್ವಂತ ಆಕಾಂಕ್ಷೆಯಿಂದಲ್ಲ. ನಾಡಿನ ಹಿರಿಯ ಸಾಹಿತಿಗಳ, ದೇಶಭಕ್ತ ಸ್ವಾತಂತ್ರ್ಯ ಹೋರಾಟಗಾರರ ಒತ್ತಾಸೆಯಿಂದ. ಅದಕ್ಕೆ ಕಟ್ಟುಬಿದ್ದ ಪುಟ್ಟಣ್ಣ ಬಲ್ಲಂತೆ ಬರೆಯುತ್ತ ಹೋಗಿದ್ದಾರೆ. ಸಾಹಿತಿ ಪ್ರಭುಶಂಕರರು ಇದನ್ನು ಹಸನುಗೊಳಿಸಿದ್ದಾರೆ.

ಪುಟ್ಟಣ್ಣನವರ ಬರವಣಿಗೆಯ ಶೈಲಿ ಮುಗ್ಧ ಮಾತುಗಳದಾಗಿದ್ದು ಜಾನಪದದ ಸೊಗಡಿನಿಂದ ಕೂಡಿದೆ. ಜಾಣ ನುಡಿಗಟ್ಟುಗಳು, ನಿತ್ಯಾನುಭವದ ದೃಷ್ಟಾಂತಗಳು, ನವಿರು ಹಾಸ್ಯ ಲೇಪಿತ ವಾಕ್ಯಗಳ ಮುಖೇನ ಸಾಂಸ್ಕೃತಿಕ ಸಾಮಾಜಿಕ ಚಾರಿತ್ರಿಕವಾದ ಮಹತ್ವದ ಸಂಗತಿಗಳನ್ನು ಸ್ವಾರಸ್ಯಕರವಾಗಿ ನಿರೂಪಿಸಿದ್ದಾರೆ. ಹೀಗಾಗಿ ಈ ಕೃತಿಗೆ ಅಲ್ಲಲ್ಲಿ ಕಾದಂಬರಿಯ ಸೊಗಸು ಪ್ರಾಪ್ತವಾಗುತ್ತದೆ. ಮಲೆನಾಡ ಬದುಕಿನ ಕೆಲವು ಮಗ್ಗಲುಗಳನ್ನು – ಹಬ್ಬಗಳು, ಮೀನು ಬೇಟೆ, ಶಿಕಾರಿ, ಹುಟ್ಟು, ಸಾವು, ಮದುವೆ ಮುಂತಾದ ಸಂದರ್ಭಗಳಲ್ಲಿನ ವಿಧಿ ವಿಧಾನಗಳನ್ನು – ಕುರಿತು ಈ ಪ್ರದೇಶದ ಇತರ ಕೆಲವು ಹಿರಿಯರು ಪರಿಣಿತರು ಬರೆದಿದ್ದಾರಾದರೂ ಅವರು ಪುಟ್ಟಣ್ಣನವರ ಮಾದರಿಯನ್ನೇ ಅನುಸರಿಸಿದ್ದಾರೆ. ಪುಟ್ಟಣ್ಣನವರದು ನಿರ್ಲಿಪ್ತ ದೃಷ್ಟಿ. ಯಾವ ಜನವರ್ಗವನ್ನಾಗಲೀ ಅವರ ವ್ಯವಹಾರಗಳನ್ನಾಗಲಿ ತೆಗಳುವ ಅಥವಾ ವೈಭವೀಕರಿಸುವ ಉದ್ದೇಶ ಅವರಿಗಿಲ್ಲ. ಕ್ರೌರ್ಯ, ಮೌಢ್ಯ, ದುಷ್ಟ ಪದ್ಧತಿಗಳನ್ನು ವಿರೋಧಿಸುವಾಗಲೂ ಆವೇಶಕ್ಕೊಳಗಾಗದೆ ಸಂಯಮದಿಂದ ಸೂಚ್ಯವಾಗಿ ನಿರೂಪಿಸುವ ರೀತಿ ಅವರದು.

ಒಂದು ಪ್ರದೇಶದ ಸಮಷ್ಟಿ ಜೀವನ ಕ್ರಮವನ್ನು ಕಾಣಿಸಿರುವಂತೆಯೇ ಈ ಕೃತಿ ವ್ಯಷ್ಟಿನೆಲೆಯಲ್ಲಿ ಶ್ರೇಷ್ಠ ವ್ಯಕ್ತಿಯೊಬ್ಬರ ಅನುಕರಣೀಯ ಆದರ್ಶ ಬದುಕನ್ನೂ ಕಂಡರಿಸುತ್ತದೆ. ಪುಟ್ಟಣ್ಣನವರ ಆತ್ಮಕಥೆಯಾಗಿ ರೂಪಪಡೆದಿರುವ ಎರಡನೆಯ ಭಾಗ ತೂದೂರು ದೊಡ್ಡಮನೆ, ಮನೆತನಗಳ ಘನತೆ ಗೌರವಗಳ ಸ್ಥೂಲ ಪರಿಚಯದಿಂದ ಆರಂಭವಾಗುತ್ತದೆ. ನಂತರದಲ್ಲಿ ತಮ್ಮ ಹುಟ್ಟು, ಬಾಲ್ಯ, ವಿದ್ಯಾಭ್ಯಾಸಗಳನ್ನು ನೆನಪಿಸಿಕೊಳ್ಳುವ ನೆಪದಲ್ಲಿ ೨೦ನೇ ಶತಮಾನದ ಆರಂಭಕಾಲದ ಕೌಟುಂಬಿಕ ಮತ್ತು ಶೈಕ್ಷಣಿಕ ಪರಿಸರಗಳನ್ನು ಪುಟ್ಟಣ್ಣ ವಿವೇಚಿಸಿದ್ದಾರೆ. ತಂದೆಯವರ ಮಮತೆಯೇ ಕಾರಣವಾಗಿ ಹೆಚ್ಚಿನ ವಿದ್ಯೆಯಿಂದ ವಂಚಿತರಾಗಿ ಮನೆಯಲ್ಲೇ ನಿಂತು ಕಠಿಣವೂ ಕೌಶಲಪೂರ್ಣವೂ ಆದ ಕೃಷಿ ಕೆಲಸಗಳನ್ನು ನಿರ್ವಹಿಸಿದ ಪರಿಯನ್ನು ವರ್ಣಿಸುವಾಗ ಸ್ಥಿತಿವಂತರ ಮನೆಯ ಪುಟ್ಟಣ್ಣ ಮಾನಸಿಕವಾಗಿ ಕುಗ್ಗದೆ ಹೆಮ್ಮೆಪಟ್ಟುಕೊಳ್ಳುತ್ತಾರೆ. ಹೀಗೆ ದುಡಿಯುತ್ತಿದ್ದುದಲ್ಲದೆ ವ್ಯವಸಾಯದಲ್ಲಿ ವೈಜ್ಞಾನಿಕ ವಿಧಾನಗಳನ್ನು ಅನುಸರಿಸಿ ಹೆಚ್ಚು ಇಳುವರಿ ಪಡೆದು ಇತರರಿಗೆ ಮಾದರಿಯಾಗುತ್ತಾರೆ. ಬೇಸಿಗೆ ಬೆಳೆ, ಕೂಡು ಬೇಸಾಯ ಪದ್ಧತಿಗಳನ್ನು ಮಲೆನಾಡಿಗೆ ಪರಿಚಯಿಸಿದ್ದು ಅವರ ಹೆಚ್ಚುಗಾರಿಕೆ. ರೈತರ ಬದುಕನ್ನು ಹಸನುಗೊಳಿಸಲು ಅವರು ಜಾರಿಗೊಳಿಸಿದ 'ವಿಕಾಸಸೂಚಿ' ಯೋಜನೆ ನಾಡಿನ ನಾಯಕರಿಂದಲೂ ಪ್ರಶಂಸೆ ಪಡೆಯುತ್ತದೆ. ಪುಟ್ಟಣ್ಣನವರ ಅಷ್ಟಿಷ್ಟು ಆತ್ಮಪ್ರತ್ಯಯದಿಂದಲೇ ನಿರೂಪಿತವಾಗಿರುವ ಈ ಕೃಷಿಕ ಜೀವನ ಆತ್ಯಹತ್ಯಾಭಿಮುಖಿಗಳಾಗಿರುವ ಇಂದಿನ ರೈತರಲ್ಲಿ ಭರವಸೆ ಮೂಡಿಸುವಂತಿದೆ.

ಬಾಲಕ ಪುಟ್ಟಣ್ಣ ತೀರ್ಥಹಳ್ಳಿಯಲ್ಲಿ ಶಾಲಾ ಶಿಕ್ಷಣ ಪಡೆಯುತ್ತಿದ್ದಾಗ ಅಲ್ಲಿಗೆ ಬಂದಿದ್ದ ಮಹಾತ್ಮಾ ಗಾಂಧಿ ಎಳೆಯನ ಎದೆಯಲ್ಲಿ ಬಿತ್ತಿದ ಜೀವನ ಮೌಲ್ಯಗಳು, ಸ್ವಾತಂತ್ರ್ಯಪ್ರೇಮ, ಯೌವ್ವನದ ಕಾಲಕ್ಕೆ ಹೆಮ್ಮರವಾಗಿ ಬೆಳೆದಿದ್ದವು. ಹೀಗಾಗಿ ಸರಳಜೀವನ, ಖಾದಿಧಾರಣೆ, ಸಸ್ಯಾಹಾರ, ಪಾನನಿರೋಧ ಇತ್ಯಾದಿಗಳನ್ನು ಪುಟ್ಟಣ್ಣ ಕಟ್ಟುನಿಟ್ಟಾಗಿ ಅನುಸರಿಸಿದರು. ಇವುಗಳೊಂದಿಗೆ ಬ್ರಹ್ಮಚರ್ಯವೂ ಸೇರಿತ್ತಾಗಿ ಪುಟ್ಟಣ್ಣ ಮದುವೆಗೆ ಮುಖ ತಿರುಗಿಸಿದ್ದರು. ಒತ್ತಾಯಕ್ಕೆ ಮಣಿದು ತನ್ನಂತೆ ಬದುಕಲೊಪ್ಪಿದ ಹೆಣ್ಣಿನೊಂದಿಗೆ ಹಲವರ ವಿರೋಧಗಳ ನಡುವೆ ಸರಳ ವಿವಾಹ ಮಾಡಿಕೊಂಡರು. ನಂತರ ಸರಳ ವಿವಾಹ ಕುರಿತು ಪ್ರಚಾರವನ್ನೂ ಕೈಗೊಂಡರು. ದಾಂಪತ್ಯದ ಬಂಡಿ ಏರಿಳಿತಗಳ ದಾರಿಯಲ್ಲಿ ಸಾಗುತ್ತಿತ್ತು. ಪುಟ್ಟಣ್ಣ "ಜೀವನ ಸೌಂದರ್ಯ"ವನ್ನು ಸವಿದರು. ಗಿಡಮರಗಳ ಸೌಷ್ಟವ, ಪ್ರಾಣಿಪಕ್ಷಿಗಳ ಕೂಗು ಕೂಜನ, ಮುಪ್ಪಿನ ಮಂದಿ ಹಸುಗೂಸುಗಳಲ್ಲಿ ತೋರುವ ಮಮತೆ ಇವೇ ಪುಟ್ಟಣ್ಣನವರು ಕಾಣುವ ಸೌಂದರ್ಯಾಂಶಗಳು. ಇವನ್ನು ವರ್ಣಿಸುವಾಗ ಲೇಖಕರ ಚಿತ್ರಕಶಕ್ತಿ ಗರಿಗೆದರುತ್ತದೆ.

ಭಾರತ ಸ್ವಾತಂತ್ರ್ಯ ಚಳವಳಿ ಮೈಸೂರು ಅರಸೊತ್ತಿಗೆ ವಿರುದ್ಧದ ಹೋರಾಟಗಳಲ್ಲಿ ಸಕ್ರಿಯರಾಗಿದ್ದ ಪುಟ್ಟಣ್ಣ ಸ್ವಾತಂತ್ರ್ಯಾನಂತರ ಗ್ರಾಮ ಪಂಚಾಯ್ತಿ ಅಧ್ಯಕ್ಷತೆ, ತಾಲ್ಲೂಕು ಬೋರ್ಡ್ ಸದಸ್ಯತ್ವ ಮುಂತಾದ ಸ್ಥಾನಗಳನ್ನಲಂಕರಿಸಿ ಜನನಾಯಕರಾಗಿ ಸಮಾಜಸೇವೆ ಮಾಡಿದ್ದಾರೆ. ಮುಸಲ್ಮಾನ ಮಿತ್ರರೊಬ್ಬರ ಸಲಹೆ ಮೇರೆಗೆ ಮದುವೆಗೆ ಮನಸು ಮಾಡಿದ್ದು, ಕ್ರೈಸ್ತಧರ್ಮೀಯನಾದ ಮನೆಯಾಳು ರಾಜ ಕೊನೆಯುಸಿರೆಳೆದಾಗ ಶವಪೆಟ್ಟಿಗೆ ತಯಾರಿಸಿ ತಾವೇ ಹೆಗಲುಕೊಟ್ಟದ್ದು ಮುಂತಾದ ನಡೆಗಳು ಅವರಲ್ಲಿದ್ದ ಸಮಾನತೆ ಸಹಬಾಳ್ವೆಗಳ ತುಡಿತಕ್ಕೆ ದ್ಯೋತಕವಾಗಿವೆ. ಸ್ನೇಹಜೀವಿ ಪುಟ್ಟಣ್ಣನವರಿಗೆ ಸಾಹಿತಿಗಳೊಂದಿಗೆ ಇದ್ದ ನಂಟು ವಿಶೇಷ ಉಲ್ಲೇಖನಾರ್ಹ. ಮಲೆನಾಡಿಗೆ ಬರುವ ಅನೇಕ ಸಾಹಿತಿಗಳಿಗೆ ತ್ಯಾನಂದೂರು ಮನೆ ತಂಗುದಾಣವಾಗಿ ಪರಿಣಮಿಸಿತ್ತು.

ಮಲೆನಾಡಿನ ಏಳ್ಗೆಗೆ ಕಾರಣರಾದ, ಕೀರ್ತಿತಂದ ಅನೇಕ ಮಹನೀಯರನ್ನು ಪುಟ್ಟಣ್ಣ ಗೌರವದಿಂದ ಸ್ಮರಿಸಿದ್ದಾರೆ. ಅಂತೆಯೇ ಮರೆಯಾಗುತ್ತಿರುವ ಮಲೆನಾಡಿನ ಮೀಸಲು ಸಂಸ್ಕೃತಿ, ನಾಶವಾಗುತ್ತಿರುವ ಪರಿಸರ, ಅಧೋಗತಿಗಿಳಿದಿರುವ ಜನನಾಯಕರ ನೈತಿಕತೆ ಇತ್ಯಾದಿಗಳ ಬಗ್ಗೆ ವಿಷಾದ ವ್ಯಥೆಗಳನ್ನು ವ್ಯಕ್ತಪಡಿಸಿದ್ದಾರೆ. ಎಂಟು ದಶಕಗಳ (೧೯೧೭ – ೧೯೯೮) ಸಾರ್ಥಕ ಬದುಕಿನ ನಂತರ ತೀರಿಕೊಂಡ ವೈ.ಎಸ್. ಪುಟ್ಟಣ್ಣನವರೂ ಸ್ಮರಣೀಯರಾದ ಮಲೆನಾಡ ಮಹನೀಯರಲ್ಲೊಬ್ಬರಾಗಿದ್ದಾರೆ. ಮಲೆನಾಡಿನ ಅನನ್ಯ ಸಂಸ್ಕೃತಿಯನ್ನು ದಾಖಲಿಸಿರುವ ಈ ಕೃತಿ ಒಂದು ಅಪೂರ್ವ ಕೃತಿ. ಅದೇ ಸಂಸ್ಕೃತಿ ಮೈವೆತ್ತಂತೆ ಜೀವನ ನಡೆಸಿದ ಪುಟ್ಟಣ್ಣ ಒಬ್ಬ ಅಪರೂಪದ ವ್ಯಕ್ತಿ.

ಪುಸ್ತಕದ ಈ ಪರಿಷ್ಕೃತ ರೂಪಕ್ಕೆ ಕಾರಣರಾದವರೆಲ್ಲರೂ ಅಭಿನಂದನಾರ್ಹರು.

**–ಡಾ. ಜೆ.ಕೆ.ರಮೇಶ್**

**'ಹೊಸ ಮನುಷ್ಯ' ಓದುಗರೆಲ್ಲರಿಗೆ**
**ಬೌದ್ಧ ಪೌರ್ಣಿಮೆಯ ಹಾರ್ದಿಕ ಶುಭಾಶಯಗಳು**



**-ನ್ಯಾ. ಎ.ಜೆ. ಸದಾಶಿವ**
**ಮತ್ತು ಕುಟುಂಬ**
**ಬೆಂಗಳೂರು**

---

'ಹೊಸ ಮನುಷ್ಯ' ಓದುಗರೆಲ್ಲರಿಗೆ
ಹಾರ್ದಿಕ ಶುಭಾಶಯಗಳು




-ದವಲ್ ಸಾಬ್ ಅರಳಿಕಟ್ಟೆ
ಮತ್ತು ಕುಟುಂಬ
ಫ್ಯಾಬ್ರಿಕೇಷನ್ ಗುತ್ತಿಗೆದಾರರು
ಯಾಲಕ್ಕಿ ಶೆಟ್ರ ಕಾಲೋನಿ
ಧಾರವಾಡ

**'ಹೊಸ ಮನುಷ್ಯ' ಓದುಗರೆಲ್ಲರಿಗೆ ಬುದ್ಧ ಪೂರ್ಣಿಮೆಯ ಹಾರ್ದಿಕ ಶುಭಾಶಯಗಳು**



**-ಕೆ. ಜಿ. ಶ್ರೀನಿವಾಸ್**
**ಸಪ್ತಗಿರಿ ಲ್ಯಾಂಡ್ ಡೆವಲಪರ್ಸ್**
**ನಂ. 301, ಸಪ್ತಗೃಹ ಅಪಾರ್ಟ್‌ಮೆಂಟ್ಸ್**
**2ನೇ ಮುಖ್ಯ ರಸ್ತೆ, 16ನೇ ಅಡ್ಡ ರಸ್ತೆ**
**ಮಲ್ಲೇಶ್ವರಂ, ಬೆಂಗಳೂರು - 560 003**

**ತಿಂಗಳ ಸಾಲುಗಳು...**




**ಪತ್ರಿಕೆಗೆ ಶುಭ ಕೋರುತ್ತಾ...**

**–ಸಿ. ಪ್ರಶಾಂತ್**
**ದೀಪಾ**
**ಕು. ಅನಘ**
ಬೆಂಗಳೂರು

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper** RNI No. KARKAN/2012/47568
Rgd No. KA/SK/SMG-1209/2016-18

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204( Karnataka)